# 51ನೇ
# ವಾರ್ಷಿಕ ವರದಿ
# 2016-17



















MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ಬೆಂಗಳೂರು

## ಪರಿವಿಡಿ


| | ಪುಟ ಸಂಖ್ಯೆ |
|---|---|
| ಸೂಚನೆ | 03 |
| ನಿರ್ದೇಶಕರ ವರದಿ | 04 |
| ನಿರ್ದೇಶಕರುಗಳ ವರದಿಗೆ ಅನುಬಂಧ | 13 |
| ಸಹ ಕಂಪನಿಗಳ ಹಣಕಾಸಿನ ಹೇಳಿಕೆ (ಫಾರಂ ಎಓಸಿ-1) | 24 |
| ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಟೀಕೆಗಳು | 25 |
| ಹತ್ತು ವರ್ಷಗಳ ಸಾಧನೆ | 26 |
| ಸದಸ್ಯರಿಗೆ ಸ್ವತಂತ್ರ ಲೆಕ್ಕಪರಿಶೋಧಕರ ವರದಿ | 29 |
| 31ನೇ ಮಾರ್ಚ್ 2017ಕ್ಕೆ ಮುಕ್ತಾಯಗೊಂಡ ವರ್ಷದ ಲೆಕ್ಕ ಪತ್ರಗಳು | 38 |

## ನಿರ್ದೇಶಕರ ಮಂಡಳಿ

| | | | |
|---|---|---|---|
| **ಶ್ರೀ ಹಂಪನಗೌಡ ಬಾದರ್ಲಿ,** | ಅಧ್ಯಕ್ಷರು | **ಶ್ರೀ ಎನ್. ಬಾಲರಾಜ್** | ನಿರ್ದೇಶಕರು |
| **ಡಾ. ಜಿ.ಸಿ. ಪ್ರಕಾಶ್,** ಭಾ.ಆ.ಸೇ. | ವ್ಯವಸ್ಥಾಪಕ ನಿರ್ದೇಶಕರು | **ಶ್ರೀ ಆರ್.ತಮ್ಮಣ್ಣ** | ನಿರ್ದೇಶಕರು |
| **ಶ್ರೀಮತಿ ರೇಣುಕ ಚಿದಂಬರಂ,** ಭಾ.ಆ.ಸೇ. | ನಿರ್ದೇಶಕರು | **ಶ್ರೀ ಎಂ.ಎಸ್. ಶ್ರೀಧರ** | ನಿರ್ದೇಶಕರು |
| **ಡಾ. ಏಕ್‌ರೂಪ್ ಕೌರ್,** ಭಾ.ಆ.ಸೇ. | ಸ್ವತಂತ್ರ ನಿರ್ದೇಶಕರು | **ಶ್ರೀ ಗುಣ ಶೇಖರ** | ನಿರ್ದೇಶಕರು |
| **ಶ್ರೀ ದರ್ಪಣ್ ಜೈನ್,** ಭಾ.ಆ.ಸೇ. | ಸ್ವತಂತ್ರ ನಿರ್ದೇಶಕರು | **ಶ್ರೀ ಚೆಲುವರಾಜು** | ನಿರ್ದೇಶಕರು |
| **ಶ್ರೀ ಎನ್. ಜಯರಾಮ್,** ಭಾ.ಆ.ಸೇ. | ನಿರ್ದೇಶಕರು | **ಶ್ರೀ ಕೆ.ವೆಂಕಟಸ್ವಾಮಪ್ಪ** | ನಿರ್ದೇಶಕರು |
| **ಶ್ರೀಮತಿ ಅನುರಾಧ ಬಸವರಾಜ್ ತಪ್ಲಿ** | ನಿರ್ದೇಶಕರು | **ಶ್ರೀ ರಫಿಕ್ ಅಹಮದ್ ಬಿ.ಪಾಕಲಿ** | ನಿರ್ದೇಶಕರು |
| **ಶ್ರೀ ಸನತ್‌ಕುಮಾರ್ ಎಸ್.ಆರ್.** | ನಿರ್ದೇಶಕರು | | |

---

| | |
|---|---|
| **ಶ್ರೀ ಎ.ಎಂ. ಚಂದ್ರಪ್ಪ** | ಮುಖ್ಯ ಹಣಕಾಸು ಅಧಿಕಾರಿ |
| **ಶ್ರೀಮತಿ ಶ್ರೀದೇವಿ ಬಿ.ಎನ್.** | ಕಂಪನಿ ಕಾರ್ಯದರ್ಶಿ |

---

**ನೋಂದಾಯಿತ ಕಛೇರಿ :** ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ , ಬೆಂಗಳೂರು – 560 052.

**ಶಾಖಾ ಕಛೇರಿಗಳು :** ಬೆಂಗಳೂರು, ಮೈಸೂರು, ದಾವಣಗೆರೆ, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಬೆಳಗಾವಿ ಮುಂಬಯಿ, ನವದೆಹಲಿ

**ಮಾರಾಟ ಕಛೇರಿಗಳು / ಘಟಕಗಳು :**

● ವಿಜಯಪುರ ● ದಾವಣಗೆರೆ ● ಕಲಬುರಗಿ ● ಹಾಸನ ● ಹುಬ್ಬಳ್ಳಿ ● ಮಂಗಳೂರು ● ಮೈಸೂರು
● ಭಿವಂಡಿ ● ಕಾನ್ಪುರ ● ಘಜ಼ಿಯಾಬಾದ್ ● ಜೈಪುರ್

**ಬ್ಯಾಂಕರ್‌ಗಳು :** ವಿಜಯಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಹೆಚ್‌ಡಿಎಫ್‌ಸಿ ಬ್ಯಾಂಕ್

**ಲೆಕ್ಕಪರಿಶೋಧಕರು :** **ಮೆ|| ಪಿ. ಚಂದ್ರಶೇಖರ್,** ಎಲ್‌ಎಲ್‌ಪಿ, ಚಾರ್ಟರ್ಡ್ ಅಕೌಂಟೆಂಟ್ಸ್

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

**ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ,**
**ಬೆಂಗಳೂರು – 560 052.**

## ಸೂಚನೆ

ಅಲ್ಪಕಾಲಿಕ ಸೂಚನೆ ಮೇರೆಗೆ ಕೆಳಕಂಡ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ **51ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು** ಎಂಎಸ್‌ಐಎಲ್ ಹೌಸ್, ನಂ.36, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560 052 ಇಲ್ಲಿರುವ ನೋಂದಾಯಿತ ಕಚೇರಿಯಲ್ಲಿ **25ನೇ ಸೆಪ್ಟೆಂಬರ್ 2017ರ ಸೋಮವಾರ ಬೆಳಿಗ್ಗೆ 11.00 ಗಂಟೆಗೆ** ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

### ಸಾಮಾನ್ಯ ವ್ಯವಹಾರ :

**ಐಟಂ ನಂ. 1 – ಹಣಕಾಸು ಹೇಳಿಕೆಗಳ ಸ್ವೀಕಾರ:**

2017ರ ಮಾರ್ಚ್ 31ರಲ್ಲಿದ್ದಂತೆ ಪರಿಶೋಧಿತ ಸ್ಥಿತಿ ವಿವರಣೆ ಪಟ್ಟಿ, ಇದೇ ದಿನಾಂಕದ ವರ್ಷಾಂತ್ಯಕ್ಕೆ ಲಾಭ ಮತ್ತು ನಷ್ಟದ ಹೇಳಿಕೆ ಮತ್ತು ನಿರ್ದೇಶಕ ಮಂಡಳಿಯ (ಮಂಡಳಿ) ಮತ್ತು ಲೆಕ್ಕ ಪರಿಶೋಧಕರ ವರದಿ ಹಾಗೂ ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 146(6)ರನ್ವಯ ಭಾರತದ ಮಹಾ ಲೆಕ್ಕಪರಿಶೋಧಕರಿಂದ ಬಂದಿರುವ ಟೀಕೆಗಳು ಸೇರಿದಂತೆ 2017ರ ಮಾರ್ಚ್ 31ರ ವರ್ಷಾಂತ್ಯಕ್ಕೆ ಕಂಪನಿಯ ಹಣಕಾಸು ಹೇಳಿಕೆಗಳನ್ನು ಸ್ವೀಕರಿಸಿ, ಪರಿಗಣಿಸಿ, ಅಳವಡಿಸಿಕೊಳ್ಳುವುದು.

**ಐಟಂ ನಂ. 2 –** ಈಕ್ವಿಟಿ ಷೇರುಗಳ ಮೇಲೆ ಲಾಭಾಂಶ ಘೋಷಣೆ.

**ಐಟಂ ನಂ. 3 –** ಈ ಕೆಳಗಿನ ಠರಾವನ್ನು ಮಾರ್ಪಾಡು ಸಹಿತ ಅಥವಾ ಇರುವ ರೀತಿಯಲ್ಲೇ ಸಾಮಾನ್ಯ ಠರಾವಾಗಿ ಸೂಕ್ತವೆನಿಸಿದಲ್ಲಿ ಮಂಡಿಸುವ, ಹಾಗೂ ಭಾರತದ ಕಂಪ್ಟ್ರೋಲರ್ ಮತ್ತು ಮಹಾಲೇಖಪಾಲರಿಂದ (ಸಿ ಅಂಡ್ ಎಜಿ) ನೇಮಕವಾಗಿರುವ ಶಾಸನಬದ್ಧ ಲೆಕ್ಕಪರಿಶೋಧಕರಿಗೆ 31ನೇ ಮಾರ್ಚ್ 2018ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಸಂಭಾವನೆ ನಿಗದಿಪಡಿಸಲು ಪರಿಗಣಿಸುವುದಕ್ಕಾಗಿ:–

'ನಿರ್ಣಯಿಸಿರುವುದೇನೆಂದರೆ, ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 139(5)ರ ಮುನ್ನೇರ್ಪಾಡುಗಳ ಅನ್ವಯ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾರವರು ಹಣಕಾಸು ವರ್ಷ 2017–18ಕ್ಕಾಗಿ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ಮೆ॥ ಪಿ. ಚಂದ್ರಶೇಖರ್, ಎಲ್‌ಎಲ್‌ಪಿ, ಚಾರ್ಟರ್ಡ್ ಅಕೌಂಟೆಂಟ್ಸ್ (ನೋಂದಣಿ ಸಂಖ್ಯೆ 000580ಎಸ್)ರನ್ನು ನೇಮಿಸಿರುವುದನ್ನು ಈ ಮೂಲಕ ಗಮನಿಸಿದ್ದು, ಕಂಪನಿಯ ಸದರಿ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಸಂಭಾವನೆ ನಿಗದಿಪಡಿಸಲು ಕಂಪನಿಯ ನಿರ್ದೇಶಕರ ಮಂಡಳಿಗೆ ಅಧಿಕಾರ ನೀಡಲಾಗಿದೆ.'

**ಮಂಡಳಿಯ ಆದೇಶಾನುಸಾರ**
**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**
**ಸಹಿ/–**

ಸ್ಥಳ : ಬೆಂಗಳೂರು — **ಶ್ರೀದೇವಿ ಬಿ.ಎನ್.**
ದಿನಾಂಕ : 7, ಆಗಸ್ಟ್ 2017 — **ಕಂಪನಿ ಕಾರ್ಯದರ್ಶಿ**

**ಟಿಪ್ಪಣಿಗಳು :**

1. ವಾರ್ಷಿಕ ಸರ್ವ ಸದಸ್ಯರ ಸಭೆಗೆ ಹಾಜರಾಗಿ ಮತ ಚಲಾಯಿಸುವ ಹಕ್ಕುಳ್ಳ ಸದಸ್ಯರು ತಮ್ಮ ಬದಲಿಗೆ ಹಾಜರಾಗಿ, ಮತ ಚಲಾಯಿಸಲು ಪ್ರತಿನಿಧಿಯೋರ್ವರನ್ನು ನೇಮಿಸುವ ಹಕ್ಕನ್ನು ಹೊಂದಿರುತ್ತಾರೆ ಹಾಗೂ ಸದರಿ ಪ್ರತಿನಿಧಿಯು ಕಂಪನಿಯ ಸದಸ್ಯರಾಗಿ ಇರಬೇಕೆಂದೇನೂ ಇರುವುದಿಲ್ಲ. ಲಗತ್ತಿಸಿದ ಪ್ರಾಕ್ಸಿ ಫಾರಂ ಅನ್ನು ವಾರ್ಷಿಕ ಮಹಾಸಭೆ ಆರಂಭವಾಗುವ 48 ಗಂಟೆಯೊಳಗೆ ಕಂಪನಿಯ ನೋಂದಾಯಿತ ಕಚೇರಿಗೆ ಸಲ್ಲಿಸತಕ್ಕದ್ದು.

2. ಕಂಪನಿಯು ಸರ್ಕಾರಿ ಕಂಪನಿಯಾಗಿರುವುದರಿಂದ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರು ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 139(5)ರನ್ವಯ 2017–18ನೇ ವರ್ಷಕ್ಕೆ ಕಂಪನಿಯ ಶಾಸನ ಬದ್ಧ ಲೆಕ್ಕಪರಿಶೋಧಕರನ್ನು ನೇಮಿಸಿದ್ದಾರೆ.

**ಮಂಡಳಿಯ ಆದೇಶಾನುಸಾರ**
**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**
**ಸಹಿ/–**

ಸ್ಥಳ : ಬೆಂಗಳೂರು — **ಶ್ರೀದೇವಿ ಬಿ.ಎನ್.**
ದಿನಾಂಕ : 07.08.2017 — **ಕಂಪನಿ ಕಾರ್ಯದರ್ಶಿ**

## ನಿರ್ದೇಶಕರ ವರದಿ

ಸದಸ್ಯರಿಗೆ,

31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷಕ್ಕೆ ನಮ್ಮ ವ್ಯವಹಾರ ಮತ್ತು ಕಾರ್ಯಾಚರಣೆಗಳ ಬಗ್ಗೆ ವರದಿಯನ್ನು ಮಂಡಿಸಲು ನಾವು ಹರ್ಷಪಡುತ್ತೇವೆ.

**1. ಹಣಕಾಸಿನ ಮುಖ್ಯಾಂಶಗಳು:**

ಪರಾಮರ್ಶೆಯಲ್ಲಿರುವ ಅವಧಿಯಲ್ಲಿನ ನಿಮ್ಮ ಕಂಪನಿಯ ಸಾಧನೆ ಕೆಳಕಂಡಂತಿದೆ :

(ರೂ. ಲಕ್ಷಗಳಲ್ಲಿ)

| ವಿವರ | 2016-17 | 2015-16 |
|---|---|---|
| ವಹಿವಾಟು | 161407.70 | 151490.75 |
| ಬಡ್ಡಿ, ಸವಕಳಿ ಹಾಗೂ ತೆರಿಗೆಗಳು ಮತ್ತು ಹಿಂದಿನ ವರ್ಷದ ಹೊಂದಾಣಿಕೆಗಳಿಗೆ ಮುಂಚಿನ ಲಾಭ / ನಷ್ಟ | 5987.52 | 5801.24 |
| ಬಡ್ಡಿ | 2.44 | 145.35 |
| ಸವಕಳಿ | 285.21 | 255.39 |
| ತೆರಿಗೆಗೆ ಮುಂಚಿನ ಲಾಭ / (ನಷ್ಟ) | 5699.87 | 5400.50 |
| ತೆರಿಗೆಗೆ ಏರ್ಪಾಡು | | |
| – ಚಾಲ್ತಿ | 1978.80 | 1923.22 |
| – ಮುಂದೂಡಲಾದುದು | 37.48 | (167.21) |
| ಹಿಂದಿನ ವರ್ಷದ ಹೊಂದಾಣಿಕೆಗಳು | 17.89 | 38.67 |
| ತೆರಿಗೆ ನಂತರದ ಲಾಭ / (ನಷ್ಟ) | 3665.70 | 3605.82 |
| ಲಾಭಾಂಶ ಮತ್ತು ಲಾಭಾಂಶದ ಮೇಲಿನ ತೆರಿಗೆ | 237.39 | 243.06 |
| ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಹಿಂದಿನ ವರ್ಷದ ಶಿಲ್ಕು | 10452.41 | 7089.65 |
| ಸ್ಥಿತಿ ವಿವರಣಾ ಪತ್ರಕ್ಕೆ ಮುಂದುವರಿಸಿದ ಶಿಲ್ಕು | **13880.72** | **10452.41** |

ಕಂಪನಿಯ ವಿವಿಧ ವಿಭಾಗಗಳ ಮಾರಾಟ ಸಾಧನೆಯನ್ನು ಈ ಕೆಳಗೆ ನೀಡಲಾಗಿದೆ:

(ರೂ. ಲಕ್ಷಗಳಲ್ಲಿ)

| ವಿಭಾಗ | 2016-17 | 2015-16 |
|---|---|---|
| 1. ಪಾನೀಯ ವಿಭಾಗ | 133043.02 | 124739.79 |
| 2. ಚಿಟ್ ಫಂಡ್ಸ್ | 23311.33 | 21887.20 |
| 3. ಕಾಗದ | 4074.76 | 2261.95 |
| 4. ಗ್ರಾಹಕ ಉತ್ಪನ್ನಗಳು | 217.42 | 40.17 |
| 5. ಕೈಗಾರಿಕಾ ಉತ್ಪನ್ನಗಳು | 162.62 | 1581.67 |
| 6. ಪ್ರವಾಸ ಮತ್ತು ಪ್ರಯಾಣ | 586.46 | 975.94 |
| 7. ಫಾರ್ಮಸಿ | 12.09 | 4.03 |
| **ಒಟ್ಟು** | **161407.70** | **151490.75** |

ಕಂಪನಿಯು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ (ಕೆಎಸ್ಐಐಡಿಸಿ) ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟ ಸಂಸ್ಥೆಯಾಗಿದೆ. ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು 2014ರ ನಿಯಮ 6ರ ಎರಡನೇ ಉಪಬಂಧದ ಅನ್ವಯ ಕಂಪನಿಯು ನಿಬಂಧನೆಗಳನ್ನು ಪರಿಪಾಲಿಸಿದೆ ಮತ್ತು ವಿನಾಯ್ತಿಯನ್ನು ಆಯ್ಕೆ ಮಾಡಿಕೊಂಡಿದೆ. ಆದ್ದರಿಂದಾಗಿ 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷಕ್ಕೆ ಕ್ರೋಡೀಕರಿಸಿದ ಹಣಕಾಸಿನ ಹೇಳಿಕೆಯನ್ನು ಸಿದ್ಧಪಡಿಸಿರುವುದಿಲ್ಲ.

**2. ಕಂಪನಿಯ ವ್ಯವಹಾರಗಳ ವಿವರ ಮತ್ತು ಭವಿಷ್ಯದ ಹೊರನೋಟ :**

**(i) ಪಾನೀಯ ವಿಭಾಗ :** ಕರ್ನಾಟಕ ಸರ್ಕಾರವು ಇತ್ತೀಚೆಗೆ ರಾಜ್ಯದ ಎಲ್ಲಾ ಅಸೆಂಬ್ಲಿ ಕ್ಷೇತ್ರಗಳಲ್ಲಿ ತೆರೆಯಲು CL 11C ಪರವಾನಗಿ ಅಡಿಯಲ್ಲಿ ಎಂಎಸ್ಐಎಲ್‌ಗೆ 463 ಮದ್ಯ ಮಾರಾಟ ಮಳಿಗೆಗಳ ಜೊತೆಗೆ ಹೆಚ್ಚುವರಿಯಾಗಿ 900 ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ಮಂಜೂರು ಮಾಡಿದೆ. ನಿಗದಿತ ಕಾಲಾವಧಿ ಒಳಗೆ ಈ ಹೆಚ್ಚುವರಿ ಮಳಿಗೆಗಳನ್ನು ತೆರೆಯಲು ವಿಭಾಗವು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಒಟ್ಟಾರೆ ಮಂಜೂರಾದ ಮಳಿಗೆಗಳ ಪೈಕಿ 31ನೇ ಮಾರ್ಚ್, 2017ರಂದು ಇದ್ದಂತೆ 411 ಚಿಲ್ಲರೆ ಮಾರಾಟ ಮಳಿಗೆಗಳು ಕರ್ನಾಟಕದಾದ್ಯಂತ ಕಾರ್ಯಾಚರಣೆ ನಡೆಸುತ್ತಿವೆ. ಹಿಂದಿನ ವರ್ಷ ರೂ.124739.79 ಲಕ್ಷಗಳ ವಹಿವಾಟನ್ನು ಸಾಧಿಸಿರುವುದಕ್ಕೆ ಹೋಲಿಸಿದರೆ ಪಾನೀಯ ವಿಭಾಗವು ಪ್ರಸಕ್ತ ವರ್ಷದಲ್ಲಿ ರೂ.133043.02 ಲಕ್ಷಗಳ ವಹಿವಾಟನ್ನು ಸಾಧಿಸಿದೆ.

ಘನ ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಮದ್ಯ ಮಾರಾಟವನ್ನು ನಿಷೇಧಿಸಿ ತೀರ್ಪು ಹೊರಡಿಸಿದ ಪರಿಣಾಮವಾಗಿ, ಸದರಿ ತೀರ್ಪಿನಿಂದ ತೊಂದರೆಗೆ ಒಳಗಾದ ಮದ್ಯ ಮಾರಾಟ ಮಳಿಗೆಗಳನ್ನು ಮೊದಲ ಆದ್ಯತೆ ಮೇರೆಗೆ ಸ್ಥಳಾಂತರಿಸಲು ವಿಭಾಗವು ಗಮನ ಕೇಂದ್ರೀಕರಿಸಿದೆ.

ವಿಭಾಗವು 463 ಕೋಟಾದ ಅಡಿಯಲ್ಲಿನ ಉಳಿಕೆ ಚಿಲ್ಲರೆ ಮಾರಾಟ ಮಳಿಗೆಗಳನ್ನು ತೆರೆಯಲು ಒಳ್ಳೆಯ ವ್ಯಾಪಾರದ ಅವಕಾಶವಿರುವ ಸೂಕ್ತವಾದ ಸ್ಥಳವನ್ನು ಗುರುತಿಸಲು ತೀವ್ರ ಪ್ರಯತ್ನ ಮಾಡುತ್ತಿದೆ.

**(ii) ಚಿಟ್ ಫಂಡ್ಸ್ ವಿಭಾಗ :** ಈ ವಿಭಾಗವು ಹಿಂದಿನ ವರ್ಷ ರೂ.2188.20 ಲಕ್ಷಗಳ ವಹಿವಾಟು ನಡೆಸಿದ್ದರೆ, ಪ್ರಸಕ್ತ ವರ್ಷ ರೂ.23311.33 ಲಕ್ಷ ವಹಿವಾಟನ್ನು ಸಾಧಿಸಿ 6.5% ಗಮನಾರ್ಹ ಪ್ರಗತಿ ದಾಖಲಿಸಿದೆ. ತನ್ನ ವಹಿವಾಟನ್ನು ಇನ್ನೂ ಹೆಚ್ಚು ಮಾಡುವ ದೃಷ್ಟಿಯಿಂದ ಕೆಲವು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿಲ್ಲದ ಶಾಖೆಗಳನ್ನು ಕಾರ್ಯಸಾಧುವಾದ ಪ್ರದೇಶಗಳಿಗೆ ಸ್ಥಳಾಂತರಿಸಲು ವಿಭಾಗವು ಯೋಜನೆ ಮಾಡುತ್ತಿದೆ ಹಾಗೂ ಶಿವಮೊಗ್ಗದಲ್ಲಿನ ಹೊಸ ಚಿಟ್ ಫಂಡ್ ಶಾಖೆಯನ್ನು ಅನಾವರಣಗೊಳಿಸಲಾಗುತ್ತಿದೆ.

## ನಿರ್ದೇಶಕರ ವರದಿ (ಮುಂದುವರೆದುದು)

ಚಂದಾದಾರರ ನಿರೀಕ್ಷೆ ಮತ್ತು ಆಶೋತ್ತರಗಳನ್ನು ಈಡೇರಿಸುವ ದೃಷ್ಟಿಯಿಂದ ಮೊಬೈಲ್ ಆ್ಯಪ್ ಮೂಲಕ ಚಿಟ್‌ಗಳನ್ನು ನಡೆಸಲು ಮತ್ತು ಹಲವಾರು ಗ್ರಾಹಕ ಸ್ನೇಹಿ ವೈಶಿಷ್ಟ್ಯತೆಗಳು ಒಳಗೊಂಡಂತೆ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಅಡಚಣೆರಹಿತ ಕಾರ್ಯಾಚರಣೆಗಾಗಿ ವಿಭಾಗವು ಹೊಸ ತಂತ್ರಾಂಶ ಮತ್ತು ಹಾರ್ಡ್‌ವೇರ್, ಅಳವಡಿಸಲು ಕ್ರಮ ಕೈಗೊಂಡಿದೆ. ಇದರ ಜೊತೆಗೆ ವರ್ಷಪೂರ್ತಿ ಎಂಎಸ್‌ಐಎಲ್ ಚಿಟ್‌ಗಳ ಬಗ್ಗೆ ಸಾರ್ವಜನಿಕರಿಗೆ ಹೆಚ್ಚು ತಿಳುವಳಿಕೆ ಮೂಡಿಸಲು ಮುದ್ರಣ ಮಾಧ್ಯಮ/ವಿದ್ಯುನ್ಮಾನ ಮಾಧ್ಯಮಗಳಲ್ಲಿ ಜಾಹೀರಾತು ಪ್ರಚಾರ ನೀಡಲು ಯೋಜಿಸಲಾಗುತ್ತಿದೆ.

**(iii) ಕಾಗದ ವಿಭಾಗ :** ಈ ವಿಭಾಗವು ಹಿಂದಿನ ವರ್ಷದ ರೂ.2261.95 ಲಕ್ಷಗಳ ವಹಿವಾಟು ನಡೆಸಿದ್ದರೆ, 2016-17ರ ಸಾಲಿನಲ್ಲಿ ರೂ.4074.76 ಲಕ್ಷಗಳ ಸಂಚಿತ (ನೋಟ್ ಪುಸ್ತಕಗಳು ಮತ್ತು ಲೇಖನ ಸಾಮಗ್ರಿ) ವಹಿವಾಟನ್ನು ಸಾಧಿಸಿದೆ. ಲೇಖನ ಸಾಮಗ್ರಿಗಳ ಮಾರಾಟವು ವರ್ಷದಿಂದ ವರ್ಷಕ್ಕೆ ತೀವ್ರ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದ್ದು, ಕಾಗದ ವಿಭಾಗವು ಕಳೆದ 10 ವರ್ಷಗಳಿಗೆ ಹೋಲಿಸಿದರೆ 2016-17ರ ಪ್ರಸಕ್ತ ಸಾಲಿನಲ್ಲಿ ಉತ್ತಮ ಸಾಧನೆ ಮಾಡುವ ಸಾಮರ್ಥ್ಯಗಳಿಸಿಕೊಂಡಿದೆ.

2015-16ರ ವರ್ಷಾವಧಿಯಲ್ಲಿ 1830.70 ಎಂಟಿ ಲೇಖನ ಸಾಮಗ್ರಿಗಳನ್ನು ಮಾರಾಟ ಮಾಡಿದ್ದರೆ, 2016-17ರ ಸಾಲಿನಲ್ಲಿ ಒಟ್ಟಾರೆ 2256 ಎಂಟಿ ನೋಟ್ ಪುಸ್ತಕಗಳನ್ನು ಮಾರಾಟ ಮಾಡಿದೆ. ನೋಟ್ ಪುಸ್ತಕಗಳ ಮಾರುಕಟ್ಟೆಯಲ್ಲಿ ಪ್ರತಿಯೊಂದು ನೋಟ್ ಪುಸ್ತಕದೊಡನೆ ತೀವ್ರ ಸ್ವರೂಪದ ಸ್ಪರ್ಧೆ ಏರ್ಪಟ್ಟಿದ್ದು, ಪರಿವರ್ತಕರು ಚಿಲ್ಲರೆ ಮಾರಾಟ ಮಾಡಲು/ಗ್ರಾಹಕರ ಅಪೇಕ್ಷೆಯಂತೆ ರೂಪಿಸಲು ಮತ್ತು ತಾವೇ ಸ್ವತಃ ನೋಟ್ ಪುಸ್ತಕಗಳನ್ನು ಮಾರಾಟ ಮಾಡಲು ಮುಂದಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ನೋಡಿದರೆ ಕಾಗದ ವಿಭಾಗಕ್ಕೆ 'ವಿದ್ಯಾ ಮತ್ತು ಲೇಖಕ್' ನೋಟ್ ಪುಸ್ತಕಗಳಿಗೆ ಮಾರುಕಟ್ಟೆಯನ್ನು ಮರು ಹಿಡಿತ ಮಾಡಿಕೊಳ್ಳಲು ಮತ್ತು ಬಲವರ್ಧನೆ ಮಾಡಲು ಯುವಕರೂ ಹಾಗೂ ಉತ್ಸಾಹಶಾಲಿಗಳಾದ ಕ್ಷೇತ್ರ ಕಾರ್ಯದಳದ ಅವಶ್ಯಕತೆ ಅನಿವಾರ್ಯವಾಗಿದೆ. ಕಾಗದ ವಿಭಾಗವು ತನ್ನ ವಹಿವಾಟಿನ ಬೃಹತ್ ಪಾಲು ಸರ್ಕಾರದ್ದಾಗಿರುವುದರಿಂದ ಇದು ಸರ್ಕಾರದ ಕಾರ್ಯಾದೇಶಗಳ ಮೇಲೆ ಅವಲಂಬನೆಯಾಗುವ ಪ್ರಕ್ರಿಯೆ ಮುಂದುವರೆದಿದೆ. ಮುಂಬರುವ ವರ್ಷದಲ್ಲಿ ಸೂಕ್ತವಾದ ಮಾರಾಟದ ಉಪಾಯಗಳನ್ನು ಅನುಷ್ಠಾನಗೊಳಿಸುವ ಮೂಲಕ ಈ ಪರಿಸ್ಥಿತಿಯನ್ನು ನಿವಾರಿಸಬೇಕಾಗಿದೆ.

**(iv) ಗ್ರಾಹಕ ಉತ್ಪನ್ನಗಳ ವಿಭಾಗ :** ಈ ವಿಭಾಗವು ಹಿಂದಿನ ವರ್ಷ ರೂ.40.17 ಲಕ್ಷಗಳ ವಹಿವಾಟು ನಡೆಸಿದ್ದರೆ, ಪ್ರಸ್ತುತ ವರ್ಷದ ಅವಧಿಯಲ್ಲಿ ರೂ.217.42 ಲಕ್ಷಗಳ ವಹಿವಾಟು ಸಾಧಿಸಿದೆ. ವ್ಯವಹಾರವನ್ನು ಪುನಶ್ಚೇತನಗೊಳಿಸಲು, ವಿಭಾಗವು ಪ್ರಸಿದ್ಧ ಎಣ್ಣೆ ತಯಾರಿಕರ ಜೊತೆ ಸಹಭಾಗಿತ್ವ ಮಾಡಿಕೊಳ್ಳಲು ತನ್ನ ಉತ್ಪನ್ನ ಶ್ರೇಣಿಯನ್ನು ಬಲವರ್ಧನೆಗೊಳಿಸುವ ಕಾರ್ಯದಲ್ಲಿ ತೊಡಗಿದೆ ಹಾಗೂ ಪ್ರಸಕ್ತದಲ್ಲಿರುವ ಉತ್ಪನ್ನಗಳನ್ನು ಬೇರೆ ಪ್ರಾಂತ್ಯದಲ್ಲೂ ಮಾರಾಟ ಮಾಡಲು ಪ್ರಯತ್ನಿಸುತ್ತಿದೆ.

ಪ್ರಸಕ್ತ ವರ್ಷದಲ್ಲಿ ಈ ವಿಭಾಗವು 'ಸೌಂದರ್ಯ' ಎಂಬ ಕಂಪನಿಯ ಸ್ವಂತ ಬ್ರ್ಯಾಂಡ್ ಹೆಸರಿನಲ್ಲಿ ಗಿಡಮೂಲಿಕೆ ಸೋಪ್‌ಗಳು ಮತ್ತು ಸಂಬಂಧಪಟ್ಟ ವೈಯಕ್ತಿಕ ಪೋಷಣೆ ಉತ್ಪನ್ನಗಳನ್ನು ತಯಾರಿಸಲು ಹಾಗೂ ಸರಬರಾಜು ಮಾಡಲು ಟೆಂಡರ್ ಕರೆಯುವ ಕಾರ್ಯವನ್ನು ಪೂರ್ಣಗೊಳಿಸಿದೆ. 'ಸೌಂದರ್ಯ' ಶ್ರೇಣಿಯ ಉತ್ಪನ್ನಗಳನ್ನು ಪ್ರಾರಂಭಿಕವಾಗಿ ಕರ್ನಾಟಕದಲ್ಲಿ ಬಿಡುಗಡೆಗೊಳಿಸಲು ಮತ್ತು ವಿತರಕರನ್ನು ನೇಮಕ ಮಾಡಲು, ತದನಂತರ ಅದನ್ನು ದಕ್ಷಿಣದ ಪ್ರಾಂತ್ಯಕ್ಕೆ ವಿಸ್ತರಣೆ ಮಾಡಲು ವಿಭಾಗವು ಅತ್ಯುತ್ತಮವಾಗಿ ರೂಪಿಸಿರುವ ಯೋಜನೋಪಾಯಗಳನ್ನು ಅಳವಡಿಸಿಕೊಂಡಿದೆ.

ಮುಂಬರುವ ವರ್ಷದಲ್ಲಿ ಸಿಪಿಡಿ ಚಟುವಟಿಕೆಗಳನ್ನು ಬಲಪಡಿಸಲು ಚೆನ್ನೈ ಶಾಖೆಯ ಕಾರ್ಯಚಟುವಟಿಕೆಗಳನ್ನು ಪುನಶ್ಚೇತನಗೊಳಿಸಲು ಸಹ ಕಂಪನಿಯು ಯೋಜನೆ ಮಾಡುತ್ತಿದೆ. ಇಲ್ಲಿ ಈಗಾಗಲೇ 'ಟೋಟಲ್' ಡಿಟರ್ಜೆಂಟ್ ಬಾರ್‌ನ್ನು ಸಹಕಾರ ಸಂಘಗಳ ಮೂಲಕ ಮಾರಾಟ ಮಾಡಲಾಗುತ್ತಿದೆ. ಈ ಎಲ್ಲಾ ಸುಧಾರಣಾ ಕ್ರಮಗಳಿಂದಾಗಿ ವಿಭಾಗವು ಮುಂಬರುವ ವರ್ಷಗಳಲ್ಲಿ ಉತ್ತಮ ಫಲಿತಾಂಶಗಳನ್ನು ಸಾಧಿಸುವ ನಿರೀಕ್ಷೆ ಹೊಂದಿದೆ.

**(v) ಕೈಗಾರಿಕಾ ಉತ್ಪನ್ನಗಳ ವಿಭಾಗ :** ಈ ವಿಭಾಗವು 2016-17ರ ಹಣಕಾಸಿನ ವರ್ಷದಲ್ಲಿ (ಡಿಸೆಂಬರ್ 2016ರಿಂದ ಮಾರ್ಚ್ 2017ರವರೆಗೆ) 'ಕ್ಲಾಸ್-1' ಪ್ಯಾಕೇಜ್ಡ್ ಕುಡಿಯುವ ನೀರಿನ ಉತ್ಪನ್ನಗಳ ಪ್ರಮುಖ ಕೊಡುಗೆಯ ಅಡಿಯಲ್ಲಿ ರೂ.162.62ಲಕ್ಷಗಳ ವಹಿವಾಟನ್ನು ಸಾಧಿಸಿದೆ.

ವ್ಯವಹಾರವನ್ನು ಹೆಚ್ಚಿಸುವ ಉದ್ದೇಶದಿಂದ 'ಕ್ಲಾಸ್-1' ಪ್ಯಾಕೇಜ್ಡ್ ಕುಡಿಯುವ ನೀರಿನ ವ್ಯವಹಾರವನ್ನು ಈ ವಿಭಾಗಕ್ಕೆ ಸೇರ್ಪಡೆ ಮಾಡಿದೆ.

ವಿಭಾಗದ ವಹಿವಾಟನ್ನು ಗರಿಷ್ಠ ಮಟ್ಟಕ್ಕೆ ಕೊಂಡೊಯ್ಯುವ ದೃಷ್ಟಿಯಿಂದ ಸೋಲಾರ್ ಎಲ್‌ಇಡಿ ಲೈಟಿಂಗ್ ಸಿಸ್ಟಮ್ಸ್‌ಗೆ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಸಹ ಆಹ್ವಾನಿಸಲಾಗಿದೆ. ವ್ಯವಹಾರವನ್ನು ಹೆಚ್ಚಿಸಲು ಸೋಲಾರ್ ಉತ್ಪನ್ನಗಳು, ವೈರುಗಳು, ಕೇಬಲ್ ಮತ್ತು ವಾಟರ್ ಪ್ಯೂರಿಫೈಯರ್ ಇತ್ಯಾದಿಯ ಉತ್ಪನ್ನಗಳನ್ನು ಸರಬರಾಜು ಮಾಡಲು 4ಜಿ ವಿನಾಯ್ತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ವಿಭಾಗವು ಈಗಾಗಲೇ ಸಲ್ಲಿಸಿದೆ.

**(vi) ಟೂರ್ಸ್ ಮತ್ತು ಟ್ರಾವೆಲ್ಸ್ ವಿಭಾಗ :** ಐಎಟಿಎ ಯ ಮಾನ್ಯತೆ ಪಡೆದ ಟ್ರಾವೆಲ್ ಏಜೆನ್ಸಿಯಾಗಿದೆ (IATA No. 1435229). 2016-17ನೇ ಸಾಲಿನಲ್ಲಿ ಸರ್ಕಾರಿ ಅಧಿಕಾರಿಗಳಿಗೆ ವಿಮಾನ ಟಿಕೆಟ್‌ಗಳನ್ನು ಬುಕಿಂಗ್ ಮಾಡುವ ಮತ್ತು ಪ್ಯಾಕೇಜ್ ಟೂರ್‌ಗಳನ್ನು ಆಯೋಜಿಸುವ ಮುಖ್ಯ ಚಟುವಟಿಕೆಗಳನ್ನು

## ನಿರ್ದೇಶಕರ ವರದಿ (ಮುಂದುವರೆದುದು)

ವಿಭಾಗವು ಮುಂದುವರೆಸಿದೆ. ಕಳೆದ ವರ್ಷದ 975.94 ಲಕ್ಷ ರೂಪಾಯಿಗಳ ವಹಿವಾಟಿಗೆ ಹೋಲಿಸಿದರೆ 31ನೇ ಮಾರ್ಚ್ 2017ರವರೆಗೆ ವಿಭಾಗವು 586.46 ಲಕ್ಷ ರೂಪಾಯಿಗಳ ವಹಿವಾಟನ್ನು ನಡೆಸಿರುತ್ತದೆ.

ವಿಭಾಗವು ಉತ್ತರ ಭಾರತದ ಪುಣ್ಯ ಕ್ಷೇತ್ರಗಳಿಗೆ ಪ್ಯಾಕೇಜ್ ಟೂರ್‌ಗಳನ್ನು ಯಶಸ್ವಿಯಾಗಿ ಆಯೋಜಿಸಿದೆ. ಭಾರತದ ವಿವಿಧ ಪ್ರವಾಸಿ ತಾಣಗಳಿಗೆ ವಿಭಾಗವು ಸರ್ಕಾರಿ ಸಂಸ್ಥೆಗಳ ಸಿಬ್ಬಂದಿಗಳಿಗಾಗಿ ಸೇವಾ ಪೂರೈಕೆದಾರರ ಮೂಲಕ ಪ್ಯಾಕೇಜ್ ಪ್ರವಾಸಗಳನ್ನು ಸಂಘಟಿಸಿದೆ.

**(vii) ಹೈರ್‌ಪರ್ಚೇಸ್ ವಿಭಾಗ :** ಈ ವಿಭಾಗದ ಕಾರ್ಯಾಚರಣೆಯು 2008ರ ಜುಲೈನಲ್ಲಿ ಸ್ಥಗಿತಗೊಂಡಿದೆ. ವಿಭಾಗವು ಆಗಿನಿಂದ ಬಾಡಿಗೆದಾರರಿಂದ ಬರಬೇಕಾಗಿರುವ ಬಾಕಿಯನ್ನು ವಸೂಲು ಮಾಡುವತ್ತ ಹೆಚ್ಚು ಗಮನ ಹರಿಸಿದೆ. 2008ರ ನಂತರದಿಂದ ರೂ.40 ಕೋಟಿಗಳಿಗೂ ಹೆಚ್ಚು ಸಾಲದ ಬಾಕಿಯನ್ನು ವಸೂಲಿ ಮಾಡಿದೆ. ಪ್ರಸಕ್ತ ಹಣಕಾಸಿನ ವರ್ಷದಲ್ಲಿ ರೂ.33.29ಲಕ್ಷ ಮೊತ್ತವನ್ನು ವಸೂಲಿ ಮಾಡಿದ್ದು, ಇದರಿಂದ 2008 ರಿಂದೀಚೆಗೆ 40.50 ಕೋಟಿಗೂ ಹೆಚ್ಚಿನ ಬಾಕಿಯನ್ನು ವಸೂಲಿ ಮಾಡಿದಂತಾಗಿದೆ. ಮಾರ್ಚ್ 31,2017ರಂದು ಇದ್ದಂತೆ ಇನ್ನೂ ವಸೂಲಾಗಬೇಕಾಗಿರುವ ಬಾಕಿಯ ಮೊತ್ತ ಹಿಂದಿನ ವರ್ಷ ರೂ.412.60 ಲಕ್ಷ ವಸೂಲಿ ಮಾಡಿದ್ದರೆ ಪ್ರಸಕ್ತ ವರ್ಷದಲ್ಲಿ ರೂ.379.31 ಲಕ್ಷಗಳು ಬಾಕಿ ಉಳಿದಿದೆ.

**(viii) ಫಾರ್ಮ ವಿಭಾಗ :** ಫಾರ್ಮ ವಿಭಾಗವು ಹಣಕಾಸಿನ ವರ್ಷ 2016-17ರ ಅವಧಿಯಲ್ಲಿ ರೂ.12.09 ಲಕ್ಷ ಮೊತ್ತದ ವಹಿವಾಟು ನಡೆಸಿದೆ. ಭಾರತದಲ್ಲಿ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರವನ್ನು 2008ರಲ್ಲಿ ಪ್ರಾರಂಭಿಸಲಾಗಿತ್ತು. ಇದು ಭಾರತ ಸರ್ಕಾರ ಪ್ರಾರಂಭಿಸಿದ ಒಂದು ಮಹತ್ತರವಾದ ಯೋಜನೆ. ಎಲ್ಲರಿಗೂ ಕೈಗೆಟಕುವ ಕಡಿಮೆ ಬೆಲೆಯಲ್ಲಿ ಗುಣಮಟ್ಟದ ಔಷಧಿಗಳು ದೊರೆಯುವಂತೆ ಮಾಡುವುದು ಹಾಗೂ ಜನರಿಕ್ ಔಷಧಿಗಳಿಗೆ ಬೇಡಿಕೆ ಹೆಚ್ಚಿಸುವುದು ಜನೌಷಧಿಯ ಮುಖ್ಯ ಧ್ಯೇಯ.

ಕರ್ನಾಟಕದಾದ್ಯಂತ 124 ತಾಲ್ಲೂಕುಗಳಲ್ಲಿ ಪ್ರಧಾನ್‌ಮಂತ್ರಿ ಭಾರತೀಯ ಜನೌಷಧಿ ಕೇಂದ್ರ ತೆರೆಯಲು ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂ. ಎಚ್‌ಎಫ್ ಮತ್ತು ಡಬ್ಲ್ಯೂ/161/ಎಚ್‌ಪಿಸಿ/2016(ಭಾಗ), ಬೆಂಗಳೂರು ದಿನಾಂಕ:26.11.2016ರ ಅನ್ವಯ ಅನುಮತಿ ನೀಡಿದೆ. ಇವುಗಳ ಪೈಕಿ ನಮ್ಮ ಫಾರ್ಮ ವಿಭಾಗವು 16 ಜೆಎಎಸ್ ಕೇಂದ್ರಗಳನ್ನು ತೆರೆದಿದೆ. ಉಳಿದ ಜೆಎಎಸ್ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು. ಇದರಿಂದ ಮುಂಬರುವ ವರ್ಷಗಳಲ್ಲಿ ಹೆಚ್ಚಿನ ವಹಿವಾಟು ನಡೆಯುವ ನಿರೀಕ್ಷೆಯಿದೆ.

### 3. ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆ:

ಕಂಪನಿಯ ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ.

### 4. ಲಾಭಾಂಶ

ಆರ್ಥಿಕ ವರ್ಷ 2016-17ರಲ್ಲಿ ಕಂಪನಿಯು ತಲಾ ರೂ.100/-ರ ಮುಖಬೆಲೆಯ ಪ್ರತಿ ಈಕ್ವಿಟಿ ಷೇರಿಗೆ ರೂ.10/- ರಂತೆ ಲಾಭಾಂಶ ಘೋಷಿಸಿದೆ. ಇದನ್ನು ಮುಂಬರುವ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರುಗಳಿಂದ ಅನುಮೋದನೆಯಾದ ಪಕ್ಷದಲ್ಲಿ ರೂ.2,01,76,600/- ಮೊತ್ತವನ್ನು ಲಾಭಾಂಶದ ಮೇಲಿನ ಅನ್ವಯವಾಗುವ ತೆರಿಗೆಯೊಂದಿಗೆ ಒದಗಿಸಲಾಗುವುದು.

### 5. ಮೀಸಲು ನಿಧಿ

2016-17ನೇ ಆರ್ಥಿಕ ವರ್ಷ ಹಾಗೂ ಅದರ ಹಿಂದಿನ ವರ್ಷಗಳಲ್ಲಿ ಕಂಪನಿಯ ದೊಡ್ಡ ಮೊತ್ತದ ಮೀಸಲು ಧನ ಇಡುವಿಕೆಯು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ವಿವರಗಳು | ಆರ್ಥಿಕ ವರ್ಷ 2016-17 | ಆರ್ಥಿಕ ವರ್ಷ 2015-16 |
|---|---|---|
| ಸಾಮಾನ್ಯ ಮೀಸಲು ನಿಧಿ | 3428.52 | 3236.73 |
| ಲಾಭ ಮತ್ತು ನಷ್ಟ ಹೇಳಿಕೆಯಲ್ಲಿನ ಹೆಚ್ಚುವರಿ | 3665.70 | 3605.82 |

### 6. ಷೇರು ಬಂಡವಾಳ

ನೀಡಿಕೆಯಾದ, ಚಂದಾದಾರಿಕೆಯಾದ ಮತ್ತು ಪಾವತಿಯಾದ ಒಟ್ಟು ಷೇರು ಬಂಡವಾಳವು ರೂ.20,17,66,000/- ಆಗಿದ್ದು, ಇದು ಹೀಗೆಯೇ ಮುಂದುವರಿಯುತ್ತಿದೆ. ಇದರಲ್ಲಿ ತಲಾ ರೂ.100/-ರ 20,17,660 ಈಕ್ವಿಟಿ ಷೇರುಗಳು ಒಳಗೊಂಡಿರುವುವು.

### 7. ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿ

2016-17ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಧಾರಕ ಕಂಪನಿಯಾದ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)ದ ನಿರ್ದೇಶನದಂತೆ ಕಂಪನಿಯ ಮಂಡಳಿ ನಿರ್ದೇಶಕರ ಸಂಯೋಜನೆಯಲ್ಲಿ ಈ ಕೆಳಕಂಡ ಬದಲಾವಣೆಗಳನ್ನು ಮಾಡಲಾಗಿದೆ.

## ನಿರ್ದೇಶಕರ ವರದಿ (ಮುಂದುವರೆದುದು)

| ಕ್ರ. ಸಂ. | ನಿರ್ದೇಶಕರ ಹೆಸರು | ನಿಯೋಜನೆ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|
| 1. | ಶ್ರೀಮತಿ ಕೆ.ರತ್ನಪ್ರಭ, ಭಾ.ಆ.ಸೇ-ಅಧ್ಯಕ್ಷರು | 14.01.2016 | 09.06.2016 |
| 2. | ಶ್ರೀ ಡಿ.ವಿ. ಪ್ರಸಾದ್, ಭಾ.ಆ.ಸೇ-ಅಧ್ಯಕ್ಷರು | 09.06.2016 | 02.11.2016 |
| 3. | ಶ್ರೀ ಹಂಪನಗೌಡ ಬಾದರ್ಲಿ | 02.11.2016 | - |
| 4. | ಡಾ. ಜಿ.ಸಿ. ಪ್ರಕಾಶ್,* ಭಾ.ಆ.ಸೇ. – ವ್ಯವಸ್ಥಾಪಕ ನಿರ್ದೇಶಕರು | 07.10.2016 | - |
| 5. | ಶ್ರೀ ಕಪಿಲ್ ಮೋಹನ್, ಭಾ.ಆ.ಸೇ ವ್ಯವಸ್ಥಾಪಕ ನಿರ್ದೇಶಕರು | 22.09.2016 | 07.10.2016 |
| 6. | ಶ್ರೀ ನವೀನ್ ರಾಜ್ ಸಿಂಗ್, ಭಾ.ಆ.ಸೇ. | 22.09.2016 | 10.05.2017 |
| 7. | ಶ್ರೀ ಗೌರವ್ ಗುಪ್ತ, ಭಾ.ಆ.ಸೇ. | 22.09.2016 | 07.03.2017 |
| 8. | ಶ್ರೀ ರಿತೇಶ್‌ಕುಮಾರ್ ಸಿಂಗ್, ಭಾ.ಆ.ಸೇ. | 21.07.2015 | 13.07.2017 |
| 9. | ಶ್ರೀ ಹರ್ಷಗುಪ್ತ, ಭಾ.ಆ.ಸೇ. | 15.05.2015 | 06.07.2016 |
| 10. | ಶ್ರೀ ಎಸ್.ಆರ್. ಸನತ್‌ಕುಮಾರ್ | 06.07.2016 | - |
| 11. | ಶ್ರೀ ರಫೀಕ್ ಅಹಮದ್ ಬಿ.ಪಾಕಲಿ | 06.07.2016 | - |
| 12. | ಶ್ರೀ ಗುಣಶೇಖರ | 06.07.2016 | - |
| 13. | ಶ್ರೀ ಚಲುವರಾಜು | 06.07.2016 | - |
| 14. | ಶ್ರೀ ಎಂ.ಎಸ್.ಶ್ರೀಧರ | 06.07.2016 | - |
| 15. | ಶ್ರೀ ಕೆ. ವೆಂಕಟಸ್ವಾಮಪ್ಪ | 06.07.2016 | - |
| 16. | ಶ್ರೀ ಅನುರಾಧ ಬಿ ತಾಪ್ಲಿ | 06.07.2017 | - |
| 17. | ಶ್ರೀ ಆರ್. ತಮ್ಮಣ್ಣ | 06.07.2016 | - |
| 18. | ಶ್ರೀ ಎನ್. ಬಾಲ್‌ರಾಜು | 06.07.2016 | - |
| 19. | ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ. | 22.09.2016 | 07.03.2017 |
| 20. | ಶ್ರೀ ದರ್ಪಣ್ ಜೈನ್, ಭಾ.ಆ.ಸೇ. | 07.03.2017 | - |
| 21. | ಶ್ರೀ ಶ್ರೀವತ್ಸ ಕೃಷ್ಣ, ಭಾ.ಆ.ಸೇ. | 07.03.2017 | 10.05.2017 |

* ಎಂ.ಎಸ್‌ಐಎಲ್‌ನ ವ್ಯವಸ್ಥಾಪಕರಾಗಿದ್ದ ಡಾ.ಜಿ.ಸಿ. ಪ್ರಕಾಶ್, ಭಾ.ಆ.ಸೇ. ಇವರ ಸೇವೆಯನ್ನು ಕರ್ನಾಟಕ ಸರ್ಕಾರವು ಸೆಪ್ಟೆಂಬರ್ 22, 2016 ರಿಂದ ಹಿಂತೆಗೆದುಕೊಂಡಿದ್ದು, ತದನಂತರ ಇವರನ್ನು ಮತ್ತೆ ದಿನಾಂಕ: 07.10.2016 ರಂದು ಎಂಎಸ್‌ಐಎಲ್‌ನ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡಿದೆ.

ಶ್ರೀಮತಿ ಕೆ. ರತ್ನಪ್ರಭ, ಭಾ.ಆ.ಸೇ. ಮತ್ತು ಶ್ರೀ ಡಿ.ವಿ. ಪ್ರಸಾದ್, ಭಾ.ಆ.ಸೇ. ಅಧ್ಯಕ್ಷರು, ಶ್ರೀ ಕಪಿಲ್ ಮೋಹನ್,ಭಾ.ಆ.ಸೇ. ವ್ಯವಸ್ಥಾಪಕ ನಿರ್ದೇಶಕರು; ಶ್ರೀ ಹರ್ಷಗುಪ್ತ, ಭಾ.ಆ.ಸೇ.; ಶ್ರೀ ನವೀನ್‌ರಾಜ್ ಸಿಂಗ್, ಭಾ.ಆ.ಸೇ.; ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ.; ಮತ್ತು ಶ್ರೀ ಶ್ರೀವತ್ಸ ಕೃಷ್ಣ ಭಾ.ಆ.ಸೇ. ನಿರ್ದೇಶಕರು ಇವರುಗಳು ಕಂಪನಿಯ ನಿರ್ದೇಶಕರ ಮಂಡಳಿಯಲ್ಲಿ ನಿರ್ದೇಶಕರುಗಳಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಅವರು ನೀಡಿದ ಅನುಪಮ ಕೊಡುಗೆಯನ್ನು ಮಂಡಳಿಯು ಸ್ಮರಿಸಿ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುವುದು.

ಹುದ್ದೆಗೆ ಸೇರಿದ ದಿನಾಂಕದಂದು ಇರುವ ನಿರ್ದೇಶಕರ ವಿವರಗಳು ಈ ಕೆಳಕಂಡಂತಿರುವುದು.

**ನಿರ್ದೇಶಕರ ಹೆಸರು**

| | |
|---|---|
| 1. ಶ್ರೀ ಹಂಪನಗೌಡ ಬಾದರ್ಲಿ | ಅಧ್ಯಕ್ಷರು |
| 2. ಡಾ. ಜಿ.ಸಿ. ಪ್ರಕಾಶ್, ಭಾ.ಆ.ಸೇ | ವ್ಯವಸ್ಥಾಪಕ ನಿರ್ದೇಶಕರು |
| 3. ಡಾ.ಏಕ್‌ರೂಪ್ ಕೌರ್, ಭಾ.ಆ.ಸೇ. | ಸ್ವತಂತ್ರ ನಿರ್ದೇಶಕರು |
| 4. ಶ್ರೀ ದರ್ಪಣ್ ಜೈನ್, ಭಾ.ಆ.ಸೇ. | ಸ್ವತಂತ್ರ ನಿರ್ದೇಶಕರು |
| 5. ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ | ನಿರ್ದೇಶಕರು |
| 6. ಶ್ರೀಮತಿ ಪಿ.ಹೇಮಲತ, ಭಾ.ಆ.ಸೇ. | ನಿರ್ದೇಶಕರು |
| 7. ಶ್ರೀ ಎಸ್.ಆರ್. ಸನತ್‌ಕುಮಾರ್ | ನಿರ್ದೇಶಕರು |
| 8. ಶ್ರೀ ರಫೀಕ್ ಅಹಮದ್ ಬಿ.ಪಕಾಲಿ | ನಿರ್ದೇಶಕರು |
| 9. ಶ್ರೀ ಗುಣ ಶೇಖರ | ನಿರ್ದೇಶಕರು |
| 10. ಶ್ರೀ ಚಲುವರಾಜು | ನಿರ್ದೇಶಕರು |
| 11. ಶ್ರೀ ಎಂ.ಎಸ್. ಶ್ರೀಧರ | ನಿರ್ದೇಶಕರು |
| 12. ಶ್ರೀ ಕೆ.ವೆಂಕಟಸ್ವಾಮಪ್ಪ | ನಿರ್ದೇಶಕರು |
| 13. ಶ್ರೀ ಅನುರಾಧ ಬಿ ತಪ್ಲಿ | ನಿರ್ದೇಶಕರು |
| 14. ಶ್ರೀ ಆರ್. ತಮ್ಮಣ್ಣ | ನಿರ್ದೇಶಕರು |
| 15. ಶ್ರೀ ಎನ್. ಬಾಲ್‌ರಾಜು | ನಿರ್ದೇಶಕರು |

2016–17ನೇ ಆರ್ಥಿಕ ವರ್ಷದಲ್ಲಿ 2013ರ ಕಂಪನಿಗಳ ಕಾಯ್ದೆಯ ಉಪಬಂಧಗಳ ಪ್ರಕಾರ ಕೆಳಕಂಡವರು ಪ್ರಮುಖ ಆಡಳಿತ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿರುತ್ತಾರೆ:

| ಕ್ರ. ಸಂ. | ಪ್ರಮುಖ ಆಡಳಿತ ಅಧಿಕಾರಿಗಳ ಹೆಸರು | ನಿಯೋಜನೆಗೊಂಡ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|
| 1 | ಡಾ. ಜಿ.ಸಿ. ಪ್ರಕಾಶ್, ಭಾ.ಆ.ಸೇ. ವ್ಯವಸ್ಥಾಪಕ ನಿರ್ದೇಶಕರು | 11.8.2014 | – |
| 2 | ಶ್ರೀ ರಮಾಕಾಂತ್ ಹೆಬ್ಬಳ್ಳಿ ಮುಖ್ಯ ಹಣಕಾಸು ಅಧಿಕಾರಿ | 20.5.2015 | 15.05.2017 |

## ನಿರ್ದೇಶಕರ ವರದಿ (ಮುಂದುವರೆದುದು)

| | | | |
|---|---|---|---|
| 3 | ಶ್ರೀ ಎ.ಎಂ. ಚಂದ್ರಪ್ಪ<br>ಮುಖ್ಯ ಹಣಕಾಸು ಅಧಿಕಾರಿ | 15.05.2017 | - |
| 4 | ಶ್ರೀಮತಿ ಶ್ರೀದೇವಿ ಬಿ.ಎಸ್.<br>ಕಂಪನಿ ಕಾರ್ಯದರ್ಶಿ | 18.9.2013 | - |

**8. ಸಭೆಗಳು :**

ವ್ಯವಸ್ಥಾಪಕ ನಿರ್ದೇಶಕರ ಮಾರ್ಗದರ್ಶನದ ಮೇರೆಗೆ, ವಿಭಾಗವಾರು ಮುಖ್ಯಸ್ಥರ ಮನವಿಯನ್ನು ಆಧರಿಸಿ ವ್ಯವಸ್ಥಾಪಕ ನಿರ್ದೇಶಕರಿಂದ ಪೂರ್ವಾನುಮತಿ ಪಡೆದು ಅತ್ಯಂತ ಅಗತ್ಯವಾದ ಕಾರ್ಯಕಲಾಪದ ವಿಷಯಗಳನ್ನು ನಿರ್ಧರಿಸಲಾಗುತ್ತಿದೆ. ಕಂಪನಿಯ ಕಾರ್ಯದರ್ಶಿಯು ಪ್ರತಿ ಸಭೆಯ ವಿಷಯಗಳನ್ನು ಸಿದ್ಧಪಡಿಸಿರುತ್ತಾರೆ. ಇದನ್ನು ಸಭೆಗೂ ಮುನ್ನ ನಿರ್ದೇಶಕ ಮಂಡಳಿಗೆ ವಿತರಿಸಲಾಗುತ್ತದೆ. 2017ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷದಲ್ಲಿ ನಾಲ್ಕು ಮಂಡಳಿ ಸಭೆಗಳು, ಮೂರು ಲೆಕ್ಕ ಪರಿಶೋಧನಾ ಉಪ ಸಮಿತಿ ಸಭೆಗಳು ಮತ್ತು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕಾ ಸಮಿತಿ ಸಭೆ ನಡೆದಿರುತ್ತವೆ. ಸಭೆಗಳ ದಿನಾಂಕ ಇಂತಿದೆ :

| ಕ್ರ. ಸಂ. | ಮಂಡಳಿ ಸಭೆಯ ದಿನಾಂಕಗಳು |
|---|---|
| 1 | ಜುಲೈ 16, 2016 |
| 2 | ಆಗಸ್ಟ್ 30, 2016 |
| 3 | ನವೆಂಬರ್ 19, 2016 |
| 4 | ಫೆಬ್ರುವರಿ 17, 2017 |

| ಕ್ರ. ಸಂ. | ಲೆಕ್ಕ ಪರಿಶೋಧನಾ ಉಪಸಮಿತಿ ಸಭೆ ನಡೆದ ದಿನಾಂಕಗಳು |
|---|---|
| 1 | ಜೂನ್ 23, 2016 |
| 2 | ಆಗಸ್ಟ್ 30, 2016 |
| 3 | ಜನವರಿ 6 ಮತ್ತು 11, 2017 |

| ಕ್ರ. ಸಂ. | ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ ಸಭೆ ದಿನಾಂಕ |
|---|---|
| 1 | ಏಪ್ರಿಲ್ 28, 2016 |

2013ರ ಕಂಪನಿಗಳ ಕಾಯ್ದೆಯನ್ವಯ ನಿಗದಿ ಮಾಡಿದಂತೆ ಪ್ರತಿ ಸಭೆಯ ನಡುವೆ ಅಂತರವನ್ನು ಕಾಯ್ದುಕೊಳ್ಳಲಾಗಿದೆ.

**2016-2017ನೇ ಆರ್ಥಿಕ ವರ್ಷದಲ್ಲಿ ನಡೆದ ಮಂಡಳಿ ಸಭೆಯಲ್ಲಿ ನಿರ್ದೇಶಕರ ಹಾಜರಾತಿ ವಿವರ :**

| ನಿರ್ದೇಶಕರ ಹೆಸರು | ನಡೆದ ಮಂಡಳಿ ಸಭೆಗಳ ಸಂಖ್ಯೆ | |
|---|---|---|
| | ನಡೆದದ್ದು | ಹಾಜರಾತಿ |
| ಶ್ರೀ ಡಿ.ವಿ. ಪ್ರಸಾದ್, ಭಾ.ಆ.ಸೇ. | 2 | 2 |
| ಶ್ರೀ ಹಂಪನಗೌಡ ಬಾದರ್ಲಿ | 2 | 2 |
| ಶ್ರೀ ರಿತೇಶ್‌ಕುಮಾರ್ ಸಿಂಗ್, ಭಾ.ಆ.ಸೇ. | 4 | 1 |
| ಡಾ. ಜಿ.ಸಿ. ಪ್ರಕಾಶ್, ಭಾ.ಆ.ಸೇ. | 4 | 4 |
| ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ. | 2 | 2 |
| ಶ್ರೀ ನವೀನ್‌ರಾಜ್ ಸಿಂಗ್, ಭಾ.ಆ.ಸೇ. | 2 | 1 |
| ಶ್ರೀ ಗೌರವ್ ಗುಪ್ತ, ಭಾ.ಆ.ಸೇ. | 2 | 1 |
| ಶ್ರೀ ಎಸ್.ಆರ್. ಸನತ್‌ಕುಮಾರ್ | 4 | 4 |
| ಶ್ರೀ ರಫಿಕ್ ಅಹಮದ್ ಬಿ.ಪಕಾಲಿ | 4 | 4 |
| ಶ್ರೀ ಗುಣಶೇಖರ | 4 | 4 |
| ಶ್ರೀ ಚಲುವ ರಾಜು | 4 | 4 |
| ಶ್ರೀ ಎಂ.ಎಸ್. ಶ್ರೀಧರ | 4 | 3 |
| ಶ್ರೀ ಕೆ.ವೆಂಕಟಸ್ವಾಮಪ್ಪ | 4 | 4 |
| ಶ್ರೀ ಅನುರಾಧ ಬಿ. ತಪ್ಲಿ | 4 | 4 |
| ಶ್ರೀ ಆರ್.ತಮ್ಮಣ್ಣ | 4 | 4 |
| ಶ್ರೀ ಎಸ್. ಬಾಲ್‌ರಾಜ್ | 4 | 4 |

1. ಶ್ರೀ ಡಿ.ವಿ. ಪ್ರಸಾದ್, ಭಾ.ಆ.ಸೇ. ಇವರು ದಿನಾಂಕ: 02.11.2016ರಿಂದ ಅನ್ವಯವಾಗುವಂತೆ ಅಧ್ಯಕ್ಷರ ಸ್ಥಾನ ತೆರವುಗೊಳಿಸಿದ್ದಾರೆ.

2. ಶ್ರೀ ಹಂಪನಗೌಡ ಬಾದರ್ಲಿ ಇವರು ದಿನಾಂಕ: 02.11.2016 ರಿಂದ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

5. ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ. ಇವರು ದಿನಾಂಕ:22.09.2016 ರಿಂದ ನಿರ್ದೇಶಕರಾಗಿ ನೇಮಕಗೊಂಡಿರುವರು.

6. ಶ್ರೀ ನವೀನ್‌ರಾಜ್ ಸಿಂಗ್, ಭಾ.ಆ.ಸೇ. ಇವರು ದಿನಾಂಕ:22.09.2016 ರಿಂದ ನಿರ್ದೇಶಕರಾಗಿ ನೇಮಕಗೊಂಡಿರುವರು.

7. ಶ್ರೀ ಗೌರವ್ ಗುಪ್ತ, ಭಾ.ಆ.ಸೇ. ಇವರು 22.09.2016ರಿಂದ ನಿರ್ದೇಶಕರಾಗಿ ನೇಮಕಗೊಂಡಿರುವರು.

**9. ಸಹಾಯಕ ಕಂಪನಿಗಳ ವಿವರ**

ದಿನಾಂಕ 31ನೇ ಮಾರ್ಚ್ 2017 ರಂದು ಇದ್ದಂತೆ ಕಂಪನಿಯು ಎರಡು ಸಹಾಯಕ ಕಂಪನಿಗಳನ್ನು ಹೊಂದಿದೆ.

ಕಂಪನಿಗಳ (ಲೆಕ್ಕಪತ್ರಗಳು) ತಿದ್ದುಪಡಿ ನಿಯಮ 2014ರ ಎರಡನೇ ನಿಬಂಧನೆಯ ನಿಯಮ 6 ಓದಿಕೊಂಡಂತೆ ಪ್ರಕರಣ 129(3)ರ ಉಪಬಂಧಗಳ ಅನುಸಾರ ಎಂಎಸ್ಐಎಲ್ ಕಂಪನಿಯು ಕೆಎಸ್ಐಐಡಿಸಿಯ ಪೂರ್ಣ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಯಾಗಿದೆ. ಕಂಪನಿಯು ವಿನಾಯಿತಿಯನ್ನು ಪಡೆದಿದ್ದು,

## ನಿರ್ದೇಶಕರ ವರದಿ (ಮುಂದುವರೆದುದು)

31ನೇ ಮಾರ್ಚ್, 2017ಕ್ಕೆ ಕೊನೆಗೊಂಡ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಿರುವುದಿಲ್ಲ.

ಕಾಯ್ದೆಯ ಪ್ರಕರಣ 129ರ ಉಪ ಪ್ರಕರಣ (3)ರ ಅನ್ವಯ ಕಂಪನಿಯ ಸಹಾಯಕ ಸಂಸ್ಥೆಗಳ ಹಣಕಾಸಿನ ಹೇಳಿಕೆಗಳ ವೈಶಿಷ್ಟ್ಯತೆಗಳನ್ನು ಒಳಗೊಂಡ ವಿವರಗಳನ್ನು ನಮೂನೆ ಎಒಸಿ-1ರಲ್ಲಿ ಅನುಬಂಧ-II ಆಗಿ ತಿಳಿಸಲಾಗಿದೆ.

### 10. ಲೆಕ್ಕ ಪರಿಶೋಧಕರು:

2013ರ ಕಂಪನಿ ಕಾಯ್ದೆಯ ಕಲಂ 2(45)ರ ಅನ್ವಯ ಕಂಪನಿಯು ಸರ್ಕಾರಿ ಕಂಪನಿಯಾಗಿರುವುದರಿಂದ 2013ರ ಕಂಪನಿಗಳ ಕಾಯ್ದೆಯ ಕಲಂ139(5)ರ ಅನ್ವಯ ಭಾರತೀಯ ಕಂಪ್ಟ್ರೋಲರ್ ಮತ್ತು ಮಹಾ ಲೆಕ್ಕಪರಿಶೋಧಕರು ಕಂಪನಿಯ ವಾರ್ಷಿಕ ಲೆಕ್ಕ ಪರಿಶೋಧನೆಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುತ್ತದೆ. 2017-18ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ಬೆಂಗಳೂರಿನ ಮೆ|| ಪಿ. ಚಂದ್ರಶೇಖರ್ ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್ ಇವರನ್ನು ಸಿ ಮತ್ತು ಎಜಿಐ ನೇಮಿಸಿದೆ. ಸಿ ಮತ್ತು ಎಜಿಐನಿಂದ ನೇಮಕವಾಗಿರುವ ಲೆಕ್ಕಪರಿಶೋಧಕರು ಮುಂದಿನ ವಾರ್ಷಿಕ ಸಾಮಾನ್ಯ ಸಭೆಯವರೆಗೂ ಹುದ್ದೆಯಲ್ಲಿರುವರು.

### 11. ಲೆಕ್ಕಪರಿಶೋಧಕರ ವರದಿ:

ಲೆಕ್ಕಪರಿಶೋಧಕರ ವರದಿಯು ಅರ್ಹತೆಗಳನ್ನು ಹೊಂದಿರುತ್ತದೆ. ಶಾಸನಬದ್ಧ ಲೆಕ್ಕಪರಿಶೋಧಕರ ಅರ್ಹತಾ ಪ್ರಕ್ರಿಯೆಗಳಿಗೆ ಉತ್ತರಗಳನ್ನು ಲಗತ್ತಿಸಲಾಗಿದೆ.

ಕಂಪನಿಗಳ ಕಾಯ್ದೆ 2013ರ ಪ್ರಕರಣ 143(6)ರ ಅನ್ವಯ 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಲೆಕ್ಕಪತ್ರದ ಮೇಲಿನ ಭಾರತದ ಕಂಪ್ಟ್ರೋಲರ್ ಮತ್ತು ಮಹಾ ಲೆಕ್ಕಪರಿಶೋಧಕರ ಟೀಕೆ ಟಿಪ್ಪಣಿಯನ್ನು ವರದಿ ಜೊತೆ ಲಗತ್ತಿಸಲಾಗಿದೆ.

### 12. ಕಾರ್ಯದರ್ಶಿ ಲೆಕ್ಕಪರಿಶೋಧನಾ ವರದಿ

ಕಂಪನಿ ಕಾಯ್ದೆಯ 204ರ ಕಲಂ ಅನ್ವಯ ಮತ್ತು ಇದರಡಿ ರೂಪಿಸಲಾದ ನಿಯಮಗಳಂತೆ ವೃತ್ತಿನಿರತ ಕಂಪನಿ ಕಾರ್ಯದರ್ಶಿ ಶ್ರೀ ಎಸ್. ವಿಶ್ವನಾಥನ್ ಅವರು 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷಕ್ಕೆ ತಮ್ಮ ವರದಿಯನ್ನು ಸಲ್ಲಿಸಿದ್ದಾರೆ. ಕಾರ್ಯದರ್ಶಿ ಲೆಕ್ಕಪರಿಶೋಧಕರ ವರದಿಯನ್ನು ಸದರಿ ವರದಿಗೆ ಅನುಬಂಧ-III ಆಗಿ ಲಗತ್ತಿಸಲಾಗಿದೆ. ಈ ವರದಿಯು ಸ್ವಯಂ ವಿವರಣಾತ್ಮಕವಾಗಿದ್ದು ಯಾವುದೇ ಮುಂದುವರೆದ ಟೀಕೆಗಳಿಗೆ ಅವಕಾಶ ಇರುವುದಿಲ್ಲ.

### 13. ಆಂತರಿಕ ಲೆಕ್ಕಪರಿಶೋಧನೆ ಮತ್ತು ನಿಯಂತ್ರಣಗಳು

ಕಂಪನಿಯು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳುವುದನ್ನು ಮುಂದುವರೆಸಿದೆ. ಆಂತರಿಕ ಲೆಕ್ಕಪರಿಶೋಧನೆಯು ವ್ಯವಹಾರದ ಪುನರವಲೋಕನ ಮತ್ತು ಪರಿಶೋಧನೆ ಉದ್ದೇಶ ಮತ್ತು ವ್ಯಾಪ್ತಿಯನ್ನು ಒಳಗೊಂಡಿರುತ್ತದೆ. ಕಂಪನಿಯ ಟಿಪ್ಪಣಿಗಳನ್ನು ಒಳಗೊಂಡಂತೆ ಆಂತರಿಕ ಲೆಕ್ಕಪರಿಶೋಧಕರು ತಮ್ಮ ವರದಿಯನ್ನು ಒದಗಿಸುತ್ತಾರೆ. ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸುವ ಆಧಾರದ ಮೇಲೆ ನಡೆಯುವ ಲೆಕ್ಕ ಪರಿಶೋಧನಾ ಸಮಿತಿಯ ಮುಂದೆ ಈ ವರದಿಯನ್ನು ಮಂಡಿಸಲಾಗುತ್ತದೆ.

### 14. ಅಪಾಯ ನಿರ್ವಹಣಾ ನೀತಿ

ಕಂಪನಿಯು ಎಲ್ಲಾ ಕಾರ್ಯಾಚರಣೆ ವಿಭಾಗಗಳ ಅಪಾಯದ ಅಂಶಗಳನ್ನು ಗುರುತಿಸಿದೆ ಮತ್ತು ಪ್ರತಿಯೊಂದು ಅಪಾಯದ ಉಪಶಮನ ಉಪಾಯವನ್ನು ಕಂಡುಕೊಂಡಿದೆ.

### 15. ವಾರ್ಷಿಕ ರಿಟರ್ನ್‌ನ ಸಾರಾಂಶ:

2013ರ ಕಂಪನಿಗಳ ಕಾಯ್ದೆಯ ಕಲಂ 92(3) ಮತ್ತು ಕಂಪನಿಗಳ (ವ್ಯವಸ್ಥಾಪನಾ ಮತ್ತು ಆಡಳಿತಾತ್ಮಕ) ನಿಯಮಗಳು, 2014ರ ನಿಯಮ 12(1) ರ ಅನುಸಾರವಾಗಿ ಎಂಜಿಟಿ 9ರಲ್ಲಿನ ವಾರ್ಷಿಕ ರಿಟರ್ನ್‌ನ ಸಾರಾಂಶವನ್ನು ಸದರಿ ವಾರ್ಷಿಕ ವರದಿಯ ಭಾಗವಾಗಿ ಅನುಬಂಧ-I ಆಗಿ ಲಗತ್ತಿಸಿದೆ.

### 16.ಹಣಕಾಸು ಹೇಳಿಕೆಗಳು ಸಂಬಂಧಿಸಿರುವ ಕಂಪನಿಯ ಆರ್ಥಿಕ ವರ್ಷದ ಕೊನೆ ಮತ್ತು ವರದಿಯ ದಿನಾಂಕ ಇದರ ನಡುವೆ ಉಂಟಾಗಿರುವ ಮತ್ತು ಕಂಪನಿಯ ಹಣಕಾಸಿನ ಪರಿಸ್ಥಿತಿಯ ಮೇಲೆ ಪರಿಣಾಮ ಬೀರುವ ಯಾವುದೇ ವಾಸ್ತವಿಕ ಬದಲಾವಣೆಗಳು ಮತ್ತು ಬದ್ಧತೆಗಳು.

ಕಂಪನಿಯ ಹಣಕಾಸು ವರ್ಷ ಮುಕ್ತಾಯಗೊಂಡ ನಂತರ ಅಂತಹ ಯಾವುದೇ ವಸ್ತು ಬದಲಾವಣೆ ಆಗಿರುವುದಿಲ್ಲ, ಇದಕ್ಕೆ ಕಂಪನಿಯ ಸ್ಥಿತಿ ವಿವರಣಾ ಪಟ್ಟಿಯೂ ಸಂಬಂಧಿಸಿರುತ್ತದೆ. ತೆರಿಗೆ ಹೊಣೆಗಾರಿಕೆ, ಪೇಟೆಂಟ್ (ಸ್ವಾಮ್ಯ) ಹಕ್ಕುಗಳು, ಹೂಡಿಕೆ ಮಾರುಕಟ್ಟೆ ಮೌಲ್ಯದ ಕುಸಿತ, ಕಂಪನಿಯಿಂದ ಅಥವಾ ಕಂಪನಿ ಮೇಲೆ ಹೂಡಿರುವ ಮೊಕದ್ದಮೆಗಳು, ಬಂಡವಾಳ ಸ್ವತ್ತುಗಳ ಮಾರಾಟ ಅಥವಾ ಖರೀದಿ, ಯಾವುದೇ ಆಸ್ತಿಯ ನಾಶ ಇತ್ಯಾದಿಯಿಂದ ವರದಿ ಸಲ್ಲಿಸುವ ದಿನಾಂಕದವರೆಗೆ ಏನೂ ಆಗಿರುವುದಿಲ್ಲ.

### 17. ಕಂಪನಿಯ ಹಾಲಿ ಬೆಳವಣಿಗೆ ಮತ್ತು ಭವಿಷ್ಯದ ಕಾರ್ಯಾಚರಣೆ ಮೇಲೆ ಪರಿಣಾಮ ಬೀರಬಹುದಾದ ಯಾವುದಾದರೂ ಗಮನಾರ್ಹವಾದ ಮತ್ತು ವಾಸ್ತವಿಕ ಆದೇಶಗಳನ್ನು ನಿಯಂತ್ರಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧೀಶರುಗಳಿಂದ ಹೊರಡಿಸಲಾಗಿದೆಯೇ ಇದ್ದರೆ ಅದರ ವಿವರಗಳು:

ಕಂಪನಿಯ ಹಾಲಿ ಸ್ಥಿತಿಗತಿ ಮತ್ತು ಭವಿಷ್ಯತ್ತಿನ ಕಾರ್ಯಾಚರಣೆ ಮೇಲೆ ಪರಿಣಾಮ ಬೀರಬಹುದಾದ ಆ ರೀತಿಯ ಯಾವುದೇ ಆದೇಶಗಳು ಜಾರಿಯಾಗಿರುವುದಿಲ್ಲ.

### 18. ಠೇವಣಿಗಳು

ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಗಳ ಕಾಯ್ದೆ -2013ರ ಐದನೇ ಅಧ್ಯಾಯದ ಅನ್ವಯ ಕಂಪನಿಯು ಸಾರ್ವಜನಿಕರಿಂದ ಪ್ರಸಕ್ತ ವರ್ಷದಲ್ಲಿ ಯಾವುದೇ ರೀತಿಯ ಠೇವಣಿಗಳನ್ನು ಸಂಗ್ರಹಿಸಿರುವುದಿಲ್ಲ.

## ನಿರ್ದೇಶಕರ ವರದಿ (ಮುಂದುವರೆದುದು)

### 19. ಸಂಬಂಧಪಟ್ಟ ವ್ಯಕ್ತಿ ವ್ಯವಹಾರಗಳು

ಪರಾಮರ್ಶನೆಯಲ್ಲಿರುವ ಈ ವರ್ಷದಲ್ಲಿ ಕಂಪನಿಗಳ ಕಾಯ್ದೆ-2013ರ ಕಲಂ 188ರ ಉಪಬಂಧಗಳ ಅನ್ವಯ ಕಂಪನಿಯು ಯಾವುದೇ ರೀತಿಯ ಗುತ್ತಿಗೆ ಮತ್ತು ಒಪ್ಪಂದಗಳನ್ನು ಮಾಡಿಕೊಂಡಿರುವುದಿಲ್ಲ.

### 20. ಕಾರ್ಯಕ್ಷೇತ್ರದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ನಿಯಂತ್ರಣ, ನಿರ್ಬಂಧ ಮತ್ತು ಪರಿಹಾರ) ಕಾಯ್ದೆ-2013ರ ಅನ್ವಯ ಕಂಪನಿಯ ಬಾಧ್ಯತೆಗಳು.

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ನಿಯಂತ್ರಿಸಲು ಕಾರ್ಯಕ್ಷೇತ್ರದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ನಿಯಂತ್ರಣ, ನಿರ್ಬಂಧ ಮತ್ತು ಪರಿಹಾರ) 2013ರ ಹೊಸ ಕಾಯ್ದೆಯನ್ನು 09.12.2013ರಂದು ಪ್ರಕಟಿಸಲಾಗಿದೆ. ಈ ಕಾಯ್ದೆಯ ಪ್ರಕಾರ ಯಾವುದೇ ಮಹಿಳಾ ಉದ್ಯೋಗಿಗಳು ಕೆಲಸದ ಸಂದರ್ಭದಲ್ಲಿ ತಮ್ಮ ಮೇಲೆ ಆದ ದೌರ್ಜನ್ಯಗಳ ಕುರಿತು ದೂರು ಸಲ್ಲಿಸಲು ಆಂತರಿಕ ದೂರು ಸಮಿತಿಯನ್ನು ರಚಿಸಬೇಕಾಗುತ್ತದೆ.

ಕಾರ್ಯಕ್ಷೇತ್ರದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ನಿಯಂತ್ರಣಕ್ಕೆ ಕಂಪನಿ ನೀತಿಯೊಂದನ್ನು ಅಳವಡಿಸಿಕೊಂಡಿದೆ. ಈ ನೀತಿಯನ್ನು ಜಾರಿಗೊಳಿಸಲು ಸಮಿತಿಯೊಂದನ್ನು ರಚಿಸಿದೆ. ಪ್ರಸಕ್ತ ವರ್ಷದಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಕಂಪನಿಗೆ ಯಾವುದೇ ರೀತಿಯ ದೂರುಗಳು ಬಂದಿರುವುದಿಲ್ಲ.

### 21. ಇಂಧನದ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ, ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹರಿಯುವಿಕೆ.

ಇಂಧನ ಉಳಿತಾಯ, ತಂತ್ರಜ್ಞಾನ ಅಳವಡಿಕೆ, ವಿದೇಶಿ ವಿನಿಮಯ ಗಳಿಕೆ ಮತ್ತು ಹೊರ ಹರಿಯುವಿಕೆಯು ಈ ಕೆಳಕಂಡಂತಿದೆ:

**ಅ) ಇಂಧನ ಸಂರಕ್ಷಣೆ**

ಕಂಪನಿಯು ವ್ಯಾಪಾರ ಸಂಬಂಧಿ ಚಟುವಟಿಕೆಯನ್ನು ಹೊಂದಿರುವುದರಿಂದ ಕೇವಲ ಕಚೇರಿ ಬಳಕೆಗೆ ಮಾತ್ರ ವಿದ್ಯುತ್ ಉಪಯೋಗಿಸುತ್ತದೆ. ಕಂಪನಿಯ ನೋಂದಾಯಿತ ಕಚೇರಿಯ ಛಾವಣಿಯ ಮೇಲೆ 15 ಕಿಲೋ ವಾಟ್ ಸೌರ ವಿದ್ಯುತ್ ಸ್ಥಾವರವನ್ನು ಅಳವಡಿಸಿಕೊಂಡು ವಿದ್ಯುತ್ ಉಳಿತಾಯ ಮಾಡುತ್ತಿದೆ ಮತ್ತು ವಿದ್ಯುತ್ ಬಳಕೆಯನ್ನು ಕನಿಷ್ಠಗೊಳಿಸಿದೆ.

**ಆ) ತಂತ್ರಜ್ಞಾನ ಅಳವಡಿಸಿಕೊಳ್ಳುವಿಕೆ.**

ಕಂಪನಿಯು ವ್ಯಾಪಾರ ಕಂಪನಿಯಾಗಿರುವುದರಿಂದ ಯಾವುದೇ ಸಂದರ್ಭದಲ್ಲೂ ಯಾರಿಂದಲೂ ಯಾವುದೇ ತಂತ್ರಜ್ಞಾನ ಪಡೆದುಕೊಂಡಿರುವುದಿಲ್ಲ.

**ಇ) ವಿದೇಶಿ ವಿನಿಮಯ ಗಳಿಕೆ ಮತ್ತು ಹೊರ ಹರಿಯುವಿಕೆ**

ವಿದೇಶಿ ವಿನಿಮಯ ಗಳಿಕೆ: ಶೂನ್ಯ (ಕಳೆದ ವರ್ಷ-ಶೂನ್ಯ)

ವಿದೇಶಿ ವಿನಿಮಯ ಹೊರ ಹರಿಯುವಿಕೆ: ಶೂನ್ಯ (ಕಳೆದ ವರ್ಷ-ಶೂನ್ಯ)

### 22. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್)

ಕಂಪನಿಗಳ ಕಾಯ್ದೆ-2013ರ ಉಪಬಂಧಗಳು ಮತ್ತು ಇದರ ಅಡಿಯಲ್ಲಿ ಮಾಡಿರುವ ನಿಯಮಗಳ ಅನುಸಾರ ಕಂಪನಿಯು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ಸಮಿತಿಯನ್ನು ರಚಿಸಿದೆ. ಕಂಪನಿಯು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸಿದ್ದು, ಇದಕ್ಕೆ ನಿರ್ದೇಶಕ ಮಂಡಳಿಯು ಅನುಮತಿ ನೀಡಿದೆ. ಸಿಎಸ್ಆರ್ ಸಮಿತಿಯು ಕೆಳಕಂಡ ನಿರ್ದೇಶಕರುಗಳನ್ನು ಸದಸ್ಯರನ್ನಾಗಿ ಒಳಗೊಂಡಿರುವುದು:

| | |
|---|---|
| 1. ಶ್ರೀ ಹಂಪನಗೌಡ ಬಾದರ್ಲಿ | ಅಧ್ಯಕ್ಷರು |
| 2. ಶ್ರೀ ದರ್ಪಣ್ ಜೈನ್ ಭಾ.ಆ.ಸೇ. | ಸದಸ್ಯರು |
| 3. ಶ್ರೀಮತಿ ಅನುರಾಧ ಬಸವರಾಜ್ ತಾಪ್ಲಿ | ಸದಸ್ಯರು |
| 4. ಶ್ರೀ ರಫೀಕ್ ಅಹಮದ್ ಬಿ ಪಕಾಲಿ | ಸದಸ್ಯರು |
| 5. ಶ್ರೀ ಎಂ.ಎಸ್. ಶ್ರೀಧರ್ | ಸದಸ್ಯರು |
| 6. ಶ್ರೀ ಗುಣಶೇಖರ | ಸದಸ್ಯರು |

2016-17ರ ಆರ್ಥಿಕ ವರ್ಷದ ಅವಧಿಯಲ್ಲಿ ಸಿಎಸ್ಆರ್ ಚಟುವಟಿಕೆಗಳಿಗೆ ಕಂಪನಿಯು ರೂ.68.40ಲಕ್ಷ ಮೊತ್ತವನ್ನು ಬಳಕೆ ಮಾಡಬೇಕಾಗಿದ್ದು, ಕಂಪನಿಯು ಮುಖ್ಯ ಮಂತ್ರಿಯವರ ಪರಿಹಾರ ನಿಧಿಗೆ ರೂ. 2 ಕೋಟಿ ನೀಡಿದೆ.

### 23. ಮಾನವ ಸಂಪನ್ಮೂಲಗಳು:

''ಮಾನವ ಸಂಪನ್ಮೂಲಗಳು'' ಒಂದು ಅಮೂಲ್ಯ ಆಸ್ತಿಯೆಂದು ನಿಮ್ಮ ಕಂಪನಿಯು ಪರಿಗಣಿಸಿದೆ.

ನಿಮ್ಮ ಕಂಪನಿಯ ಸಿಬ್ಬಂದಿಯ ತರಬೇತಿ ಮತ್ತು ಬೆಳವಣಿಗೆಗೆ ಮೊದಲ ಆದ್ಯತೆ ನೀಡುತ್ತಿದೆ. 2016-17ನೇ ಸಾಲಿನಲ್ಲಿ ಸಿಬ್ಬಂದಿಯ ಕಾರ್ಯದಕ್ಷತೆಯನ್ನು ವೃದ್ಧಿಸಲು 28 ಸಿಬ್ಬಂದಿಗಳಿಗೆ (11 ಮಂದಿ ಕಾರ್ಯನಿರ್ವಾಹಕರು/ಅಧಿಕಾರಿಗಳು ಮತ್ತು 17 ಸಿಬ್ಬಂದಿ) ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿದೆ.

ಕಂಪನಿಯಲ್ಲಿ ಒಟ್ಟಾರೆ 230 (33 ಕಾರ್ಯನಿರ್ವಾಹಕರು/ಅಧಿಕಾರಿ, 183 ಸಿಬ್ಬಂದಿ) ಕೆಲಸಗಾರರಿದ್ದಾರೆ. ಇದರಲ್ಲಿ 13 ಕೆಲಸಗಾರರನ್ನು (4 ಅಧಿಕಾರಿಗಳು, 9 ಕೆಲಸಗಾರರು) ಕರ್ನಾಟಕ ಪಾನೀಯ ನಿಗಮ ನಿಯಮಿತಕ್ಕೆ ಹಾಗೂ ಒಬ್ಬ ಅಧಿಕಾರಿಯನ್ನು ಲೋಕೋಪಯೋಗಿ ಇಲಾಖೆಗೆ ಎರವಲು ಸೇವೆ ಮೇಲೆ ಕಳುಹಿಸಲಾಗಿದೆ.

### 24. ಯೋಜನೆ/ಆಸ್ತಿ ಇಲಾಖೆ

ಕಂಪನಿಯು ಈಗಾಗಲೇ ಕಚೇರಿ ಹಾಗೂ ಉಗ್ರಾಣ ಮೂಲ ಸೌಲಭ್ಯ ಕ್ಷೇತ್ರಕ್ಕೆ ಅಡಿಯಿಟ್ಟಿದೆ. ಮೈಸೂರಿನಲ್ಲಿನ ಉಗ್ರಾಣ ಸಂಕೀರ್ಣವು ಆದಾಯ ಗಳಿಸುತ್ತಿದೆ. ಮಂಗಳೂರಿನ ಬೈಕಂಪಾಡಿಯಲ್ಲಿನ ಉಗ್ರಾಣ ಸಂಕೀರ್ಣವನ್ನು ಬಾಡಿಗೆಗೆ ಕೊಡಲಾಗಿದ್ದು, ಇದರಿಂದ ಆದಾಯ ಬರುತ್ತಿದೆ.

ಕಂಪನಿಯು ಪೀಣ್ಯ, ಹುಬ್ಬಳ್ಳಿ ಮತ್ತು ಕಲಬುರಗಿಯ ಜಮೀನಿನಲ್ಲಿ ಕಚೇರಿ ಹಾಗೂ ಉಗ್ರಾಣ ಸಂಕೀರ್ಣಗಳನ್ನು ನಿರ್ಮಿಸುವ ಪ್ರಕ್ರಿಯೆ ನಡೆಸುತ್ತಿದೆ. ಈ ಎಲ್ಲಾ ಯೋಜನೆಗಳು ಕಂಪನಿಗೆ ಮುಂಬರುವ ವರ್ಷಗಳಲ್ಲಿ ಹೆಚ್ಚುವರಿ ಆದಾಯ ಗಳಿಸಿಕೊಡುವವು.

## 25. ನಿರ್ದೇಶಕರ ಹೊಣೆಗಾರಿಕೆ ಹೇಳಿಕೆ

ಕಂಪನಿಗಳ ಕಾಯ್ದೆ–2013ರ ಕಲಂ 134 ಉಪ ಕಲಂ (3)ರ (ಸಿ) ಉಪವಾಕ್ಯದ ಅನ್ವಯ ನಿಮ್ಮ ನಿರ್ದೇಶಕರು ತಮ್ಮ ಜ್ಞಾನ, ತಿಳಿವಳಿಕೆ, ದೊರೆತ ಮಾಹಿತಿ, ವಿವರಣೆಗಳನ್ನು ಪಡೆದಂತೆ ಈ ಕೆಳಕಂಡ ಹೇಳಿಕೆಗಳನ್ನು ನೀಡಿರುತ್ತಾರೆ.

ಅ) ಮಾರ್ಚ್ 31, 2017ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರ ಸಿದ್ಧಪಡಿಸುವ ಸಂದರ್ಭದಲ್ಲಿ ಸಾಮಗ್ರಿಗಳ ರವಾನೆಗೆ ಸಂಬಂಧಿಸಿದಂತೆ ಸೂಕ್ತವಾದ ವಿವರಣೆ ಜೊತೆಗೆ ಅನ್ವಯವಾಗುವ ಲೆಕ್ಕಪತ್ರದ ಗುಣಮಟ್ಟಗಳನ್ನು ಅನುಸರಿಸಲಾಗಿದೆ.

ಆ) ಮಾರ್ಚ್ 31, 2017ರಂದು ಇದ್ದಂತೆ ಕಂಪನಿಯ ವ್ಯವಹಾರದ ಬಗ್ಗೆ ಮತ್ತು ಇದೇ ಅವಧಿಯಲ್ಲಿನ ಕಂಪನಿಯ ಲಾಭ ಮತ್ತು ನಷ್ಟದ ನೈಜವಾದ ಮತ್ತು ನ್ಯಾಯೋಚಿತವಾದ ಚಿತ್ರಣ ನೀಡಲು ನಿರ್ದೇಶಕರು ಸೂಕ್ತವಾದ ಲೆಕ್ಕಪತ್ರದ ನೀತಿಗಳನ್ನು ಆಯ್ಕೆ ಮಾಡಿದ್ದಾರೆ ಮತ್ತು ಅವುಗಳನ್ನು ಸ್ಥಿರವಾಗಿ ಅನ್ವಯಿಸಿದ್ದಾರೆ ಹಾಗೂ ಸೂಕ್ತವಾದ ಮತ್ತು ನ್ಯಾಯ ಸಮ್ಮತವಾದ ತೀರ್ಮಾನಗಳನ್ನು ಮತ್ತು ಅಂದಾಜುಗಳನ್ನು ಮಾಡಿದ್ದಾರೆ.

ಇ) ನಿರ್ದೇಶಕರು ಕಂಪನಿಯ ಸ್ವತ್ತನ್ನು ಸಂರಕ್ಷಿಸಲು ಮತ್ತು ವಂಚನೆ ಮತ್ತು ಇನ್ನಿತರೆ ಅಕ್ರಮಗಳು ನಡೆಯದಂತೆ ತಡೆಯುವುದು ಮತ್ತು ಪತ್ತೆ ಹಚ್ಚಲು ಸದರಿ ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಪ್ರಮಾಣದ ಲೆಕ್ಕದ ದಾಖಲೆಗಳನ್ನು ನಿರ್ವಹಣೆ ಮಾಡಲು ಸೂಕ್ತವಾದ ಮತ್ತು ಸಮರ್ಪಕವಾದ ಎಚ್ಚರಿಕೆ ವಹಿಸಿದ್ದಾರೆ;

ಈ) ನಿರ್ದೇಶಕರು ಮಾರ್ಚ್ 31, 2017ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಚಾಲ್ತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ವಾರ್ಷಿಕ ಲೆಕ್ಕಪತ್ರ ಸಿದ್ಧಪಡಿಸಿರುವರು; ಮತ್ತು

ಉ) ಎಲ್ಲಾ ಅನ್ವಯವಾಗುವ ಕಾನೂನುಗಳ ಉಪಬಂಧಗಳ ಅನುಸರಣೆಯನ್ನು ಖಾತರಿಪಡಿಸಲು ನಿರ್ದೇಶಕರು ಸೂಕ್ತವಾದ ವ್ಯವಸ್ಥೆಗಳನ್ನು ತಿಳಿಸಿದ್ದಾರೆ. ಸದರಿ ವ್ಯವಸ್ಥೆಗಳು ಸಾಕಷ್ಟು ಪ್ರಮಾಣದಲ್ಲಿದ್ದು, ಅವು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿವೆ.

## 26. ಹೂಡಿಕೆದಾರನ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ಹಣದ ವರ್ಗಾವಣೆ

ಕಳೆದ ಏಳು ವರ್ಷಗಳಲ್ಲಿ ನಿಮ್ಮ ಕಂಪನಿಯು ಯಾವುದೇ ರೀತಿಯ ಪಾವತಿಸದ ಮತ್ತು ಹಕ್ಕು ಕೇಳಿರದ ಮೊತ್ತವನ್ನು ಉಳಿಸಿಕೊಂಡಿಲ್ಲ.

ಆದ್ದರಿಂದ ಹೂಡಿಕೆದಾರನ ಶಿಕ್ಷಣ ಮತ್ತು ರಕ್ಷಣಾ ನಿಧಿ (ಐಇಪಿಎಫ್)ಗೆ ವರ್ಗಾಯಿಸಬೇಕಿರುವ ಯಾವುದೇ ನಿಧಿ ಇರುವುದಿಲ್ಲ.

## 27. ಕೃತಜ್ಞತೆಗಳು

ಅಮೂಲ್ಯವಾದ ನೆರವು ಮತ್ತು ಬೆಂಬಲ ನೀಡಿದ್ದಕ್ಕಾಗಿ ಕರ್ನಾಟಕ ಸರ್ಕಾರಕ್ಕೆ ವಿಶೇಷವಾಗಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಹಣಕಾಸು ಇಲಾಖೆಗೆ ವಿಶೇಷ ಕೃತಜ್ಞತೆಗಳು ಮತ್ತು ಧನ್ಯವಾದಗಳನ್ನು ತಿಳಿಸಲು ಈ ಅವಕಾಶವನ್ನು ನಿಮ್ಮ ನಿರ್ದೇಶಕರು ಬಳಸಿಕೊಂಡಿದ್ದಾರೆ. ಅಲ್ಲದೇ ನಿಮ್ಮ ಪೋಷಕ ಕಂಪನಿಯಾದ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದ ಮುಖ್ಯಸ್ಥರು, ಸರಬರಾಜುದಾರರು, ಬ್ಯಾಂಕರ್‌ಗಳು, ಗ್ರಾಹಕರು ಮತ್ತು ಸಮಾಜಕ್ಕೆ ಧನ್ಯವಾದ ತಿಳಿಸಲು ಬಯಸುತ್ತಾರೆ. ಕಂಪನಿಯ ಗುಣಮಟ್ಟ ನೀತಿಯನ್ನು ಪರಿಗಣಿಸಿ ಸಾರ್ವಜನಿಕ ವಲಯದಲ್ಲಿ ಕಂಪನಿಯ ಬಗ್ಗೆ ಜಾಗೃತಿಯನ್ನು ಮೂಡಿಸುವಲ್ಲಿ ಸಹಕಾರ ನೀಡಿದ ಮಾಧ್ಯಮಗಳನ್ನೂ ನೆನಪಿಸಿಕೊಳ್ಳುತ್ತಾರೆ.

ಅಲ್ಲದೇ ಭಾರತೀಯ ಲೆಕ್ಕಪರಿಶೋಧಕರು ಮತ್ತು ನಿಯಂತ್ರಕರು, ಕರ್ನಾಟಕದ ಪ್ರಧಾನ ಮಹಾ ಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ) ಮೆ॥ ಪಿ.ಚಂದ್ರಶೇಖರ್ ಅಂಡ್ ಅಸೋಸಿಯೇಟ್ಸ್– ಕಾನೂನುಬದ್ಧ ಲೆಕ್ಕಪರಿಶೋಧಕರು ಮತ್ತು ಚಾರ್ಟರ್ಡ್ ಅಕೌಂಟೆಂಟ್ಸ್, ಸೆಕ್ರೆಟೇರಿಯಲ್ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು ನೀಡಿದ ನೆರವು ಮತ್ತು ಸಹಕಾರಕ್ಕಾಗಿ ಇವರಿಗೆ ನಿರ್ದೇಶಕರು ವಿಶೇಷವಾಗಿ ಧನ್ಯವಾದ ಸಲ್ಲಿಸಿದ್ದಾರೆ.

ಇದಲ್ಲದೇ ನಿರ್ದೇಶಕರು ಕಂಪನಿಯ ಎಲ್ಲ ಹಂತದ ಸಿಬ್ಬಂದಿಗಳ ಕೊಡುಗೆಯನ್ನೂ ಇಲ್ಲಿ ಸ್ಮರಿಸಿಕೊಂಡಿದ್ದಾರೆ.

ನಿರ್ದೇಶಕರ ಮಂಡಳಿಯ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/–

**(ಹಂಪನಗೌಡ ಬಾದರ್ಲಿ)**

ಅಧ್ಯಕ್ಷರು

ಸ್ಥಳ : ಬೆಂಗಳೂರು

ದಿನಾಂಕ : 7ನೇ ಆಗಸ್ಟ್ 2017

**ಅನುಬಂಧ ವಿಷಯಸೂಚಿ**

| ಅನುಬಂಧ | ಮಾಹಿತಿ |
|---|---|
| I | ಎಂಜಿಟಿ–9ರಲ್ಲಿ ವಾರ್ಷಿಕ ರಿಟರ್ನ್‌ನ ಸಾರಾಂಶ |
| II | ಸಹಾಯಕ ಕಂಪನಿಗಳ ವಿವರಗಳು–ಎಒಸಿ–1 |
| III | ಎಂಆರ್–2 ಕಾರ್ಯದರ್ಶಿ ಮಟ್ಟದ ಲೆಕ್ಕಪರಿಶೋಧನಾ ವರದಿ |

## 2016-2017ನೇ ಆರ್ಥಿಕ ವರ್ಷದ ಲೆಕ್ಕಪರಿಶೋಧನ ವರದಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರ ಪ್ರಶ್ನೆಗೆ ವಿವರಣೆ (ಆಧಾರ: ಲೆಕ್ಕ ಪರಿಶೋಧನಾ ವರದಿಯ ಎರಡನೇ ಪುಟದ ಗುಣಾತ್ಮಕ ಅಭಿಪ್ರಾಯದ ಆಧಾರದ ಮೇಲೆ)

★ ಹಣಕಾಸಿನ ವರ್ಷ 2016-17ಕ್ಕೆ ಪಾವತಿಯಾದ ಷೇರು ಬಂಡವಾಳದ ಮೇಲೆ 51ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಷೇರುದಾರರುಗಳಿಂದ ಅನುಮೋದನೆಗೆ ಒಳಪಟ್ಟು 10% ಲಾಭಾಂಶ ಘೋಷಿಸಲು ದಿನಾಂಕ 7ನೇ ಆಗಸ್ಟ್ 2017ರಂದು ನಡೆದ ಸಭೆಯಲ್ಲಿ ಮಂಡಳಿಯು ಶಿಫಾರಸ್ಸು ಮಾಡಿದೆ. ಈ ಹಿನ್ನೆಲೆಯಲ್ಲಿ ಕಂಪನಿಯು ರೂ.2,01,76,600/- ಮೊತ್ತದ (ಪಾವತಿಯಾದ ಷೇರು ಬಂಡವಾಳದ ಮೇಲೆ 10% ಲಾಭಾಂಶ) ಹೊಣೆಗಾರಿಕೆಯನ್ನು ಮತ್ತು 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷಕ್ಕೆ ಲಾಭಾಂಶದ ಮೊತ್ತದ ಮೇಲೆ ರೂ.35,62,021/- ಮೊತ್ತದ ಲಾಭಾಂಶ ವಿತರಣೆ ತೆರಿಗೆಯನ್ನು ಒದಗಿಸಿದೆ. ಸದರಿ ವಿಷಯವನ್ನು ಷೇರುದಾರರ ಅನುಮೋದನೆಗಾಗಿ 51ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಮುಂದಿಡಲಾಗಿದೆ.

★ 2016-2017ರ ವರ್ಷಾವಧಿಯಲ್ಲಿ ಎಂಟಿ ಒಂದಕ್ಕೆ ರೂ.39,160.25ರ ದರದಂತೆ ಮೌಲ್ಯ ಮಾಡಿದ ಒಟ್ಟಾರೆ ರೂ.1,09,90,324/-ರ ಮೊತ್ತದ (ಎಂಟಿ ಒಂದಕ್ಕೆ ರೂ.11517.82 ರಂತೆ ಟೆಂಡರ್ ದರದ ಅನ್ವಯ) ಒಟ್ಟು 280.65 ಎಂಟಿಗಳ ಅನುಪಯುಕ್ತ ಕಚ್ಚಾ ಸಾಮಗ್ರಿ. ಸದರಿ ದಾಸ್ತಾನಿನ ಪೈಕಿ ಕಂಪನಿಯು 2016-17ರ ಅವಧಿಯಲ್ಲಿ 190.02 ಎಂಟಿಗಳ ಸಾಮಗ್ರಿಗಳನ್ನು ವಿಲೇವಾರಿ ಮಾಡಿದೆ ಮತ್ತು 14.53 ಎಂಟಿಗಳ ಪ್ರಮಾಣದ ಸಾಮಗ್ರಿಯನ್ನು ಬಳಕೆ ಮಾಡಿದೆ. ದಿನಾಂಕ:31.03.2017ರಂದು ಇದ್ದಂತೆ ಉಳಿದಿರುವ ದಾಸ್ತಾನು 76.10 ಎಂಟಿಗಳು ಮಾತ್ರ. ಇದರ ಮೌಲ್ಯ ಎಂಟಿ ಒಂದಕ್ಕೆ ರೂ.11517.82 ರಂತೆ ಮೌಲ್ಯವನ್ನು ಲೆಕ್ಕಾಚಾರ ಮಾಡುವುದಕ್ಕೆ ಬದಲಾಗಿ ಎಂಟಿ ಒಂದಕ್ಕೆ ರೂ.39160.25ರಂತೆ ಮೌಲ್ಯದಲ್ಲಿ ಲೆಕ್ಕ ಹಾಕಲಾಗಿದೆ. ಇದರಿಂದ 31.03.2017ರಂದು ಇದ್ದಂತೆ ರೂ.21,03,589/-ರ ಮೊತ್ತದಷ್ಟು ದಾಸ್ತಾನಿನ ಮೌಲ್ಯ ಹೆಚ್ಚಳವಾಗಿದೆ. ಸದರಿ ದಾಸ್ತಾನುಗಳನ್ನು ಸಹ ಏಪ್ರಿಲ್ ಮತ್ತು ಮೇ 2017ರ ತಿಂಗಳಿನಲ್ಲಿ ವಿಲೇವಾರಿ ಮಾಡಿದೆ. ಸರಕಿನ ಈ ಹೆಚ್ಚಳ ನಮೂದನ್ನು ಹಣಕಾಸಿನ ವರ್ಷ 2017-2018ರ ಅವಧಿಯಲ್ಲಿ ಸರಿಪಡಿಸಲಾಗುವುದು.

★ ನವಿ ಮುಂಬಯಿಯಲ್ಲಿನ 2520 ಚದರ ಮೀಟರುಗಳ ಜಮೀನಿಗೆ ಸಿಟಿ ಅಂಡ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಆಫ್ ಮಹಾರಾಷ್ಟ್ರ (ಸಿಐಡಿಸಿಒ) ಇವರು ಕರ್ನಾಟಕ ಸರ್ಕಾರದ (ಜಿಒಕೆ) ಜೊತೆ 5 ವರ್ಷದ ಅವಧಿಗೆ 'ಗುತ್ತಿಗೆ ಒಪ್ಪಂದ' ಪತ್ರಕ್ಕೆ 19.06.2000ರಂದು ಸಹಿ ಮಾಡಿದ್ದು, ರಾಜ್ಯ ಅತಿಥಿ ಗೃಹ ನಿರ್ಮಾಣವನ್ನು ಪರವಾನಗಿದಾರರು(ಜಿಒಕೆ) ಮಾಡಬೇಕೆಂಬ ಷರತ್ತಿನ ಮೇಲೆ ಜಮೀನಿಗೆ ಪ್ರವೇಶಿಸಲು ಮತ್ತು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು 5 ವರ್ಷಗಳ ಅವಧಿಗೆ (ಪರಸ್ಪರ ಒಪ್ಪಿಗೆ ಮೇರೆಗೆ ವಿಸ್ತರಿಸಬಹುದಾಗಿದ್ದು) ಪರವಾನಗಿ ನೀಡಿತ್ತು.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಕಟ್ಟಡ ನಿರ್ಮಾಣ ಪೂರ್ಣಗೊಂಡ ದಿನಾಂಕದಿಂದ 30 ವರ್ಷಗಳ ಅವಧಿಗೆ (ಪರಸ್ಪರ ಒಪ್ಪಿಗೆ ಮೇರೆಗೆ ವಿಸ್ತರಿಸಬಹುದಾಗಿರುವುದು) ನಿರ್ಮಾಣ, ಒಡೆತನ ಮತ್ತು ಕಾರ್ಯಾಚರಣೆ ಹಾಗೂ ವರ್ಗಾವಣೆ (ಬೂಟ್) ಆಧಾರದ ಮೇಲೆ ಕರ್ನಾಟಕ ಭವನ ನಿರ್ಮಾಣಕ್ಕೆ ಎಂಎಸ್‌ಐಎಲ್ ಜೊತೆ ದಿನಾಂಕ:01.10.2008ರಂದು ಒಪ್ಪಂದ ಮಾಡಿಕೊಂಡಿತ್ತು.

ಕಂಪನಿಯು ನವಿ ಮುಂಬಯಿ ಮುನಿಸಿಪಲ್ ಕಾರ್ಪೋರೇಷನ್ ಇವರಿಂದ ದಿನಾಂಕ 10ನೇ ಮಾರ್ಚ್ 2016ರಂದು ಸ್ವಾಧೀನ ಪತ್ರವನ್ನು ಪಡೆದುಕೊಂಡಿದ್ದು, 2016-17ರ ಹಣಕಾಸಿನ ವರ್ಷಕ್ಕೆ ಆಸ್ತಿ ತೆರಿಗೆ ಬಗ್ಗೆ ರೂ.14,11,556/- ಮೊತ್ತವನ್ನು ಕಂಪನಿ ಪಾವತಿ ಮಾಡಿದೆ. ದಿನಾಂಕ 31.03.2017ರಂದು ಇದ್ದಂತೆ ಮಾಡಿದ ರೂ.33,82,29,174/- ರ ಮೊತ್ತದ ಖರ್ಚುಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಅಡಿಯಲ್ಲಿ ವರ್ಗೀಕರಿಸಲಾಗಿದೆ. ಕಟ್ಟಡದ ಮುಖಭಾಗಕ್ಕೆ ಗ್ಲೇಜಿಂಗ್ ಕಾಮಗಾರಿ ಮತ್ತು ಇತರೆ ವಿವಿಧ ಕಾಮಗಾರಿಗಳು ಪ್ರಗತಿಯಲ್ಲಿವೆ.

ಕಂಪನಿಯು ಬಾಕಿಯಿರುವ ಕಾಮಗಾರಿಯನ್ನು ಪೂರ್ಣಗೊಳಿಸಿ 2017-18ರ ವರ್ಷದ ಅವಧಿಯಲ್ಲಿ ಆಸ್ತಿಯನ್ನು ಬಂಡವಾಳೀಕರಣಗೊಳಿಸುವ ದೃಢ ಭರವಸೆಯನ್ನು ಕಂಪನಿ ಹೊಂದಿದೆ.

★ ಸಾದಿಲ್ವಾರು ಸಾಲಗಾರರು, ಸಾದಿಲ್ವಾರು ಲೇಣೆದಾರರು, ವ್ಯವಹಾರ ಸಹವರ್ತಿಗಳು, ಜಂಟಿ ಸಹಭಾಗಿತ್ವ ಹಾಗೂ ಮುಂಗಡಗಳು/ಠೇವಣಿಗಳ ಲೆಕ್ಕಗಳಲ್ಲಿ 31ನೇ ಮಾರ್ಚ್ 2017ರಂದು ಇದ್ದಂತೆ ಕಂಪನಿಯು ಬಾಕಿಯ ಬಗ್ಗೆ ದೃಢೀಕರಣೆ ಕಳುಹಿಸಿದೆ. ಈ ಸಂಬಂಧ ನಮಗೆ ಭಾಗಶಃ ದೃಢೀಕರಣೆ ಬಂದಿದೆ.

ಅನುಬಂಧ-I

ಫಾರಂ ನಂ. ಎಂಜಿಟಿ 9
ವಾರ್ಷಿಕ ರಿಟರ್ನ್‌ನ ಸಾರಾಂಶ

31.03.2017ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿದ್ದಂತೆ

ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 92(3) ಮತ್ತು ಕಂಪನಿ (ವ್ಯವಸ್ಥಾಪನೆ ಮತ್ತು ಆಡಳಿತ)
ನಿಯಮಗಳು 2014ರ ನಿಯಮ 12(1)ರ ಅನುಸಾರ

## I. ನೋಂದಣಿ ಮತ್ತು ಇತರೆ ವಿವರಗಳು :

| | | |
|---|---|---|
| 1. | ಸಿಐಎನ್ | U85110KA1966SGC001612 |
| 2. | ನೋಂದಣಿ ದಿನಾಂಕ | 17.3.1966 |
| 3. | ಕಂಪನಿಯ ಹೆಸರು | ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ |
| 4. | ಕಂಪನಿಯ ಪ್ರವರ್ಗ/ಉಪ ಪ್ರವರ್ಗ | ಷೇರುಗಳಿಂದ ಕಂಪನಿ ನಿಯಮಿತವಾಗಿದೆ/ರಾಜ್ಯ ಸರ್ಕಾರದ ಕಂಪನಿ |
| 5. | ನೋಂದಾಯಿತ ಕಚೇರಿ ವಿಳಾಸ ಮತ್ತು ಸಂಪರ್ಕ ವಿವರ | "ಎಂಎಸ್‌ಐಎಲ್ ಹೌಸ್", ನಂ.36, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560 052. ದೂ. ಸಂಖ್ಯೆ : 080-22264021-26 |
| 6. | ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಕಂಪನಿಯೇ? | ಪಟ್ಟಿಯಲ್ಲಿ ಇಲ್ಲ. |
| 7. | ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರ, ಯಾವುದೇ ಇದ್ದಲ್ಲಿ | ಅನ್ವಯ ಆಗುವುದಿಲ್ಲ |

**II. ಕಂಪನಿಯ ಪ್ರಮುಖ ವ್ಯವಹಾರದ ಚಟುವಟಿಕೆಗಳು** (ಕಂಪನಿಯ ಒಟ್ಟು ವಹಿವಾಟಿನ ಶೇ.10 ಅಥವಾ ಅದಕ್ಕೂ ಅಧಿಕ ಕೊಡುಗೆಯನ್ನು ನೀಡುತ್ತಿರುವ ಎಲ್ಲಾ ವ್ಯವಹಾರ ಚಟುವಟಿಕೆಗಳನ್ನು ತಿಳಿಸತಕ್ಕದ್ದು)

| ಕ್ರ. ಸಂ. | ಪ್ರಮುಖ ಉತ್ಪನ್ನಗಳು / ಸೇವೆಗಳ ಹೆಸರು ಮತ್ತು ವಿವರಣೆ | ಉತ್ಪನ್ನ / ಸೇವೆಯ ಎನ್‌ಐಸಿ ಕೋಡ್ | ಕಂಪನಿಯ ಒಟ್ಟು ವಹಿವಾಟಿನ ಶೇಕಡವಾರು |
|---|---|---|---|
| 1 | ಪಾನೀಯಗಳು | 47221 | 82.43 |
| 2 | ಚಿಟ್ ಫಂಡ್ಸ್ | 64990 | 14.44 |

## III. ಧಾರಕ, ಸಹಾಯಕ ಮತ್ತು ಸಹ ಕಂಪನಿಗಳ ವಿವರ :

| ಕ್ರ. ಸಂ. | ಹೆಸರು | ಕಂಪನಿ ವಿಳಾಸ | ಸಿಐಎನ್/ ಜಿಎಲ್‌ಎನ್ | ಧಾರಕ/ ಸಹಾಯಕ/ ಸಹ ಸಂಸ್ಥೆ | ಹೊಂದಿರುವ ಶೇಕಡವಾರು ಷೇರು | ಅನ್ವಯಿತ ಸೆಕ್ಷನ್ |
|---|---|---|---|---|---|---|
| 1. | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ | ಖನಿಜ ಭವನ, 49, 4ನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-1 | U93000KA1964ULL001532 | ಧಾರಕ | 100% | ಸೆಕ್ಷನ್ 2(46) |
| 2. | ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | ನಂ.42, ಎಂಸಿಎ ಹೌಸ್, ಮಿಲ್ಲರ್ಸ್ ರಸ್ತೆ, ಬೆಂಗಳೂರು – 52 | U51101KA1972PLC002242 | ಸಹಾಯಕ | 100% | ಸೆಕ್ಷನ್ 2(87) |
| 3. | ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | C/o ಎಂಎಸ್‌ಐಎಲ್, ನಂ.36 ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 52 | U85110KA1940SGC000261 | ಸಹಾಯಕ | 95.10% | ಸೆಕ್ಷನ್ 2(87) |
| 4. | ಫುಡ್ ಕರ್ನಾಟಕ ಲಿಮಿಟೆಡ್ | ನಂ.17, ರಿಚ್‌ಮಂಡ್ ರಸ್ತೆ, ಬೆಂಗಳೂರು – 25 | U01513KA2003PLC031873 | ಸಹ ಸಂಸ್ಥೆ | 50% | ಸೆಕ್ಷನ್ 2(6) |

## VI. ಷೇರು ಹೊಂದಿರುವಿಕೆ ಸ್ವರೂಪ (ಒಟ್ಟು ಈಕ್ವಿಟಿ ಶೇಕಡವಾರು ಆಗಿ ಈಕ್ವಿಟಿ ಷೇರು ಬಂಡವಾಳದ ವಿಭಜನೆ)

**ಪ್ರವರ್ಗವಾರು ಷೇರು ಹೊಂದಿರುವಿಕೆ**

| ಷೇರುದಾರರ ಪ್ರವರ್ಗ | ವರ್ಷಾರಂಭದಲ್ಲಿ (31ನೇ ಏಪ್ರಿಲ್ 2016ರಂದು) ಮತ್ತು ವರ್ಷಾಂತ್ಯದಲ್ಲಿ (31.03.2016) ಹೊಂದಿದ್ದ ಷೇರುಗಳ ಸಂಖ್ಯೆ | | | | ವರ್ಷಾಂತ್ಯದಲ್ಲಿ (31ನೇ ಮಾರ್ಚ್ 2017ರಂದು) ಹೊಂದಿದ್ದ ಷೇರುಗಳ ಸಂಖ್ಯೆ | | | | ವರ್ಷದಲ್ಲಿ ಬದಲಾವಣೆ ಶೇ. |
|---|---|---|---|---|---|---|---|---|---|
| | ಡಿಮ್ಯಾಟ್ | ಭೌತಿಕ | ಒಟ್ಟು | ಒಟ್ಟು ಷೇರುಗಳ ಶೇ. | ಡಿಮ್ಯಾಟ್ | ಭೌತಿಕ | ಒಟ್ಟು | ಒಟ್ಟು ಷೇರುಗಳ ಶೇ. | |
| **ಎ. ಪ್ರವರ್ತಕರು** | | | | | | | | | |
| (1) **ಭಾರತೀಯ** | | | | | | | | | |
| ಎ) ವೈಯಕ್ತಿಕ/ಹೆಚ್‌ಯುಎಫ್ | | | | | | | | | |
| ಬಿ) ಕೇಂದ್ರ ಸರ್ಕಾರ | | | | | | | | | |
| ಸಿ) ರಾಜ್ಯ ಸರ್ಕಾರ(ಗಳು) | | | | | | | | | |
| ಡಿ) ಬಾಡೀಸ್ ಕಾರ್ಪೋರೇಟ್ | | 2017660 | 2017660 | 100% | N.A. | 2017660 | 2017660 | 100% | ಇಲ್ಲ |
| ಇ) ಬ್ಯಾಂಕ್‌ಗಳು/ಎಫ್‌ಐ | | | | | | | | | |
| ಎಫ್) ಇತರೆ ಯಾವುದೇ | | | | | | | | | |
| **ಪ್ರವರ್ತಕರ (ಎ) ಒಟ್ಟು ಷೇರುದಾರಿಕೆ** | | | | | | | | | |
| | | | | | | | | | |
| **ಬಿ. ಸಾರ್ವಜನಿಕ ಷೇರುದಾರಿಕೆ** | | | | | | | | | |
| 1. ಸಂಸ್ಥೆಗಳು | | | | | | | | | |
| ಎ) ಮ್ಯೂಚುವಲ್ ಫಂಡ್ಸ್ | | | | | | | | | |
| ಬಿ) ಬ್ಯಾಂಕ್‌ಗಳು/ಎಫ್‌ಐ | | | | | | | | | |
| ಸಿ) ಕೇಂದ್ರ ಸರ್ಕಾರ | | | | | | | | | |
| ಡಿ) ರಾಜ್ಯ ಸರ್ಕಾರ(ಗಳು) | | | | | | | | | |
| ಇ) ವೆಂಚರ್ ಕ್ಯಾಪಿಟಲ್ ಫಂಡ್ಸ್ | | | | | | | | | |
| ಎಫ್) ವಿಮಾ ಕಂಪನಿಗಳು | | | | | | | | | |
| ಜಿ) ಎಫ್‌ಐಐಎಸ್ | | | | | | | | | |
| ಹೆಚ್) ವಿದೇಶಿ ವೆಂಚರ್ ಕ್ಯಾಪಿಟಲ್ ಫಂಡ್ಸ್ | | | | | | | | | |
| i) ಇತರೆ (ವಿವರಿಸಿ) | | | | | | | | | |
| **ಉಪ ಒಟ್ಟು (ಬಿ)(1):** | | | | | | | | | |

| | | | | | | | | | |
|---|---|---|---|---|---|---|---|---|---|
| **2. ಸಂಸ್ಥೆಯೇತರ** | | | | | | | | | |
| ಎ) ಬಾಡೀಸ್ ಕಾರ್ಪೊರೇಟ್ | | | | | | | | | |
| i) ಭಾರತೀಯ | | | | | | | | | |
| ii) ಸಾಗರೋತ್ತರ | | | | | | | | | |
| ಬಿ) ವೈಯಕ್ತಿಕ | | | | | | | | | |
| i) ರೂ.1 ಲಕ್ಷದವರೆಗಿನ ಸಾಧಾರಣ ಷೇರು ಬಂಡವಾಳ ಹೊಂದಿರುವ ವ್ಯಕ್ತಿ ಷೇರುದಾರರು | | | | | | | | | |
| ii) ರೂ.1 ಲಕ್ಷಕ್ಕೂ ಹೆಚ್ಚಿನ ಸಾಧಾರಣ ಷೇರು ಬಂಡವಾಳ ಹೊಂದಿರುವ ವ್ಯಕ್ತಿ ಷೇರುದಾರರು | | | | | | | | | |
| ಸಿ) ಇತರೆ (ವಿವರಿಸಿ) | | | | | | | | | |
| ಅನಿವಾಸಿ ಭಾರತೀಯರು | | | | | | | | | |
| ಸಾಗರೋತ್ತರ ಕಾರ್ಪೊರೇಟ್ ಸಂಸ್ಥೆಗಳು | | | | | | | | | |
| ವಿದೇಶಿ ಪ್ರಜೆಗಳು | | | | | | | | | |
| ಕ್ಲಿಯರಿಂಗ್ ಮೆಂಬರ್ಸ್ | | | | | | | | | |
| ಟ್ರಸ್ಟ್ಸ್ | | | | | | | | | |
| ವಿದೇಶಿ ಸಂಸ್ಥೆಗಳು – ಡಿ ಆರ್ | | | | | | | | | |
| **ಉಪ ಒಟ್ಟು (ಬಿ)(2):** | | | | | | | | | |
| ಒಟ್ಟು ಸಾರ್ವಜನಿಕ ಷೇರುದಾರಿಕೆ (ಬಿ)=(ಬಿ)(1)+ (ಬಿ)(2) | | | | | | | | | |
| **ಸಿ) ಜಿಡಿಆರ್ ಮತ್ತು ಎಡಿಆರ್‌ಗಳ ಮೇಲ್ವಿಚಾರಕರು ಹೊಂದಿರುವ ಷೇರು** | | | | | | | | | |
| **ಒಟ್ಟು (ಎ+ಬಿ+ಸಿ)** | | 2017660 | 2017660 | 100% | N.A. | 2017660 | 2017660 | 100% | ಇಲ್ಲ |

## ಬಿ) ಪ್ರವರ್ತಕರು ಹೊಂದಿರುವ ಷೇರುದಾರಿಕೆ

| ಕ್ರ. ಸಂ. | ಷೇರುದಾರರ ಹೆಸರು | ವರ್ಷಾರಂಭದಲ್ಲಿ ಹೊಂದಿದ್ದ ಷೇರುಗಳು | | | ವರ್ಷಾಂತ್ಯದಲ್ಲಿ ಹೊಂದಿದ್ದ ಷೇರುಗಳು | | | ವರ್ಷದಲ್ಲಿನ ಷೇರುದಾರಿಕೆಯ ಬದಲಾವಣೆ ಶೇ. |
|---|---|---|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರಿನ ಶೇ. | ಒಟ್ಟು ಷೇರುಗಳ ಅಡಮಾನ / ಹೊರೆ ಶೇ. | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. | ಒಟ್ಟು ಷೇರುಗಳ ಅಡಮಾನ / ಹೊರೆಯ/ ಶೇ. | |
| 1 | ಕೆಎಸ್‌ಐಐಡಿಸಿ ಕೆಳಕಂಡ 6 ವ್ಯಕ್ತಿಗಳು ಕೆಎಸ್‌ಐಐಡಿಸಿಯ ಪರವಾಗಿ ಷೇರು ಹೊಂದಿರುವವರು | 2017570 | 99.999% | – | 2017570 | 99.999% | – | – |
| | 1) ಎಂಡಿ, ಕೆಎಸ್‌ಐಐಡಿಸಿ | 30 | | | 30 | | | |
| | 2) ಎಂಡಿ, ಎಂಎಸ್‌ಐಎಲ್ | 10 | | | 10 | | | |
| | 3) ಎನ್.ಆರ್.ಎನ್. ಸಿಂಹ | 20 | | | 20 | | | |
| | 4) ವೈ. ಶ್ರೀನಿವಾಸಪ್ಪ | 10 | | | 10 | | | |
| | 5) ಎನ್.ಕೆ. ಪರಶುರಾಮ್ | 10 | | | 10 | | | |
| | 6) ಡಿ.ವಿಶ್ವನಾಥ್ | 10 | | | 10 | | | |

## ಸಿ) ಪ್ರವರ್ತಕರ ಷೇರುದಾರಿಕೆಯಲ್ಲಿ ಬದಲಾವಣೆ (ಬದಲಾವಣೆ ಇಲ್ಲದಿದ್ದರೆ ವಿವರಿಸಿ)

| ಕ್ರ. ಸಂ. | ವಿವರಗಳು | ವರ್ಷಾರಂಭದಲ್ಲಿ ಹೊಂದಿದ್ದ ಷೇರುದಾರಿಕೆ | | ವರ್ಷಾವಧಿಯಲ್ಲಿ ಹೊಂದಿದ್ದ ಸಂಚಿತ ಷೇರುದಾರಿಕೆ | |
|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. |
| | ವರ್ಷಾರಂಭದಲ್ಲಿ | ಬದಲಾವಣೆ ಇಲ್ಲ | | | |
| | ವರ್ಷದಲ್ಲಿ ಪ್ರವರ್ತಕರ ಷೇರುದಾರಿಕೆಯಲ್ಲಿ ದಿನಾಂಕವಾರು ಏರಿಕೆ/ಇಳಿಕೆ ಏರಿಕೆ / ಇಳಿಕೆ ಬಗ್ಗೆ ಕಾರಣ ತಿಳಿಸಿ (ಉದಾ: ಹಂಚಿಕೆ/ವರ್ಗಾವಣೆ/ ಬೋನಸ್/ಸ್ವೆಟ್ ಈಕ್ವಿಟಿ ಇತ್ಯಾದಿ): | | | | |
| | ವರ್ಷಾಂತ್ಯದಲ್ಲಿ | | | | |

**ಡಿ) ಪ್ರಮುಖ 10 ಷೇರುದಾರರ ಷೇರುದಾರಿಕೆ ಮಾದರಿ :**
**(ಜಿಡಿಆರ್‌ಗಳು ಮತ್ತು ಎಡಿಆರ್‌ಗಳ ಧಾರಕರು, ನಿರ್ದೇಶಕರು, ಪ್ರವರ್ತಕರು ಹೊರತಾಗಿ): ಇಲ್ಲ**

### ಇ) ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿ ಹೊಂದಿರುವ ಷೇರುಗಳು:

| ಕ್ರ. ಸಂ. | ಪ್ರತಿ ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿ ಹೊಂದಿರುವ ಷೇರುಗಳು | ವರ್ಷಾರಂಭದಲ್ಲಿ ಹೊಂದಿದ್ದ ಷೇರುಗಳು | | ವರ್ಷದಲ್ಲಿ ಹೊಂದಿದ್ದ ಸಂಚಿತ ಷೇರುಗಳು | |
|---|---|---|---|---|---|
| | | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇ. |
| | ವರ್ಷಾರಂಭದಲ್ಲಿ- | | | | |
| 1. | ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ | 30 | 0.001% | 30 | 0.001% |
| 2 | ವ್ಯವಸ್ಥಾಪಕ ನಿರ್ದೇಶಕರು, ಎಂಎಸ್ಐಎಲ್/ಪ್ರಮುಖ ಆಡಳಿತ ಸಿಬ್ಬಂದಿ | 10 | 0.0005% | 10 | 0.0005% |
| | ವರ್ಷದಲ್ಲಿ ಪ್ರವರ್ತಕರ ಷೇರುದಾರಿಕೆಯಲ್ಲಿ ದಿನಾಂಕವಾರು ಏರಿಕೆ/ಇಳಿಕೆ. ಈ ಏರಿಕೆ / ಇಳಿಕೆಗೆ ಕಾರಣ ವಿವರಿಸಿ (ಉದಾ: ಹಂಚಿಕೆ/ವರ್ಗಾವಣೆ/ಬೋನಸ್/ಸ್ವೆಟ್ ಈಕ್ವಿಟಿ ಇತ್ಯಾದಿ) : | | | | |
| | ವರ್ಷಾಂತ್ಯದಲ್ಲಿ - ಷೇರುದಾರಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ | ಬದಲಾವಣೆ ಇಲ್ಲ | | | |

### V. ಋಣಗಾರಿಕೆ- ಕಂಪನಿಯ ಋಣಗಾರಿಕೆಯಲ್ಲಿ ಬಾಕಿಯಿರುವ/ಸಂಚಯನವಾದ ಆದರೆ ಪಾವತಿ ಮಾಡಬೇಕಿಲ್ಲದ ಬಡ್ಡಿ ಸೇರಿರುವುದು

(ರೂ. ಲಕ್ಷಗಳಲ್ಲಿ)

| | ಠೇವಣಿ ಹೊರತಾದ ಭದ್ರತಾ ಸಾಲಗಳು | ಅಭದ್ರತಾ ಸಾಲಗಳು | ಠೇವಣಿ | ಒಟ್ಟು ಋಣಬದ್ಧತೆ |
|---|---|---|---|---|
| ಹಣಕಾಸು ವರ್ಷಾರಂಭದಲ್ಲಿ ಋಣಬದ್ಧತೆ | | | | |
| i) ಅಸಲು ಮೊತ್ತ | - | - | - | - |
| ii) ಪಾವತಿಸಬೇಕಾಗಿರುವ ಆದರೆ ಪಾವತಿಸದಿರುವ ಬಡ್ಡಿ | – | 53.88 | – | 53.88 |
| iii) ಸಂಚಯನವಾದ ಆದರೆ ಪಾವತಿ ಮಾಡಬೇಕಿಲ್ಲದ ಬಡ್ಡಿ | – | | – | |
| ಒಟ್ಟು (i+ii+iii) | – | 53.88 | – | 53.88 |
| ಹಣಕಾಸು ವರ್ಷದ ಅವಧಿಯಲ್ಲಿ ಋಣಬದ್ಧತೆಯಲ್ಲಿನ ಬದಲಾವಣೆ | | | | |
| ★ ಸೇರ್ಪಡೆ | | | | |
| ★ ಕ್ಷೀಣತೆ | | | | |
| ನಿವ್ವಳ ಬದಲಾವಣೆ | | | | |
| ಹಣಕಾಸು ವರ್ಷಾಂತ್ಯದಲ್ಲಿ ಋಣಬದ್ಧತೆ | | | | |
| i) ಅಸಲು ಮೊತ್ತ | - | - | - | - |
| ii) ಪಾವತಿಸಬೇಕಾದ ಆದರೆ ಪಾವತಿಸಿಲ್ಲದ ಬಡ್ಡಿ | – | 53.88 | – | 53.88 |
| iii) ಸಂಚಯನವಾದ ಆದರೆ ಪಾವತಿಸಬೇಕಿಲ್ಲದ ಬಡ್ಡಿ | – | | – | |
| ಒಟ್ಟು (i+ii+iii) | – | 53.88 | – | 53.88 |

## VI. ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಸಂಭಾವನೆ :

### ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿಯ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರ ಸಂಭಾವನೆ :

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಸಂಭಾವನೆಯ ವಿವರ | ಎಂಡಿ/ಡಬ್ಲ್ಯೂಟಿಡಿ/ವ್ಯವಸ್ಥಾಪಕರ ಹೆಸರು | | | | ಒಟ್ಟು ಮೊತ್ತ |
|---|---|---|---|---|---|---|
| | | ಎಂಡಿ* | ..... | ..... | ..... | |
| 1 | ಒಟ್ಟು ವೇತನ | | | | | |
| | (ಎ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(1)ರಲ್ಲಿ ಒಳಗೊಂಡಿರುವ ಮುನ್ನೇರ್ಪಾಡುಗಳಂತೆ ವೇತನ | 7.88 | – | – | – | 7.88 |
| | (ಬಿ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(2)ರನ್ವಯ ಅನುಷಂಗಿಕ ಸವಲತ್ತುಗಳ ಮೌಲ್ಯ | | – | | | – |
| | (ಸಿ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(3)ರನ್ವಯ ವೇತನದ ಬದಲಾಗಿ ಲಾಭ | | | | | |
| 2 | ಸ್ಟಾಕ್ ಆಪ್ಷನ್ | | | | | |
| 3 | ಸ್ವೆಟ್ ಈಕ್ವಿಟಿ | | | | | |
| 4 | ಕಮಿಷನ್-ಲಾಭದ ಶೇಕಡವಾರು ಆಗಿ - ಇತರೆ, ವಿವರಿಸಿ ... | | | | | |
| 5 | ಇತರೆ, ವಿವರಿಸಿ ... | – | – | – | – | – |
| | ಒಟ್ಟು (ಎ) | 7.88 | | | | 7.88 |
| | ಕಾಯ್ದೆಯಂತೆ ಮಿತಿ | | | | | |

*ವ್ಯವಸ್ಥಾಪಕ ನಿರ್ದೇಶಕರವರಿಗೆ ನೀಡಿದ ಸಂಬಳದ ಅವಧಿ ಏಪ್ರಿಲ್ 1, 2016 ರಿಂದ 21.09.2016ರವರೆಗೆ.

### ಬಿ. ಇತರೆ ನಿರ್ದೇಶಕರ ಸಂಭಾವನೆ :

| ಕ್ರ.ಸಂ. | ಸಂಭಾವನೆಯ ವಿವರ | ನಿರ್ದೇಶಕರ ಹೆಸರು | ಒಟ್ಟು ಮೊತ್ತ |
|---|---|---|---|
| 1 | ಸ್ವತಂತ್ರ ನಿರ್ದೇಶಕರು:<br>ಮಂಡಳಿ ಸಮಿತಿ ಸಭೆಗಳಿಗೆ ಹಾಜರಾಗಿದ್ದಕ್ಕೆ ಶುಲ್ಕ:<br>ಪ್ರತಿ ಸಭೆಗೆ ರೂ.1,000/- | ಶ್ರೀ ಡಿ.ವಿ.ಪ್ರಸಾದ್, ಭಾ.ಆ.ಸೇ.<br>ಶ್ರೀ ಹಂಪನಗೌಡ ಬಾದರ್ಲಿ<br>ಡಾ.ಜಿ.ಸಿ.ಪ್ರಕಾಶ್, ಭಾ.ಆ.ಸೇ.<br>ಶ್ರೀ ರಿತೇಶ್‌ಕುಮಾರ್ ಸಿಂಗ್, ಭಾ.ಆ.ಸೇ.<br>ಶ್ರೀಮತಿ ರೇಣುಕ ಚಿದಂಬರಂ, ಭಾ.ಆ.ಸೇ.<br>ಶ್ರೀ ಗೌರವ್ ಗುಪ್ತ, ಭಾ.ಆ.ಸೇ.<br>ಶ್ರೀ ನವೀನ್‌ರಾಜ್ ಸಿಂಗ್, ಭಾ.ಆ.ಸೇ.<br>ಶ್ರೀ ರಫೀಕ್ ಅಹ್ಮದ್ ಬಿ.ಪಕಾಲಿ<br>ಶ್ರೀ ಎನ್.ಬಾಲ್‌ರಾಜ್<br>ಶ್ರೀ ಆರ್. ತಮ್ಮಣ್ಣ<br>ಶ್ರೀ ಗುಣಶೇಖರ್<br>ಶ್ರೀಮತಿ ಅನುರಾಧ ಬಸವರಾಜ್ ತಪ್ಲಿ<br>ಶ್ರೀ ಚಲುವರಾಜು<br>ಶ್ರೀ ಕೆ.ವೆಂಕಟಸ್ವಾಮಪ್ಪ<br>ಶ್ರೀ ಸನತ್‌ಕುಮಾರ್ ಎಸ್.ಆರ್.<br>ಶ್ರೀ ಎಂ.ಎಸ್.ಶ್ರೀಧರ | 3000.00<br>ಇಲ್ಲ<br>ಇಲ್ಲ<br>1000.00<br>2000.00<br>2000.00<br>4000.00<br>4000.00<br>4000.00<br>4000.00<br>4000.00<br>4000.00<br>7000.00<br>4000.00<br>7000.00<br>3000.00 |
| | ಕಮಿಷನ್ | | |
| | ಇತರೆ, ದಯಮಾಡಿ ವಿವರಿಸಿ | | |
| | ಒಟ್ಟು (1) | | |

| | | | |
|---|---|---|---|
| 2 | ಇತರೆ ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು | | |
| | ಮಂಡಳಿ ಸಮಿತಿ ಸಭೆಗಳಿಗೆ ಹಾಜರಾಗಿದ್ದಕ್ಕೆ ಶುಲ್ಕ | | |
| | ಕಮಿಷನ್ | | |
| | ಇತರೆ, ದಯಮಾಡಿ ವಿವರಿಸಿ | | |
| | ಒಟ್ಟು (2) | | |
| | ಒಟ್ಟು (ಬಿ)=(1+2) | | |
| | ವ್ಯವಸ್ಥಾಪಕರ ಒಟ್ಟು ಸಂಭಾವನೆ | | |
| | ಕಾಯ್ದೆಯಂತೆ ಒಟ್ಟಾರೆ ಮಿತಿ | | |

ಸಿ. ಎಂಡಿ/ವ್ಯವಸ್ಥಾಪಕರು/ಡಬ್ಲ್ಯೂಟಿಡಿ ಹೊರತಾಗಿ ಪ್ರಮುಖ ಆಡಳಿತ ಸಿಬ್ಬಂದಿ ಸಂಭಾವನೆ

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಸಂಭಾವನೆಯ ವಿವರಗಳು | ಪ್ರಮುಖ ಆಡಳಿತ ಸಿಬ್ಬಂದಿ | | | |
|---|---|---|---|---|---|
| | | ಸಿಇಒ | ಸಿಎಸ್ | ಸಿಎಫ್ಒ | ಒಟ್ಟು |
| 1 | ಒಟ್ಟು ವೇತನ | | | | |
| | (ಎ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(1)ರಲ್ಲಿ ಇರುವ ಮುನ್ನೇರ್ಪಾಡುಗಳಂತೆ ವೇತನ | | 13.50 | 15.10 | 28.60 |
| | (ಬಿ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(2)ರನ್ವಯ ಅನುಷಂಗಿಕ ಸವಲತ್ತುಗಳ ಮೌಲ್ಯ | | 0.27 | 1.99 | 2.26 |
| | (ಸಿ) ಆದಾಯ ತೆರಿಗೆ ಕಾಯ್ದೆ 1961ರ ಸೆ. 17(3)ರನ್ವಯ ವೇತನಕ್ಕೆ ಬದಲಾಗಿ ಲಾಭ | | – | – | – |
| 2 | ಸ್ಟಾಕ್ ಆಪ್ಷನ್ | | – | – | – |
| 3 | ಸ್ವೆಟ್ ಈಕ್ವಿಟಿ | | | | |
| 4 | ಕಮಿಷನ್ | | | | |
| | - ಲಾಭ ಶೇ, ಆಗಿ | | | | |
| | - ಇತರೆ, ವಿವರಿಸಿ | | | | |
| 5 | ಇತರೆ, ದಯಮಾಡಿ ವಿವರಿಸಿ | | | | |
| | ಒಟ್ಟು | | 13.77 | 17.09 | 30.86 |

**VII. ದಂಡಗಳು/ಶಿಕ್ಷೆ/ಅಪರಾಧಗಳ ಸಂಯೋಜನೆ :**

| ಮಾದರಿ | ಕಂಪನಿಗಳ ಕಾಯ್ದೆಯ ಸೆಕ್ಷನ್ | ಸಂಕ್ಷಿಪ್ತ ವಿವರ | ವಿಧಿಸಿದ ದಂಡ /ಶಿಕ್ಷೆ ಸಂಯೋಜಿತ ಶುಲ್ಕದ ವಿವರ | ಪ್ರಾಧಿಕಾರ [RD / NCLT/ ಕೋರ್ಟ್] | ಸಲ್ಲಿಸಿರುವ ಮೇಲ್ಮನವಿ ಯಾವುದೇ ಇದ್ದಲ್ಲಿ (ವಿವರ ನೀಡಿ) |
|---|---|---|---|---|---|
| ಎ. ಕಂಪನಿ | | | ಇಲ್ಲ | | |
| ದಂಡ | | | | | |
| ಶಿಕ್ಷೆ | | | | | |
| ಸಂಯೋಜಿತ | | | | | |
| ಬಿ. ನಿರ್ದೇಶಕರು | | | ಇಲ್ಲ | | |
| ದಂಡ | | | | | |
| ಶಿಕ್ಷೆ | | | | | |
| ಸಂಯೋಜಿತ | | | | | |
| ಸಿ. ತಪ್ಪಿತಸ್ಥ ಇತರೆ ಅಧಿಕಾರಿಗಳು | | | ಇಲ್ಲ | | |
| ದಂಡ | | | | | |
| ಶಿಕ್ಷೆ | | | | | |
| ಸಂಯೋಜಿತ | | | | | |

## ಅನುಬಂಧ-II

## ಸಹಾಯಕ ಕಂಪನಿ ಸಂಬಂಧ ಕಂಪನಿಗಳ ಕಾಯ್ದೆ 1956ರ ಸೆಕ್ಷನ್ 212(8)ರ ಅನ್ವಯ ಹೇಳಿಕೆ

ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ 2011ರ ಫೆಬ್ರವರಿ 8ರ ಸಾಮಾನ್ಯ ಸುತ್ತೋಲೆ ಸಂಖ್ಯೆ 2/2011ರ ಅನುಸಾರ ಸಹಾಯಕ ಕಂಪನಿಯ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ಇತರೆ ದಾಖಲಾತಿಗಳನ್ನು ಕಂಪನಿಯ ವಾರ್ಷಿಕ ಲೆಕ್ಕಪತ್ರಗಳೊಂದಿಗೆ ಲಗತ್ತಿಸಿಲ್ಲ. ಸಹಾಯಕ ಕಂಪನಿಯ ವಾರ್ಷಿಕ ಲೆಕ್ಕಪತ್ರಗಳು ಮತ್ತು ಸಂಬಂಧಿತ ಮಾಹಿತಿಯನ್ನು ಕೋರಿಕೆ ಮೇರೆಗೆ ಕಂಪನಿಯ ಮತ್ತು ಇದರ ಸಹಾಯಕ ಕಂಪನಿಯ ಷೇರುದಾರರಿಗೆ ಒದಗಿಸಲಾಗುವುದು ಹಾಗೂ ಇವುಗಳನ್ನು ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಮತ್ತು ಸಹಾಯಕ ಕಂಪನಿಯಲ್ಲಿ ಷೇರುದಾರರ ಪರಿಶೀಲನೆಗೆ ತೆರೆದಿಡಲಾಗುವುದು.

| | |
|---|---|
| ಸಹಾಯಕ ಕಂಪನಿಯ ಹೆಸರು | ಮೆ॥ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿ. |
| ವಿತರಿಸಿದ ಮತ್ತು ಚಂದಾದಾರಿತ ಬಂಡವಾಳ | ರೂ.75,74,040/- |
| ಮೀಸಲುಗಳು | ರೂ.(8,53,43,026/-) |
| ಒಟ್ಟು ಆಸ್ತಿಗಳು | ರೂ.1,30,13,499/- |
| ಒಟ್ಟು ಹೊಣೆಗಾರಿಕೆಗಳು | ರೂ.9,83,56,525/- |
| ಹೂಡಿಕೆಗಳು | - |
| ವಹಿವಾಟು | - |
| ತೆರಿಗೆ ಮುಂಚಿನ ಲಾಭ/(ನಷ್ಟ) | ರೂ.5,95,572/- |
| ತೆರಿಗೆಗಾಗಿ ಮುನ್ನೇರ್ಪಾಡು | ರೂ.1,85,500/- |
| ತೆರಿಗೆ ನಂತರದ ಲಾಭ/(ನಷ್ಟ) | ರೂ.4,10,072/- |
| ಉದ್ದೇಶಿತ ಲಾಭಾಂಶ | ಇಲ್ಲ |

| | |
|---|---|
| ಸಹಾಯಕ ಕಂಪನಿಯ ಹೆಸರು | ಮೆ॥ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ |
| ವಿತರಿಸಿದ ಮತ್ತು ಚಂದಾದಾರಿತ ಬಂಡವಾಳ | ರೂ.3,57,25,200/- |
| ಮೀಸಲುಗಳು | ರೂ.98,51,37,001/- |
| ಒಟ್ಟು ಆಸ್ತಿಗಳು | ರೂ.1,71,36,77,648/- |
| ಒಟ್ಟು ಹೊಣೆಗಾರಿಕೆಗಳು | ರೂ.72,85,40,647/- |
| ಹೂಡಿಕೆಗಳು | - |
| ವಹಿವಾಟು | ರೂ.216,45,15,743/- |
| ತೆರಿಗೆ ಮುಂಚಿನ ಲಾಭ/(ನಷ್ಟ) | ರೂ.20,83,86,967/- |
| ತೆರಿಗೆಗಾಗಿ ಮುನ್ನೇರ್ಪಾಡು | ರೂ.6,00,00,000/- |
| ತೆರಿಗೆ ನಂತರದ ಲಾಭ/(ನಷ್ಟ) | ರೂ.13,89,95,845/- |
| ಉದ್ದೇಶಿತ ಲಾಭಾಂಶ | ರೂ.35,72,520/- |

## ಅನುಬಂಧ-III

## ಫಾರಂ ಸಂಖ್ಯೆ ಎಂಆರ್-3
## ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿ

## 2017ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ

[ಕಂಪನಿಗಳ ಕಾಯ್ದೆ 2013 ಸೆಕ್ಷನ್ 204(1) ಮತ್ತು ಕಂಪನಿಗಳ (ಆಡಳಿತ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ ಸಂಖ್ಯೆ 9ರ ಅನ್ವಯ]

ಗೆ,

ಸದಸ್ಯರು,
**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

ನಾನು/ನಾವು ಅನ್ವಯಿತ ಶಾಸನಬದ್ಧ ಮುನ್ನೇರ್ಪಾಡುಗಳ ಅನುಸಾರ ಕಾರ್ಯದರ್ಶಿ ಲೆಕ್ಕಪರಿಶೋಧನೆ ಹಾಗೂ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (**U85110KA1966SGC001612**) ನೋಂದಾಯಿತ ಕಚೇರಿ, ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು-52 (ಇನ್ನು ಮುಂದೆ ಕಂಪನಿ ಎಂದು ಕರೆಯಲಾಗುವುದು) ಉತ್ತಮ ಕಾರ್ಪೊರೇಟ್ ಅಭ್ಯಾಸಗಳ ಅನುಸರಣೆಯ ಪರಿಶೋಧನೆ ಮಾಡಿದ್ದೇವೆ.

ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ಪ್ರಮುಖವಾಗಿ ವ್ಯಾಪಾರ ಚಟುವಟಿಕೆಗಳ ಜೊತೆಗೆ, ಚಿಟ್ ಫಂಡ್, ವ್ಯವಹಾರ, ಟೂರ್ಸ್ ಅಂಡ್ ಟ್ರಾವೆಲ್ಸ್ ವ್ಯವಹಾರದಲ್ಲಿ ತೊಡಗಿಸಿಕೊಂಡಿದೆ. ಅಲ್ಲದೇ ಇದು ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟ ಕಂಪನಿಯಾದ ಕೆಎಸ್‌ಐಐಡಿಸಿಯ ಸಹಾಯಕ ಕಂಪನಿ ಆಗಿದೆ. ಸಂಸ್ಥೆಯ ಅಂತರ್ ನಿಯಮಗಳಂತೆ ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ನೀಡಿದ ನಿರ್ದೇಶನಗಳು ಮತ್ತು ಮಾರ್ಗದರ್ಶಗಳನ್ನು ಕಂಪನಿಯು ಪಾಲಿಸುವ ಅಗತ್ಯವಿದೆ. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ 2015ರ ಜೂನ್ 5ರ ದಿನಾಂಕದ ಪ್ರಕಟಣೆ ಸಂಖ್ಯೆ : ಜಿ.ಎಸ್.ಆರ್, 463(ಇ) ರಂತೆ ಕಂಪನಿಗಳ ಕಾಯ್ದೆ 2013ರ ಕೆಲ ಮುನ್ನೇರ್ಪಾಡುಗಳನ್ನು ಅನುಸರಿಸಲು ಸರ್ಕಾರಿ ಕಂಪನಿಗಳಿಗೆ ವಿನಾಯಿತಿ ಲಭ್ಯವಿರುವುದು.

ಕಾರ್ಪೋರೇಟ್ ಮಾರ್ಗದರ್ಶನ/ಶಾಸನಬದ್ಧ ಅನುಕರಣೆಗಳ ಮೌಲ್ಯಮಾಪನಕ್ಕೆ ನನಗೆ/ನಮಗೆ ಒದಗಿಸಿರುವ ಸೂಕ್ತವಾದ ಆಧಾರದ ಮೇಲೆ ಕಾರ್ಯದರ್ಶಿ ಲೆಕ್ಕಪರಿಶೋಧನೆ ಮಾಡಲಾಗಿದೆ ಮತ್ತು ಆ ಬಗ್ಗೆ ನನ್ನ ಅಭಿಪ್ರಾಯ ತಿಳಿಸಲಾಗಿದೆ.

ಕಂಪನಿಯು ನಿರ್ವಹಿಸಿರುವ ಪುಸ್ತಕಗಳು, ಪತ್ರಗಳು, ಮಿನಿಟ್ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಿರುವ ರಿಟರ್ನ್ ಇತರೆ ದಾಖಲಾತಿಗಳನ್ನು ನಾನು/ನಾವು ಪರಿಶೀಲನೆ ಮಾಡಿದ ಆಧಾರದಲ್ಲಿ ಕಾರ್ಯದರ್ಶಿ ಲೆಕ್ಕಪರಿಶೋಧನೆ ನಡೆಸಿದ ಅವಧಿಯಲ್ಲಿ ಕಂಪನಿ ತನ್ನ ಅಧಿಕಾರಿಗಳು, ಏಜೆಂಟ್ಸ್ ಮತ್ತು ಅಧಿಕೃತ ಪ್ರತಿನಿಧಿಗಳು ಒದಗಿಸಿದ ಮಾಹಿತಿಯನ್ನು ಗಮನಿಸಲಾಗಿದೆ. ನನ್ನ/ನಮ್ಮ ಅಭಿಪ್ರಾಯದಂತೆ, ಕಂಪನಿ ಒದಗಿಸಿದಂತೆ 2017ನೇ ಮಾರ್ಚ್ 31ರ ಹಣಕಾಸು ವರ್ಷಾಂತ್ಯ ಒಳಗೊಳ್ಳುವ ಪರಿಶೋಧನಾ ಅವಧಿಯಲ್ಲಿ ನಾನು/ನಾವು ವರದಿ ಮಾಡಿದ್ದೇವೆ ಹಾಗೂ ಕೆಳಗೆ ಪಟ್ಟಿ ಮಾಡಲಾದ ಶಾಸನಬದ್ಧ ಮುನ್ನೇರ್ಪಾಡುಗಳನ್ನು ಅನುಸರಿಸಲಾಗಿದೆ. ಕಂಪನಿಯು ಸೂಕ್ತ ಮಂಡಳಿ-ಪ್ರಕ್ರಿಯೆ ಮತ್ತು ಅನುಸರಣೆ - ವ್ಯವಸ್ಥೆ ಕೌಶಲ್ಯ ಹೊಂದಿದ್ದು ಅದರ ಅನುಸಾರ ವರದಿ ಮಾಡಲಾಗಿದೆ.

ಕೆಳಕಂಡ ಉಪಬಂಧಗಳ ಅನುಸಾರ 2017ನೇ ಮಾರ್ಚ್ 31ರ ವರ್ಷಾಂತ್ಯಕ್ಕೆ ಕಂಪನಿ ನಿರ್ವಹಿಸಿದ ಪುಸ್ತಕಗಳು, ಪತ್ರಗಳು, ಮಿನಿಟ್ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಕೆಗಳು ಮತ್ತು ಇತರೆ ದಾಖಲಾತಿಗಳನ್ನು ನಾನು/ನಾವು ಪರಿಶೀಲಿಸಿದ್ದೇವೆ:

ಎ) ಕಂಪನಿಗಳ ಕಾಯ್ದೆ, 2013 (ಕಾಯ್ದೆ) ಮತ್ತು ಇದರ ಅಡಿಯಲ್ಲಿ ರೂಪಿಸಿರುವ ನಿಯಮಗಳು; ಕಂಪನಿಯು ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ (ಸಿಎಸ್‌ಆರ್) ಬಗ್ಗೆ ನೀತಿಯನ್ನು ರೂಪಿಸಿದೆ ಮತ್ತು ಸಿಎಸ್‌ಆರ್ ಚಟುವಟಿಕೆಗಳು/ಯೋಜನೆಗಳಿಗಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ.2 ಕೋಟಿ ನೀಡಿದೆ. ಮತ್ತು ಸಿಎಸ್‌ಆರ್ ಚಟುವಟಿಕೆಗಳು ಯೋಜನೆಗಳ ಬಗ್ಗೆ ಇತರೆ ಸಂಸ್ಥೆಗಳಿಗೆ ರೂ.17,25,000/- ಹಣ ನೀಡಿದೆ. ಇನ್ನೂ ಹೆಚ್ಚಿನ ಷೇರುಗಳನ್ನು ನೀಡಲು ಪ್ರಸ್ತಾವನೆಯು ಪರಿಗಣನೆಯಲ್ಲಿದೆ.

FMSIL

ಬಿ) ಭದ್ರತಾ ಗುತ್ತಿಗೆಗಳ (ರೆಗ್ಯುಲೇಷನ್) ಕಾಯ್ದೆ 1956 (ಎಸ್‌ಸಿಆರ್‌ಎ) ಮತ್ತು ಇದರಡಿ ಮಾಡಿರುವ ನಿಯಮಗಳು;

ಸಿ) ಕರ್ನಾಟಕ ಚಿಟ್ ಫಂಡ್ ಕಾಯ್ದೆ 1982 (ಚಿಟ್ ಫಂಡ್ ವ್ಯವಹಾರ ನಡೆಸುತ್ತಿರುವುದರಿಂದಾಗಿ ಕಂಪನಿಯನ್ನು ಬ್ಯಾಂಕಿಂಗೇತರ ಹಣಕಾಸು ಕಂಪನಿಯೆಂದು ವರ್ಗೀಕರಿಸುವ ಅಗತ್ಯವಿಲ್ಲ ಎಂಬ ವಿಚಾರ ನಮಗೆ ತಿಳಿದು ಬಂದಿದೆ).

ಡಿ) ಕರ್ನಾಟಕ ಅಬಕಾರಿ ಕಾಯ್ದೆ, 1968

ಇ) ಕರ್ನಾಟಕ ಅಂಗಡಿ ಮಳಿಗೆಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961

ಎಫ್) ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ 1999 ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹರಿವಿನ ಪ್ರಮಾಣಕ್ಕೆ ಇದರಡಿ ರೂಪಿಸಿರುವ ನಿಯಮಗಳು, ನಿಯಂತ್ರಣಗಳು.

ಜಿ) ವೃತ್ತಿ, ವ್ಯಾಪಾರ, ಕಸಬು ಮತ್ತು ಉದ್ಯೋಗದ ಮೇಲಿನ ಕರ್ನಾಟಕ ತೆರಿಗೆ ಕಾಯ್ದೆ, 1976

ಹೆಚ್) ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ, ನಿವಾರಣೆ) ಕಾಯ್ದೆ, 2013

ಐ) ನೌಕರರ ಭವಿಷ್ಯ ನಿಧಿ ಮತ್ತು ಸಾದಿಲ್ವಾರು ಉಪಬಂಧಗಳ ಕಾಯ್ದೆ, 1952

ಜೆ) ಹೆರಿಗೆ ಸೌಲಭ್ಯಗಳ ಕಾಯ್ದೆ,1961

ಕೆ) ಕನಿಷ್ಠ ವೇತನಗಳ ಕಾಯ್ದೆ, 1948

ಎಲ್) ಬೋನಸ್ ಪಾವತಿ ಕಾಯ್ದೆ, 1965

ಎಂ) ಗ್ರಾಚುಯಿಟಿ ಪಾವತಿ ಕಾಯ್ದೆ, 1972

ಎನ್) ವೇತನಗಳ ಪಾವತಿ ಕಾಯ್ದೆ 1936

ಒ) ಅಪ್ರೆಂಟೀಸ್ ಕಾಯ್ದೆ, 1961

ಪಿ) ಅಗತ್ಯ ಸರಕುಗಳ ಕಾಯ್ದೆ, 1955

ಕ್ಯೂ) ಫಾರ್ಮಸಿ ಉತ್ಪನ್ನಗಳ ಚಿಲ್ಲರೆ ಮಾರಾಟಕ್ಕಾಗಿ ಪರವಾನಗಿ/ನೋಂದಣಿ.

---

ನಾನು/ನಾವು ಕೆಳಕಂಡ ಅನ್ವಯಿತ ಕಲಂಗಳನ್ನು ಅನುಸರಣೆ ಮಾಡಿರುವುದನ್ನು ಸಹ ಪರಿಶೀಲಿಸಿದ್ದೇವೆ:

ಎ. ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯಿಂದ ನೀಡಿರುವ ಕಾರ್ಯದರ್ಶಿಯ ಮಾನದಂಡಗಳು (1ನೇ ಜುಲೈ 2015ರಿಂದ ಅನ್ವಯವಾಗುವುದು)

ಬಿ. ಸೆಕ್ಷನ್ 149(1)ರ ನಿಬಂಧನೆ ಅನ್ವಯ ಮತ್ತು ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದ ಅಧಿಸೂಚನೆ ಸಂ.ಜಿ.ಎಸ್.ಆರ್.463 (ಇ) ದಿನಾಂಕ: 5ನೇ ಜೂನ್ 2015 ಅನ್ವಯ ಅಗತ್ಯವಾದಂತೆ ಕಾರ್ಯನಿರ್ವಾಹಕ ನಿರ್ದೇಶಕರು, ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು, ಸ್ವತಂತ್ರ ನಿರ್ದೇಶಕರು ಮತ್ತು ಮಹಿಳಾ ನಿರ್ದೇಶಕರ ಸೂಕ್ತ ಸಮತೋಲನದೊಂದಿಗೆ ಕಂಪನಿಯ ನಿರ್ದೇಶಕ ಮಂಡಳಿಯನ್ನು ಸ್ಥಾಪಿಸಲಾಗಿದೆ ಎಂದು ನಾನು/ನಾವು ವರದಿ ಮಾಡುತ್ತೇವೆ.

ಸಿ. ಪರಾಮರ್ಶನೆಯ ಅವಧಿಯಲ್ಲಿನ ಆದ ನಿರ್ದೇಶಕ ಮಂಡಳಿಯ ಸಂಯೋಜನೆಯಲ್ಲಿನ ಬದಲಾವಣೆಯನ್ನು ಕಾಯ್ದೆಯ ಉಪಬಂಧಗಳ ಅನುಸರಣೆಯಂತೆ ನಡೆಸಲಾಗಿದೆ.

ಡಿ. ಎಲ್ಲಾ ನಿರ್ದೇಶಕರಿಗೆ ಮಂಡಳಿಯ ಸಭೆಗಳ ವೇಳಾಪಟ್ಟಿ, ಕಾರ್ಯಸೂಚಿ ಮತ್ತು ಕಾರ್ಯಸೂಚಿ ಮೇಲಿನ ವಿವರವಾದ ಟಿಪ್ಪಣಿಗಳನ್ನು ಸಿದ್ಧಪಡಿಸಲು ಕನಿಷ್ಠ 7 ದಿನಗಳ ಮುಂಚಿತವಾಗಿ ನೋಟೀಸ್ ನೀಡಲಾಗಿದೆ ಮತ್ತು ಸಭೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ಸಭೆ ನಡೆಯುವ ಮುನ್ನ ಕಾರ್ಯಸೂಚಿ ಬಾಬ್ತುಗಳ ಬಗ್ಗೆ, ಉದ್ದೇಶಗಳ ಬಗೆಗಿನ ಹೆಚ್ಚುವರಿ ಮಾಹಿತಿ, ಮತ್ತು ಸ್ಪಷ್ಟೀಕರಣಗಳನ್ನು ಪಡೆಯಬಹುದಾದ ವ್ಯವಸ್ಥೆ ಇರುವುದು.

ಇ. ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದ್ದರೂ, ಸದಸ್ಯರ ಅಸಮ್ಮತಿ ಇತರೆ ಯಾವುದಾದರೂ ಆಗಲಿ ಇದ್ದಲ್ಲಿ ಅದನ್ನು ಮಿನಿಟ್ ಭಾಗವಾಗಿ ದಾಖಲಿಸಲಾಗಿದೆ.

ನಾನು/ನಾವು ವರದಿ ಮಾಡುವುದೇನೆಂದರೆ ಅನ್ವಯಿತ ಕಾನೂನು, ನಿಯಮ, ನಿಯಂತ್ರಣಗಳು ಮತ್ತು ಮಾರ್ಗದರ್ಶನಗಳನ್ನು ಅನುಸರಣೆ ಖಾತರಿಪಡಿಸಲು ಮತ್ತು ಮೇಲ್ವಿಚಾರಿಸಲು ಕಂಪನಿಯ ಗಾತ್ರ ಮತ್ತು ಕಾರ್ಯಾಚರಣೆಗಳ ಆಧಾರದ ಮೇಲೆ ಕಂಪನಿಯಲ್ಲಿ ಸಾಕಷ್ಟು ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳು ಇವೆ.

ನಾನು/ನಾವು ಮುಂದುವರಿದು ತಿಳಿಸುವುದೇನೆಂದರೆ ಕಂಪನಿಯು ಲೆಕ್ಕ ಪರಿಶೋಧನಾ ಅವಧಿಯಲ್ಲಿ:

(i) ಸಾರ್ವಜನಿಕ/ಹಕ್ಕು/ಆದ್ಯತಾ ಷೇರುಗಳ/ಡಿಬೆಂಚರ್ಸ್/ಸ್ವೆಟ್ ಈಕ್ವಿಟಿ ಇತ್ಯಾದಿಯನ್ನು ನೀಡಿರುವುದಿಲ್ಲ.

(ii) ಸೆಕ್ಯೂರಿಟಿಗಳ ಮರುಗಳಿಕೆ/ಮರಳಿ ಖರೀದಿ ಅಗತ್ಯವಿರುವುದಿಲ್ಲ.

(iii) ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 180ರ ಸಂಬಂಧ ಸದಸ್ಯರುಗಳು ಯಾವುದೇ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿರುವುದಿಲ್ಲ.

(iv) ವಿಲೀನ/ಸಂಯೋಜನೆ/ಪುನರ್ ರಚನೆ ಇತ್ಯಾದಿಯನ್ನು ಕೈಗೊಂಡಿರುವುದಿಲ್ಲ.

(v) ವಿದೇಶಿ ತಾಂತ್ರಿಕ ಸಹಭಾಗಿತ್ವಗಳನ್ನು ಮಾಡಿಕೊಂಡಿರುವುದಿಲ್ಲ.

ಸಾಮಾನ್ಯವಾಗಿ ಕಂಪನಿಯು ಸರ್ಕಾರಿ ಕಂಪನಿಯಾಗಿರುವುದರಿಂದ ಮತ್ತು ಸಿಎಜಿ ಪರಿಶೋಧನೆಗೆ ಒಳಪಟ್ಟಿರುವುದರಿಂದ ಎಲ್ಲಾ ಅಗತ್ಯ ದಾಖಲೆಗಳನ್ನು ಸೂಕ್ತವಾಗಿ ನಿರ್ವಹಿಸಲಾಗಿದೆ ಹಾಗೂ ವಿವಿಧ ಅನ್ವಯಿತ ಕಾನೂನುಗಳ ಅನುಸರಣೆಗಾಗಿ ವ್ಯವಸ್ಥೆಗಳು ಮತ್ತು ಕ್ರಮಾವಳಿಗಳನ್ನು ರೂಪಿಸಲಾಗಿದೆ.

ಸ್ಥಳ : ಬೆಂಗಳೂರು
ದಿನಾಂಕ : 07.08.2017

ಸಹಿ/-
**ಎಸ್. ವಿಶ್ವನಾಥನ್**
ಕಾರ್ಯನಿರತ ಕಂಪನಿ ಕಾರ್ಯದರ್ಶಿ
ACS No. : 5284
CP. No. : 5284

## ಫಾರಂ ಎಒಸಿ-1

## ಸಹಾಯಕ ಕಂಪನಿಗಳು/ಸಹ ಕಂಪನಿಗಳು/ಸಹಭಾಗಿ ಉದ್ಯಮಗಳ ಹಣಕಾಸು ಹೇಳಿಕೆಗಳ ವೈಶಿಷ್ಟ್ಯತೆಯನ್ನು ಒಳಗೊಂಡ ವಿವರ

### ಭಾಗ ಎ : ಸಹಾಯಕ ಕಂಪನಿಗಳು

| ಕ್ರ. ಸಂ. | ಸಹಾಯಕ ಕಂಪನಿ ಹೆಸರು | ವರದಿ ಅವಧಿ | ವರದಿಯಲ್ಲಿ ಬಳಸಿರುವ ಕರೆನ್ಸಿ | ಷೇರು ಬಂಡವಾಳ (ಆದ್ಯತಾ ಷೇರು ಸೇರಿ) | ಮೀಸಲುಗಳು ಮತ್ತು ಹೆಚ್ಚಳಗಳು | ಒಟ್ಟು ಆಸ್ತಿ | ಒಟ್ಟು ಹೊಣೆಗಾರಿಕೆಗಳು (ಷೇರು ಬಂಡವಾಳ ಮತ್ತು ಮೀಸಲು ಹೊರತುಪಡಿಸಿ) | ಹೂಡಿಕೆಗಳು | ವಹಿವಾಟು | ಇತರೆ ಆದಾಯ | ಒಟ್ಟು ಆದಾಯ | ತೆರಿಗೆಗೆ ಮುಂಚಿನ ಲಾಭ/ ನಷ್ಟ | ತೆರಿಗೆಗಾಗಿ ಮುನ್ನೇರ್ಪಾಡು (ಮುಂದೂಡಿದ ತೆರಿಗೆ ಸೇರಿ) | ತೆರಿಗೆ ನಂತರದ ಲಾಭ/(ನಷ್ಟ) | ಈಕ್ವಿಟಿ ಷೇರುಗಳ ಮೇಲೆ ಉದ್ದೇಶಿತ ಲಾಭಾಂಶ ಶೇ. | ಈಕ್ವಿಟಿ ಷೇರುಗಳ ಮೇಲೆ ಪ್ರಸ್ತಾಪಿತ ಲಾಭಾಂಶ | ಷೇರುದಾರಿಕೆ ಶೇಕಡವಾರು |
|---|---|---|---|---|---|---|---|---|---|---|---|---|---|---|---|---|---|
| 1 | ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | 31.03.2017 | ಭಾರತದ ರೂಪಾಯಿ | 357.25 | 9707.59 | 16068.17 | 6003.33 | - | 21234.21 | 435.16 | 21669.37 | 2210.39 | 964.21 | 1246.18 | 7.50% | 26.79 | 100% |
| 2 | ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | 31.03.2017 | ಭಾರತದ ರೂಪಾಯಿ | 75.74 | (853.43) | 130.13 | 907.82 | - | - | 8.46 | 8.46 | 5.96 | 1.85 | 4.11 | - | - | 95.10% |

## 2017ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷಕ್ಕಾಗಿ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು ಇದರ ಹಣಕಾಸಿನ ಹೇಳಿಕೆಗಳ ಬಗ್ಗೆ 2013ರ ಕಂಪನಿಗಳ ಕಾಯ್ದೆಯ ಪ್ರಕರಣ 143(6)(ಬಿ)ರ ಅನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆಗಳು

2013ರ ಕಂಪನಿಗಳ ಕಾಯ್ದೆಯಡಿಯಲ್ಲಿ ನಿಗದಿಪಡಿಸಿರುವ ಹಣಕಾಸು ವರದಿ ಚೌಕಟ್ಟಿನ ಅನುಸಾರ **31ನೇ ಮಾರ್ಚ್ 2017ಕ್ಕೆ** ಕೊನೆಗೊಂಡ ವರ್ಷಕ್ಕೆ **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು** ಇದರ ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಯು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಾಯ್ದೆಯ ಪ್ರಕರಣ 139(5)ರನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಇವರಿಂದ ನೇಮಕಗೊಂಡ ಲೆಕ್ಕಪರಿಶೋಧಕರು/ಶಾಸನಬದ್ಧ ಲೆಕ್ಕಪರಿಶೋಧಕರು ಕಾಯ್ದೆಯ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕಪರಿಶೋಧನೆ ಬಗ್ಗೆಗಿನ ಗುಣಮಟ್ಟದ ಅನುಸಾರ ಸ್ವತಂತ್ರ ಲೆಕ್ಕಪರಿಶೋಧನೆ ಆಧಾರದ ಮೇಲೆ, ಕಾಯ್ದೆಯ ಪ್ರಕರಣ 143ರ ಅನ್ವಯ ಸದರಿ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಹೊಣೆಯಾಗಿರುತ್ತಾರೆ. **ದಿನಾಂಕ 18.10.2017ರ** ಅವರ ಲೆಕ್ಕಪರಿಶೋಧನೆ ವರದಿಯಂತೆ ಅವರಿಂದ ಇದನ್ನು ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ.

ಭಾರತದ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಪರವಾಗಿ, ನಾನು **31ನೇ ಮಾರ್ಚ್ 2017ಕ್ಕೆ** ಕೊನೆಗೊಂಡ ವರ್ಷದ **''ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು''**ನ ಹಣಕಾಸು ಹೇಳಿಕೆಗಳ ಕಾಯ್ದೆಯ ಸೆಕ್ಷನ್ 143(6)(ಎ) ಅಡಿಯಲ್ಲಿ ಪೂರಕ ಲೆಕ್ಕಪರಿಶೋಧನೆ ಮಾಡಿದ್ದೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯಾಚರಣೆ ಕಾಗದ ಪತ್ರಗಳನ್ನು ಬಳಸದೆ ಸ್ವತಂತ್ರವಾಗಿ ನಡೆಸಲಾಗಿದೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪನಿಯ ಸಿಬ್ಬಂದಿ ವಿಚಾರಣೆಗಳಿಗೆ ಮತ್ತು ಕೆಲವು ಆಯ್ದ ಲೆಕ್ಕಪತ್ರಗಳ ದಾಖಲೆಗಳ ಪರಿಶೀಲನೆಗೆ ಸೀಮಿತವಾಗಿರುತ್ತದೆ. ಪೂರಕ ಲೆಕ್ಕಪರಿಶೋಧನೆ ಅವಧಿಯಲ್ಲಿ ಗುರುತಿಸಿದ ನನ್ನ ಲೆಕ್ಕಪರಿಶೋಧನೆ ಅಭಿಪ್ರಾಯದ ಕಾರಣ 'ಲೆಕ್ಕಪರಿಶೋಧಕರ ವರದಿಯಲ್ಲಿ ಮಾಡಿರುವ ಪರಿಷ್ಕರಣೆ(ಗಳ) ಹಿನ್ನೆಲೆಯಲ್ಲಿ ಇದರ ಮೇಲೆ ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಪೂರಕವಾಗಿ ಕಾಯ್ದೆಯ ಪ್ರಕರಣ 143(6)(ಬಿ) ಅನ್ವಯ ನಾನು ಯಾವುದೇ ಹೆಚ್ಚಿನ ಟೀಕೆಗಳನ್ನು ಮಾಡುವುದಿಲ್ಲ.

**ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ**
**ಪರವಾಗಿ ಮತ್ತು ಹೆಸರಿನಲ್ಲಿ**
**ಸಹಿ/-**
**(ಬಿಜಿತ್ ಕುಮಾರ್ ಮುಖರ್ಜಿ)**
**ಅಕೌಂಟೆಂಟ್ ಜನರಲ್**
**(ಆರ್ಥಿಕ ಮತ್ತು ಕಂದಾಯ ವಲಯ ಆಡಿಟ್)**
**ಕರ್ನಾಟಕ, ಬೆಂಗಳೂರು**

**ಬೆಂಗಳೂರು**
**ದಿನಾಂಕ : 21.09.2017**

FMSIL

# ಹತ್ತು ವರ್ಷಗಳ ಸಾಧನೆ

## ಹತ್ತು ವರ್ಷಗಳ ಹಣಕಾಸಿನ ಮುಖ್ಯಾಂಶಗಳು

(ರೂ.ಲಕ್ಷಗಳಲ್ಲಿ)

| | 2007-08 | 2008-09 | 2009-10 | 2010-11 | 2011-12 | 2012-13 | 2013-14 | 2014-15 | 2015-16 | **2016-17** |
|---|---|---|---|---|---|---|---|---|---|---|
| ನಿವ್ವಳ ಮೌಲ್ಯ | 15818.07 | 15440.12 | 15737.73 | 16166.68 | 18412.05 | 20637.85 | 23701.53 | 26814.97 | 30051.70 | **33480.22** |
| ಸಂದಾಯಿತ ಬಂಡವಾಳ | 366.23 | 366.23 | 366.23 | 366.23 | 366.23 | 366.23 | 2017.66 | 2017.66 | 2017.66 | **2017.66** |
| ಷೇರು ಅರ್ಜಿ ಹಣ | | 2397.76 | 2780.96 | 2780.96 | 3907.25 | 3907.25 | 2255.82 | 2255.82 | 2255.82 | **2255.82** |
| ಮೀಸಲು ಮತ್ತು ಹೆಚ್ಚಳ | 15451.84 | 12676.13 | 12590.54 | 13019.49 | 14138.57 | 16364.37 | 19428.05 | 22541.49 | 25778.22 | **29206.74** |
| ಬ್ಯಾಂಕ್‌ಗಳಿಂದ ಪಡೆದ ಸಾಲಗಳು | - | 402.90 | - | - | - | - | - | - | - | **-** |
| ನಿವ್ವಳ ಸ್ಥಿರಾಸ್ತಿಗಳು | 1257.75 | 2160.38 | 3249.19 | 3999.03 | 4071.36 | 4097.95 | 4221.84 | 5624.66 | 5626.25 | **6225.01** |
| ವಹಿವಾಟು | 25717.78 | 26487.56 | 28637.27 | 50897.06 | 71749.54 | 97828.66 | 120066.32 | 146039.32 | 151490.75 | **161407.69** |
| ತೆರಿಗೆಗೆ ಮುಂಚಿನ ಲಾಭ | (2012.14) | (471.77) | (420.32) | 831.09 | 3160.37 | 3528.05 | 4660.26 | 6052.27 | 5400.50 | **5699.87** |
| ಲಾಭಾಂಶ | - | - | - | - | - | 10% | 10% | 10% | 10% | **10%** |
| ತೆರಿಗೆ ನಂತರದ ಪ್ರತಿ ಷೇರಿನ ನಿವ್ವಳ ಗಳಿಕೆ (ರೂ.ಗಳಲ್ಲಿ) | (109.00) | (147.00) | (23.00) | 146.00 | 755.35 | 625.69 | 162.96 | 166.36 | 178.71 | **181.68** |
| ಪ್ರತಿ ಷೇರಿನ ನಿವ್ವಳ ಮೌಲ್ಯ (ರೂ.ಗಳಲ್ಲಿ) | 3658.46 | 4215.96 | 4297.23 | 4414.35 | 3960.57 | 4568.33 | 1062.90 | 1217.21 | 1377.63 | **1547.56** |

## ಹತ್ತು ವರ್ಷಗಳ ಸಂಕ್ಷಿಪ್ತ ಲಾಭ ಮತ್ತು ನಷ್ಟದ ಲೆಕ್ಕ

(ರೂ.ಲಕ್ಷಗಳಲ್ಲಿ)

| | 2007-08 | 2008-09 | 2009-10 | 2010-11 | 2011-12 | 2012-13 | 2013-14 | 2014-15 | 2015-16 | **2016-17** |
|---|---|---|---|---|---|---|---|---|---|---|
| ವಹಿವಾಟು | 25717.78 | 26487.56 | 28637.27 | 50897.06 | 71749.54 | 97828.66 | 120066.32 | 146039.32 | 151490.75 | **161407.69** |
| ಒಟ್ಟು ಆದಾಯ | 11435.43 | 5604.82 | 3795.04 | 4946.44 | 8204.97 | 10751.19 | 12325.68 | 14919.86 | 15490.81 | **16453.84** |
| ಮಾರಾಟ ಮತ್ತು ಆಡಳಿತಾತ್ಮಕ ವೆಚ್ಚಗಳು | 9403.00 | 5012.49 | 2495.37 | 3830.23 | 6105.53 | 6646.46 | 6965.11 | 8923.90 | 9636.88 | **10433.61** |
| ಬಡ್ಡಿ | 3093.80 | 41.38 | 26.93 | 26.05 | 28.78 | 51.58 | 30.76 | 48.68 | 145.35 | **2.44** |
| ಸವಕಳಿ | 259.77 | 194.66 | 110.45 | 131.75 | 229.07 | 245.46 | 280.77 | 291.01 | 255.39 | **285.21** |
| ಮುನ್ನೇರ್ಪಾಡು/ವಜಾ | 691.00 | 828.06 | 1582.61 | 233.86 | 328.48 | 302.75 | 399.05 | 47.72 | 91.36 | **50.60** |
| **ಒಟ್ಟು** | **13447.57** | **6076.59** | **4215.36** | **4221.89** | **6691.86** | **7246.25** | **7675.69** | **9311.31** | **10128.98** | **10771.86** |
| ತೆರಿಗೆಗೆ ಮುಂಚಿನ ಲಾಭ | (2012.14) | (471.77) | (420.32) | 724.55 | 1513.11 | 3504.94 | 4649.99 | 5608.55 | 5361.83 | **5681.98** |
| ತೆರಿಗೆಗೆ ಮುನ್ನೇರ್ಪಾಡು | 131.33 | 12.86 | - | - | 1080.78 | 1313.16 | 1372.76 | 2252.67 | 1923.22 | **1978.80** |
| ಮುಂದೂಡಲಾದ ತೆರಿಗೆ ಸಾಲ | (276.77) | 128.60 | 334.73 | (295.60) | (686.75) | (76.58) | (20.96) | (0.62) | (167.21) | **37.48** |
| ತೆರಿಗೆ ನಂತರದ ಲಾಭ | (2420.24) | (356.03) | (85.59) | 428.95 | 1119.08 | 2268.36 | 3298.19 | 3356.50 | 3605.82 | **3665.70** |

FMSIL

## ಹತ್ತು ವರ್ಷಗಳ ಸಂಕ್ಷಿಪ್ತ ಸ್ಥಿತಿ ವಿವರಣಾ ಪಟ್ಟಿ

(ರೂ.ಲಕ್ಷಗಳಲ್ಲಿ)

| | 2007-08 | 2008-09 | 2009-10 | 2010-11 | 2011-12 | 2012-13 | 2013-14 | 2014-15 | 2015-16 | **2016-17** |
|---|---|---|---|---|---|---|---|---|---|---|
| **ಸ್ವಂತ ನಿಧಿಗಳು** | | | | | | | | | | |
| ಷೇರು ಬಂಡವಾಳ | 366.23 | 366.23 | 366.23 | 366.23 | 366.23 | 366.23 | 366.23 | 2017.66 | 2017.66 | **2017.66** |
| ಷೇರು ಆರ್ಜಿ ಹಣ | - | 2397.76 | 2780.96 | 2780.96 | 3907.25 | 3907.25 | 2255.82 | 2255.82 | 2255.82 | **2255.82** |
| ಮೀಸಲು ಮತ್ತು ಹೆಚ್ಚಳ | 13032.16 | 12676.12 | 12590.54 | 13019.49 | 14138.57 | 16364.37 | 19428.05 | 22541.49 | 25778.22 | **29206.74** |
| **ಒಟ್ಟು** | **13398.39** | **15440.11** | **15737.73** | **16166.68** | **18412.05** | **20637.85** | **23701.53** | **26814.97** | **30051.70** | **33480.22** |
| **ಸಾಲ ನಿಧಿಗಳು** | | | | | | | | | | |
| ಅಲ್ಪಾವಧಿ ಸಾಲ | 1698.30 | 1601.23 | 784.45 | 753.05 | 77.42 | 53.88 | 53.88 | 53.88 | 53.88 | **53.88** |
| ನಿಧಿಗಳ ಹೂಡಿಕೆ | 1698.30 | 1601.23 | 784.45 | 753.05 | 77.42 | 53.88 | 53.88 | 53.88 | 53.88 | **53.88** |
| ಮುಂದೂಡಿದ ತೆರಿಗೆ ಹೊಣೆಗಾರಿಕೆ (ನಿವ್ವಳ) | 106.02 | - | - | - | - | - | - | - | - | - |
| **ಒಟ್ಟು** | **15202.71** | **17041.34** | **16522.18** | **16919.73** | **18489.47** | **20691.73** | **23755.41** | **26868.85** | **30105.58** | **33534.10** |
| **ನಿಧಿಗಳ ಉಪಯೋಗ** | | | | | | | | | | |
| ಸ್ಥಿರಾಸ್ತಿಗಳು | 1257.75 | 2160.38 | 3249.19 | 3999.03 | 4071.36 | 4097.95 | 4221.84 | 5624.66 | 5626.25 | **6225.01** |
| ಹೂಡಿಕೆಗಳು | 1322.06 | 1336.06 | 1336.06 | 1336.06 | 1336.06 | 1336.06 | 1336.06 | 1336.06 | 1336.51 | **1346.00** |
| ಮುಂದೂಡಿದ ತೆರಿಗೆ ಆಸ್ತಿ (ನಿವ್ವಳ) | - | 22.58 | 357.31 | 61.71 | 748.46 | 825.04 | 846.00 | 846.62 | 1013.83 | **976.35** |
| ಕಾರ್ಯನಿರತ ಬಂಡವಾಳ | 12622.90 | 13522.32 | 11579.61 | 11522.93 | 12333.59 | 14432.68 | 17351.51 | 19061.51 | 22128.99 | **24986.74** |
| **ಒಟ್ಟು** | **15202.71** | **17041.34** | **16522.17** | **16919.73** | **18489.47** | **20691.73** | **23755.41** | **26868.85** | **30105.58** | **33534.10** |

# ಸ್ವತಂತ್ರ ಲೆಕ್ಕಪರಿಶೋಧಕರ ಪರಿಷ್ಕೃತ ವರದಿ

**ಇವರಿಗೆ**

**ಸದಸ್ಯರು**

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್,**

**ಹಣಕಾಸು ಹೇಳಿಕೆಗಳ ಮೇಲಿನ ವರದಿ**

ನಾವು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ 31ನೇ ಮಾರ್ಚ್ 2017ರಂದು ಇದ್ದಂತೆ ಸ್ಥಿತಿ ವಿವರಣಾ ಪಟ್ಟಿ, ಸದರಿ ದಿನಾಂಕಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ತಃಖ್ತೆ ಮತ್ತು ನಗದು ಹರಿವಿನ ಹೇಳಿಕೆ ಮತ್ತು ಮಹತ್ವಪೂರ್ಣವಾದ ಲೆಕ್ಕಗಾರಿಕೆ ನೀತಿಗಳ ಸಾರಾಂಶ ಮತ್ತು ಸದರಿ ದಿನಾಂಕದಂದು ಇದ್ದಂತೆ ವಿವರಣೆ ನೀಡಿಕೆ ಮಾಹಿತಿ ಒಳಗೊಂಡ ಇಲ್ಲಿ ಲಗತ್ತಿಸಿರುವ ಹಣಕಾಸಿನ ಹೇಳಿಕೆಗಳ ಪರಿಶೋಧನೆಯನ್ನು ನಾವು ಮಾಡಿದ್ದೇವೆ ಮತ್ತು ದಿನಾಂಕ 7ನೇ ಆಗಸ್ಟ್ 2017ರಂದು ನಮ್ಮ ವರದಿಯನ್ನು ಸಲ್ಲಿಸಿದ್ದೇವೆ. ತದನಂತರ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ಅಭಿಪ್ರಾಯದ ಹಿನ್ನೆಲೆಯಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಪರಿಷ್ಕರಣೆ ಮಾಡಿರುವೆವು. ಈ ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯು ದಿನಾಂಕ 7ನೇ ಆಗಸ್ಟ್ 2017ರ ಈ ಮೊದಲಿನ ನಮ್ಮ ವರದಿಯನ್ನು ರದ್ದುಪಡಿಸುವುದು.

**ಹಣಕಾಸಿನ ಹೇಳಿಕೆಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿ**

ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7 ಓದಿಕೊಂಡಂತೆ ಕಾಯ್ದೆಯ ಪ್ರಕರಣ 133ರ ಅನ್ವಯ ನಿಗದಿಪಡಿಸಿರುವ ಲೆಕ್ಕ ನಿರ್ವಹಣೆ ಗುಣಮಟ್ಟಗಳು ಸೇರಿದಂತೆ, ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಕಂಪನಿಯ ಹಣಕಾಸಿನ ಸ್ಥಿತಿಗತಿ, ಹಣಕಾಸಿನ ಕಾರ್ಯಕ್ಷಮತೆ ಮತ್ತು ನಗದು ಹರಿಯುವಿಕೆಯ ನೈಜ ಮತ್ತು ನ್ಯಾಯಸಮ್ಮತ ಚಿತ್ರಣ ನೀಡುವ ಸದರಿ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಿಕೆ ಸಂಬಂಧದಲ್ಲಿ ಕಂಪನಿಗಳ ಕಾಯ್ದೆ, 2013ರ ('ಕಾಯ್ದೆ') ಪ್ರಕರಣ 134 (5)ರಲ್ಲಿ ತಿಳಿಸಿರುವ ವಿಷಯಗಳಿಗೆ ಕಂಪನಿಯ ನಿರ್ದೇಶಕರ ಮಂಡಳಿ ಜವಾಬ್ದಾರಿಯಾಗಿರುವುದು. ಈ ಜವಾಬ್ದಾರಿಯಲ್ಲಿ ಕಂಪನಿಯ ಸ್ವತ್ತುಗಳ ಸುರಕ್ಷತೆ ಮಾಡುವುದಕ್ಕೆ ಮತ್ತು ವಂಚನೆ ಮತ್ತು ಇತರೆ ಅಕ್ರಮಗಳ ತಡೆ ಮತ್ತು ಪತ್ತೆ ಹಚ್ಚುವಿಕೆ, ಸೂಕ್ತವಾದ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡುವುದು ಮತ್ತು ಬಳಕೆ ಮಾಡುವುದು, ಸೂಕ್ತವಾದ ಮತ್ತು ಸಮ್ಮತವಾದ ತೀರ್ಮಾನಗಳನ್ನು ಮತ್ತು ಅಂದಾಜುಗಳನ್ನು ಮಾಡುವುದು; ಲೆಕ್ಕ ನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆಯನ್ನು ಖಾತರಿಪಡಿಸುವುದಕ್ಕೆ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ. ನೈಜವಾದ ಮತ್ತು ನ್ಯಾಯೋಚಿತವಾದ ಚಿತ್ರಣ ನೀಡುವ ಮತ್ತು ವಂಚನೆ ಅಥವಾ ತಪ್ಪಿನಿಂದಾಗಲಿ ವಾಸ್ತವಿಕ ತಪ್ಪು ಹೇಳಿಕೆಗಳಿಂದ ಮುಕ್ತವಾದ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದಕ್ಕೆ ಮತ್ತು ಮಂಡಿಸುವುದಕ್ಕೆ ಸೂಕ್ತವಾದ ಕ್ರಮ ಕೈಗೊಳ್ಳುವಿಕೆಯ ಜವಾಬ್ದಾರಿಯೂ ಒಳಗೊಂಡಿರುವುದು.

**ಲೆಕ್ಕಪರಿಶೋಧಕರ ಜವಾಬ್ದಾರಿ**

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಸದರಿ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ನಾವು ಲೆಕ್ಕ ಪರಿಶೋಧನೆ ನಡೆಸುವ ಸಮಯದಲ್ಲಿ ಕಾಯ್ದೆಯ ಉಪಬಂಧಗಳು, ಲೆಕ್ಕ ನಿರ್ವಹಣೆ ಮತ್ತು ಲೆಕ್ಕಪರಿಶೋಧನೆ ಮಾನದಂಡಗಳು ಹಾಗೂ ಕಾಯ್ದೆಯ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರೂಪಿಸಿರುವ ನಿಯಮಗಳ ಅನ್ವಯ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರ್ಪಡೆ ಮಾಡಬೇಕಾಗಿರುವ ವಿಚಾರಗಳನ್ನು ಗಣನೆಗೆ ತೆಗೆದುಕೊಂಡಿದ್ದೇವೆ.

ನಾವು ನಮ್ಮ ಲೆಕ್ಕಪರಿಶೋಧನೆಯನ್ನು ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ನಡೆಸಿದ್ದೇವೆ. ಸದರಿ ಗುಣಮಟ್ಟಗಳ ಅನುಸಾರ ನೈತಿಕ ಅಗತ್ಯತೆಗಳನ್ನು ನಾವು ಪಾಲಿಸಬೇಕಾಗುತ್ತದೆ ಮತ್ತು ಹಣಕಾಸಿನ ಹೇಳಿಕೆಗಳು ವಾಸ್ತವಿಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿರುವುದೇ ಎಂಬ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ಪರಿಶೋಧನೆಯನ್ನು ಹೇಗೆ ಮೂಡಬೇಕೆಂದು ಯೋಜನೆ ಮಾಡಿ, ಅದರಂತೆ ಪರಿಶೋಧನೆ ನಡೆಸಬೇಕಾಗುತ್ತದೆ.

ಹಣಕಾಸಿನ ಹೇಳಿಕೆಗಳಲ್ಲಿ ನಮೂದಿಸಿರುವ ಮೊತ್ತ ಮತ್ತು ನೀಡಿರುವ ವಿವರಣೆಗಳ ಬಗ್ಗೆ ಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ಅನುಸರಿಸುವ ಕರ್ತವ್ಯವು ಲೆಕ್ಕ ಪರಿಶೋಧನೆಯಲ್ಲಿ ಒಳಪಟ್ಟಿರುತ್ತದೆ. ವಂಚನೆ ಅಥವಾ ತಪ್ಪಿನ ದೆಸೆಯಿಂದ ಹಣಕಾಸಿನ ವಿವರಣೆಯಲ್ಲಿ ವಾಸ್ತವಿಕ ತಪ್ಪು ಹೇಳಿಕೆ ಅಪಾಯವನ್ನು ನಿರ್ಧರಣೆ ಮಾಡುವುದು ಸೇರಿದಂತೆ ಪರಿಶೋಧಕರ ತೀರ್ಪಿನ ಮೇಲೆ ಅವಲಂಬಿತವಾಗಿ ಕ್ರಮಾವಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಅಂತಹ ಅಪಾಯದ ನಿರ್ಧರಣೆ ಮಾಡುವಾಗ ಸದರಿ ಪರಿಸ್ಥಿತಿಯಲ್ಲಿ ಸೂಕ್ತವೆನಿಸುವ ಪರಿಶೋಧನಾ ಕ್ರಮಾವಳಿಗಳನ್ನು ವಿನ್ಯಾಸಪಡಿಸುವುದಕ್ಕಾಗಿ ಕಂಪನಿಯು ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಹಾಗೂ ಅದನ್ನು ಉತ್ತಮವಾಗಿ ಮಂಡಿಸಲು ಸೂಕ್ತವಾದ ಆಂತರಿಕ ನಿಯಂತ್ರಣ ಇರುವ ಬಗ್ಗೆ ಲೆಕ್ಕ ಪರಿಶೋಧಕರು ಪರಿಶೀಲಿಸುವರು. ಆಡಳಿತ ಮಂಡಳಿಯು ಅನುಸರಿಸಿರುವ ಲೆಕ್ಕ ನಿರ್ವಹಣೆ ನೀತಿಗಳ ಸೂಕ್ತತೆಗಳ ಬಗ್ಗೆ ಮತ್ತು ಮಾಡಿರುವ

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

ಲೆಕ್ಕದ ಅಂದಾಜುಗಳ ಯುಕ್ತತೆಯನ್ನು ಮೌಲ್ಯಮಾಪನ ಮಾಡುವ ಕಾರ್ಯವೂ ಲೆಕ್ಕ ಪರಿಶೋಧನೆಯಲ್ಲಿ ಒಳಗೊಂಡಿರುತ್ತದೆ ಹಾಗೂ ಹಣಕಾಸಿನ ಹೇಳಿಕೆಯ ಸಮಗ್ರ ಮಂಡನೆಯ ವಿಚಾರವನ್ನು ಮೌಲ್ಯಮಾಪನ ಮಾಡುವ ಜವಾಬ್ದಾರಿಯೂ ಒಳಗೊಂಡಿರುತ್ತದೆ.

ನಮ್ಮ ಲೆಕ್ಕಪರಿಶೋಧನೆ ಅಭಿಪ್ರಾಯ ತಿಳಿಸಲು ಆಧಾರ ಒದಗಿಸಲು ನಾವು ಪಡೆದುಕೊಂಡಿರುವ ಪರಿಶೋಧನಾ ಪುರಾವೆಯು ಸಾಕಷ್ಟಿರುವುದು ಮತ್ತು ಸೂಕ್ತವಾಗಿರುವುದು ಎಂಬುದಾಗಿ ನಾವು ನಂಬಿದ್ದೇವೆ.

**ಅರ್ಹತಾ ಅಭಿಪ್ರಾಯ ಮಂಡಿಸಲು ಆಧಾರ**

- ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಗಳಿಸಿದ ಲಾಭಗಳಿಂದ 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷಕ್ಕೆ ಉದ್ದೇಶಿತ ಈಕ್ವಿಟಿ ಲಾಭಾಂಶಕ್ಕೆ ರೂ.2,01,76,600/- ಮೊತ್ತವನ್ನು ಮತ್ತು ಲಾಭಾಂಶ ವಿತರಣೆ ತೆರಿಗೆ ಬಗ್ಗೆ ರೂ.35,62,021/- ಮೊತ್ತವನ್ನು ಕಂಪನಿಯು ಒದಗಿಸಿದೆ. ಇದನ್ನು ಷೇರುದಾರರು ದಿನಾಂಕ 31ನೇ ಮಾರ್ಚ್, 2017ರಂದು ಅಂಗೀಕರಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ನಾವು ಅಭಿಪ್ರಾಯ ಪಡುವುದೇನೆಂದರೆ ಹೊಣೆಗಾರಿಕೆಗಳನ್ನು ಅಧಿಕವಾಗಿ ತಿಳಿಸಲಾಗಿದೆ (ಲೆಕ್ಕ ನಿರ್ವಹಣೆ ಮಾನದಂಡ 29 ಉಪಬಂಧಗಳು, ಸಂಭಾವ್ಯ ಹೊಣೆಗಾರಿಕೆಗಳು ಮತ್ತು ಅನುಷಂಗಿಕ ಆಸ್ತಿಗಳ ಅನ್ವಯ)
- ಕಾಗದ ವಿಭಾಗದ ಸರಕಿನ ತಪಶೀಲಿನಲ್ಲಿ 76.10 ಎಂಟಿ ಪ್ರಮಾಣದ ಅನುಪಯುಕ್ತ ಸರಕು ಸಹ ಒಳಗೊಂಡಿರುವುದು. ಈ ಸರಕಿಗೆ 31ನೇ ಮಾರ್ಚ್ 2017ರಂದು ಇದ್ದಂತೆ ಎಂಟಿ ಒಂದಕ್ಕೆ ರೂ.39160.25ರಂತೆ ಮೌಲ ಮಾಡಲಾಗಿದೆ. ಆದರೆ ಸದರಿ ಸರಕನ್ನು ಮಾರಾಟ ಮಾಡಲು ಅಂಗೀಕರಿಸಿರುವ ಟೆಂಡರ್ ಮೌಲ್ಯವು ಎಂಟಿ ಒಂದಕ್ಕೆ ರೂ.11517.82 ಆಗಿದೆ. ಎಎಸ್-2ರ ಅನುಸಾರ ಸದರಿ ಸರಕಿಗೆ ಎಂಟಿ ಒಂದಕ್ಕೆ ರೂ.11517.82ರಂತೆ ಮೌಲ್ಯದಲ್ಲಿ ಲೆಕ್ಕ ಹಾಕಬೇಕು. ಹೀಗೆ ಮಾಡದಿರುವುದರಿಂದ ಸರಕಿನ ಪ್ರಮಾಣವನ್ನು ಅಧಿಕವಾಗಿ ತಿಳಿಸಲಾಗಿದೆ ಮತ್ತು ಲಾಭವನ್ನು ರೂ.21,03,589/-ರವರೆಗೆ ಹೆಚ್ಚಾಗಿ ನಮೂದಿಸಲಾಗಿದೆ.
- ಮುಂಬಯಿಯಲ್ಲಿ ಕರ್ನಾಟಕ ಭವನ ನಿರ್ಮಾಣದ ವಿಷಯದ ಟಿಪ್ಪಣಿ ಸಂಖ್ಯೆ 32ರ ಬಗ್ಗೆ ನಾವು ಗಮನ ಸೆಳೆಯುವುದೇನೆಂದರೆ, ಬೂಟ್ ಗುತ್ತಿಗೆ ಅನ್ವಯ ಕರ್ನಾಟಕ ಸರ್ಕಾರಕ್ಕೆ (ಜಿಒಕೆ) ಸಿಟಿ ಅಂಡ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಆಫ್ ಮಹಾರಾಷ್ಟ್ರ (ಸಿಐಡಿಸಿಒ) ಇವರಿಗೆ ಸೇರಿದ ಜಮೀನಿನಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಕಟ್ಟಡದ ಬಗ್ಗೆ ಕಂಪನಿಯ ಹಕ್ಕು ಕರ್ನಾಟಕ ಸರ್ಕಾರ ಮತ್ತು ಸಿಐಡಿಸಿಓ ಇವರ ನಡುವೆ 'ಗುತ್ತಿಗೆ ಕರಾರು ಪತ್ರ' ಮಾಡಿಕೊಳ್ಳುವುದರ ಮೇಲೆ ಅವಲಂಬಿತವಾಗಿರುತ್ತದೆ. ಕಂಪನಿಯು ನವಿ ಮುಂಬಯಿ ಮುನಿಸಿಪಲ್ ಕಾರ್ಪೋರೇಷನ್ ಇವರಿಂದ ದಿನಾಂಕ 10ನೇ ಮಾರ್ಚ್ 2016ರಂದು ಸ್ವಾಧೀನ ಪ್ರಮಾಣ ಪತ್ರ ಪಡೆದುಕೊಂಡಿದೆ. ಇದರ ಜೊತೆಗೆ ಕಂಪನಿಯು ಹಣಕಾಸಿನ ವರ್ಷ 2016-17ರ ಸಾಲಿಗೆ ಆಸ್ತಿ ತೆರಿಗೆ ಬಗ್ಗೆ ರೂ.14,11,556/- ಮೊತ್ತವನ್ನು ಸಹ ಪಾವತಿ ಮಾಡಿದೆ. ಮಾಡಲಾಗಿರುವ ರೂ.33.82 ಕೋಟಿ ಮೊತ್ತದ ಬಂಡವಾಳ ಖರ್ಚನ್ನು ಸಿಡಬ್ಲ್ಯೂಪಿ ಎಂಬುದಾಗಿ ವರ್ಗೀಕರಿಸಲಾಗಿದೆ. ಇಷ್ಟು ಪ್ರಮಾಣದವರೆಗೆ ನಿಶ್ಚಿತ ಸ್ವತ್ತುಗಳನ್ನು ಕಡಿಮೆಯಾಗಿ ತೋರಿಸಲಾಗಿದೆ ಮತ್ತು ಸವಕಳಿಯು ತಿಳಿದುಬರುವುದಿಲ್ಲ.
- ಎಲ್ಲಾ ವಿಭಾಗಗಳಿಗೆ ಸಂಬಂಧಪಟ್ಟಂತೆ ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾಗಿರುವುದು, ಇತರೆ ಚಾಲ್ತಿ ಹೊಣೆಗಾರಿಕೆಗಳು, ವ್ಯಾಪಾರದ ಸಂಬಂಧ ಬರಬೇಕಾಗಿರುವ ಮೊತ್ತ ಮತ್ತು ಮುಂಗಡಗಳು/ವ್ಯಾಪಾರದ ಬಗೆಗಿನ ಠೇವಣಿಗಳ ಶುಲ್ಕಗಳ ವಿಚಾರವಾಗಿ ಯಾವುದೇ ಸ್ಥಿರೀಕರಣೆ ಇಲ್ಲದಿರುವ ಪ್ರಯುಕ್ತ ಲಾಭ/ನಷ್ಟದ ಮೇಲೆ ಮತ್ತು ಆಸ್ತಿಗಳು/ಹೊಣೆಗಾರಿಕೆಗಳ ಸಮನ್ವಯ ಬಗ್ಗೆ ಇದರಿಂದ ಉಂಟಾಗಬಹುದಾದ ಪರಿಣಾಮವು ತಿಳಿದುಬರುವುದಿಲ್ಲ.

**ಅರ್ಹತಾ ಅಭಿಪ್ರಾಯಗಳು**

ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ದೊರೆತಿರುವ ಮಾಹಿತಿಯಂತೆ ಹಾಗೂ ನಮಗೆ ನೀಡಿದ ವಿವರಣೆಗಳ ಅನುಸಾರ, ಅರ್ಹತೆ ಹೊಂದಿದ ಅಭಿಪ್ರಾಯದ ಆಧಾರದ ಪ್ಯಾರಾಗ್ರಾಫ್‌ನಲ್ಲಿ ವಿವರಿಸಿರುವ ವಿಚಾರಗಳ ಸಾಧ್ಯವಿರುವ ಪರಿಣಾಮಗಳು ಹೊರತಾಗಿ, ಮೇಲೆ ತಿಳಿಸಿರುವ ಹಣಕಾಸಿನ ಹೇಳಿಕೆಯು ಅಗತ್ಯವಾದ ರೀತಿಯಲ್ಲಿ ಕಾಯ್ದೆಯ ಅನ್ವಯ ಅವಶ್ಯವಾದ ಮಾಹಿತಿಯನ್ನು ನೀಡುವುದು ಮತ್ತು 31ನೇ ಮಾರ್ಚ್ 2017ರಂದು ಇದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿ ಬಗ್ಗೆ ಈ ದಿನಾಂಕಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಗದು ಹರಿಯುವಿಕೆ ಬಗ್ಗೆ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವುದು.

**ಮಹತ್ವವಾದ ವಿಷಯ:**

**ಹಣಕಾಸಿನ ಹೇಳಿಕೆಯ ಟಿಪ್ಪಣಿಗಳಲ್ಲಿನ ಈ ಕೆಳಕಂಡ ವಿಚಾರಗಳ ಬಗ್ಗೆ ನಾವು ಗಮನ ಸೆಳೆಯುವೆವು:**

- ಟಿಪ್ಪಣಿ ಸಂಖ್ಯೆ 51(i) ಒಟ್ಟಾರೆ ಕ್ಲೇಮ್‌ನ 25% ಆಗಿ ವಿಮಾ ಕಂಪನಿಗಳ ಪರವಾಗಿ ತೀರ್ಪು ನೀಡಿರುವಂತೆ ರೂ.12.00 ಕೋಟಿಗಳ ಪೈಕಿ (31.03.2017ರವರೆಗೆ ವಾರ್ಷಿಕ 6%ನಂತೆ ಬಡ್ಡಿ ಸೇರಿದಂತೆ) ರೂ.3.00 ಕೋಟಿಗಳ ವ್ಯವಸ್ಥೆಯನ್ನು ಕಂಪನಿ ಮಾಡಿದೆ. ಸದರಿ ವ್ಯವಹಾರಕ್ಕೆ ವಿಮಾ ಕಂಪನಿಗಳು ಮತ್ತು ಸೀಮಾ ಸುಂಕ ಇಲಾಖೆಯೂ ಪಕ್ಷಗಳಾಗಿರುವುದರಿಂದ ಕಂಪನಿಯು 1/4 ರಷ್ಟು ಮಾತ್ರ ಹೊಣೆಗಾರಿಕೆ ಹೊಂದಿರುವುದು.

MSIL

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

1) ಟಿಪ್ಪಣಿ ಸಂಖ್ಯೆ 51ರ ಬಗ್ಗೆ ನಾವು ಗಮನ ಸೆಳೆಯುವುದೇನೆಂದರೆ, ದಿನಾಂಕ 08.03.2017ರ ತಮ್ಮ ಪತ್ರದ ಅನ್ವಯ ರೂ.46,09,86,366/- ರ ಮೊತ್ತದಷ್ಟು ಮಾರಾಟದ ಹಣ ಮತ್ತು ಇದನ್ನು ಸಂದಾಯ ಮಾಡುವುದರಲ್ಲಿ ಆದ ವಿಳಂಬದ ಮೇಲೆ ಬಡ್ಡಿ ವಿಚಾರವಾಗಿ ನಿರ್ದೇಶಕರು, ಪಿಂಚಣಿ ನಿರ್ದೇಶನಾಲಯ, ಸಣ್ಣ ಉಳಿತಾಯಗಳು, ಆಸ್ತಿ ಮೇಲುಸ್ತುವಾರಿ ಇವರು ಕೇಳಿರುವ ಹಕ್ಕಿನಲ್ಲಿ ಸಂಭಾವ್ಯ ಹೊಣೆಗಾರಿಕೆಯು ಒಳಪಡುವುದಿಲ್ಲ. ಪೂರ್ಣವಾದ ಮತ್ತು ಅಂತಿಮ ಇತ್ಯರ್ಥ ಮಾಡಿರುವುದರಿಂದ ಮತ್ತು ಈ ವಿಚಾರದ ಬಗ್ಗೆ ಕಂಪನಿಯು ಪತ್ರದ ದಿನಾಂಕ: 18.10.2016ರಲ್ಲಿ ಮಾಹಿತಿ ನೀಡಿರುವುದರಿಂದ ಪೂರ್ಣವಾದ ಮತ್ತು ಅಂತಿಮ ಇತ್ಯರ್ಥದ ಬಗ್ಗೆ ರೂ.3,52,60,961/- ರ ಮೊತ್ತವನ್ನು ಪಾವತಿ ಮಾಡಲಾಗಿರುವ ಪ್ರಯುಕ್ತ ಮೇಲಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಕಂಪನಿಯು ಮುಂದೆ ಯಾವುದೇ ಹಕ್ಕನ್ನು ಪಾವತಿ ಮಾಡುವ ಪ್ರಮೇಯವಿಲ್ಲ ಎಂಬುದಾಗಿ ಕಂಪನಿ ಸ್ಪಷ್ಟವಾಗಿ ತಿಳಿಸಿದೆ. ಸದರಿ ಪತ್ರಕ್ಕೆ ಸ್ವೀಕೃತಿಯನ್ನು ಸಹ ನೀಡಲಾಗಿದೆ.

2) ಕರ್ನಾಟಕ ಸರ್ಕಾರದಿಂದ ಪಡೆದಿರುವ ಸಾಲದ ಮೇಲಿನ ಬಡ್ಡಿಗೆ ವ್ಯವಸ್ಥೆ ಮಾಡದಿರುವುದನ್ನು ವಿವರಿಸುವ ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂಖ್ಯೆ:41ರ ಬಗ್ಗೆ ನಾವು ಗಮನ ಸೆಳೆಯುತ್ತೇವೆ.

3) ಹಕ್ಕುಗಳ ಕೇಳಿಕೆ/ಮಧ್ಯಸ್ಥಿಕೆದಾರರ ನಡಾವಳಿಗಳು ಮತ್ತು ಕಂಪನಿಯಿಂದ/ಕಂಪನಿ ವಿರುದ್ಧ ಹೂಡಿರುವ ಕಾನೂನು ದಾವೆಗಳ ಫಲಿತಾಂಶಗಳಿಗೆ ಸಂಬಂಧಿಸಿದಂತೆ ಅನಿಶ್ಚಿತತೆಯನ್ನು ವಿವರಿಸುವ ಹಣಕಾಸಿನ ಹೇಳಿಕೆಗಳು, ಸಂಭಾವ್ಯ ಹೊಣೆಗಾರಿಕೆಗಳ ಟಿಪ್ಪಣಿ ಸಂಖ್ಯೆ 51ರ (ಕ್ರ.ಸಂ.4 ಹೊರತುಪಡಿಸಿ) ಬಗ್ಗೆ ನಾವು ಗಮನ ಸೆಳೆಯುವೆವು.

ನಮ್ಮ ಅಭಿಪ್ರಾಯವು ಈ ವಿಚಾರಗಳ ಸಂಬಂಧ ಒಳಪಡುವುದಿಲ್ಲ.

**ಇತರೆ ವಿಚಾರಗಳು**

ಪಾನೀಯ ವಿಭಾಗದ ಸಂಬಂಧದಲ್ಲಿ ಕೆಲವು ಮಾರಾಟ ಮಳಿಗೆಗಳಲ್ಲಿನ ಮಾರಾಟ ಕೇಂದ್ರದಲ್ಲಿ ಪಿಒಎಸ್ ವ್ಯವಸ್ಥೆಗೆ ಬಿಲ್ಲಿಂಗ್ ಟರ್ಮಿನಲ್‌ಗೆ ಇಂಟರ್‌ನೆಟ್ ಸಂಪರ್ಕ ಲಭ್ಯವಿರದ ಕಾರಣ ಮೂಲ ದಾಖಲೆಗಳನ್ನು ಸಿದ್ಧಪಡಿಸಿರುವುದಿಲ್ಲ. ಮಾರಾಟದ ಅಂಕಿ ಅಂಶವು ಸಮತೋಲಿತ ಅಂಕಿ ಅಂಶಗಳಾಗಿ ಗೋಚರವಾಗಿವೆ. ಆದ ಪ್ರಯುಕ್ತ ಮೂಲ ದಾಖಲೆಯಿಂದ ಇದನ್ನು ನಾವು ಪರಿಶೀಲನೆ ಮಾಡಲಾಗದು. ಈ ವಿಚಾರದ ಸಂಬಂಧದಲ್ಲಿ ನಾವು ಅರ್ಹತಾ ಅಭಿಪ್ರಾಯ ನೀಡಲಾಗದು.

ಸದರಿ ವಿಚಾರಗಳ ಸಂಬಂಧ ನಮ್ಮ ಅಭಿಪ್ರಾಯ ಅನ್ವಯವಾಗದು

**ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯಗಳ ವರದಿ:**

- ಭಾರತ ಸರ್ಕಾರ ಹೊರಡಿಸಿರುವ ಕಾಯ್ದೆಯ ಸೆಕ್ಷನ್ 143(11)ರ ಪ್ರಕಾರ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ -2016ರ ('ಆದೇಶ') ಅನುಸಾರ ಅಗತ್ಯವಾದಂತೆ ಆದೇಶದ 3 ಮತ್ತು 4ರ ಕಂಡಿಕೆಗಳಲ್ಲಿ ನಮೂದಿಸಿರುವ ವಿಷಯಗಳ ಹೇಳಿಕೆಗಳನ್ನು ಅನುಬಂಧದಲ್ಲಿ ಒದಗಿಸಿದ್ದೇವೆ.
- ಕಾಯ್ದೆಯ ಕಲಂ 143(3) ಅನ್ವಯ ಅಗತ್ಯವಾದಂತೆ ಅನ್ವಯವಾಗುವ ಪ್ರಮಾಣದವರೆಗೆ ನಾವು ವರದಿ ಮಾಡುವುದೇನೆಂದರೆ:
  - ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಗೆ ಅಗತ್ಯವಾದ ಮಾಹಿತಿ ಮತ್ತು ವಿವರಣೆಗಳನ್ನು ನಮ್ಮ ಅರಿವು ಮತ್ತು ನಂಬಿಕೆಗೆ ತಕ್ಕಂತೆ ಕೇಳಿ ಪಡೆದಿದ್ದೇವೆ.
  - ಕಾನೂನಿನ ಅನ್ವಯ ಅಗತ್ಯವಾದಂತೆ ಕಂಪನಿಯು ಅವಶ್ಯ ಲೆಕ್ಕಪತ್ರದ ಪುಸ್ತಕಗಳನ್ನು ಇಟ್ಟಿರುವುದು ಆ ಪುಸ್ತಕಗಳ ಅವಲೋಕನದಿಂದ ನಮಗೆ ಗೋಚರಿಸಿದೆ.
  - ಈ ವರದಿಯಲ್ಲಿ ತಿಳಿಸಿರುವ ಸ್ಥಿತಿ ವಿವರಣ ಪತ್ರ, ಲಾಭ-ನಷ್ಟದ ಸ್ಟೇಟ್‌ಮೆಂಟ್, ನಗದು ಹರಿವು ಸ್ಟೇಟ್‌ಮೆಂಟ್‌ಗಳು ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಉದ್ದೇಶಕ್ಕೆ ನಿರ್ವಹಿಸಿರುವ ಸಂಬಂಧಪಟ್ಟ ಪುಸ್ತಕಗಳ ಅನುಸಾರ ಇರುವುದು.
  - ನಮ್ಮ ಅಭಿಪ್ರಾಯವೇನೆಂದರೆ, ಮೇಲಿನ ಹಣಕಾಸು ಹೇಳಿಕೆಗಳು ಕಂಪನಿಗಳ(ಲೆಕ್ಕಪತ್ರ) ನಿಯಮಗಳು-2014ರ ನಿಯಮ-7ನ್ನು ಓದಿಕೊಂಡಂತೆ ಕಾಯ್ದೆಯ 133ನೇ ಕಲಂನಲ್ಲಿ ಸೂಚಿಸಲಾದ ಲೆಕ್ಕಪತ್ರ ಗುಣಮಟ್ಟಗಳನ್ನು ಅನುಸರಿಸಲ್ಪಟ್ಟಿವೆ.
  - ಮಂಡಳಿ ನಿರ್ದೇಶಕರು ದಾಖಲಿಸಿದಂತೆ 2017ರ ಮಾರ್ಚ್ 31ರಂದು ಇದ್ದಂತೆ ನಿರ್ದೇಶಕರುಗಳಿಂದ ಸ್ವೀಕರಿಸಲ್ಪಟ್ಟ ಲಿಖಿತ ಮನವಿಗಳ ಆಧಾರದಂತೆ ಕಾಯ್ದೆಯ ಕಲಂ 164(2)ಅನ್ವಯ ಯಾವುದೇ ನಿರ್ದೇಶಕರು 31ನೇ ಮಾರ್ಚ್ 2017ರ ಸದರಿ ದಿನಾಂಕದಲ್ಲಿ ಅನರ್ಹಗೊಂಡಿಲ್ಲ.
  - ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳು ಸಾಕಷ್ಟು ಪ್ರಮಾಣದಲ್ಲಿ ಇರುವಿಕೆ ಬಗ್ಗೆ ಮತ್ತು ಸದರಿ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮದ ವಿಚಾರಗಳಿಗಾಗಿ ಅನುಬಂಧ-'ಬಿ' ರಲ್ಲಿನ ನಮ್ಮ ಪ್ರತ್ಯೇಕ ವರದಿಯನ್ನು ನೋಡಿ ಮತ್ತು

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

- ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ಇತರೆ ವಿಚಾರಗಳ ಸಂಬಂಧದಲ್ಲಿ ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ದೊರೆತಿರುವ ಮಾಹಿತಿಯಂತೆ ಹಾಗೂ ನಮಗೆ ನೀಡಿರುವ ವಿವರಣೆಗಳ ಅನುಸಾರ ತಿಳಿಸುವುದೇನೆಂದರೆ;
- ಕಂಪನಿಯು ತನ್ನ ಹಣಕಾಸು ಹೇಳಿಕೆಗಳಲ್ಲಿನ ತನ್ನ ಹಣಕಾಸಿನ ಸ್ಥಿತಿಗತಿಯ ಮೇಲೆ ಇತ್ಯರ್ಥವಾಗದೆ ಉಳಿದಿರುವ ವಿವಾದಗಳಿಂದ ಉಂಟಾಗಿರುವ ಪರಿಣಾಮವನ್ನು ಕಂಪನಿಯು ತಿಳಿಸಿದೆ -ಹಣಕಾಸಿನ ಹೇಳಿಕೆಗಳ ಟಿಪ್ಪಣಿ 39,43 ಮತ್ತು 51 ನೋಡಿ;
- ವಾಸ್ತವಿಕವಾಗಿ ಉಂಟಾಗುವ ಸಂಭವವಿರುವ ಯಾವುದೇ ನಷ್ಟಕ್ಕೆ ಕಾರಣವಾಗಬಹುದಾದ ಬದಲಾದ ಗುತ್ತಿಗೆಗಳು ಸೇರಿದಂತೆ ಕಂಪನಿಯು ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಒಳಗೊಂಡಿರುವುದಿಲ್ಲ; ಮತ್ತು
- ಕಂಪನಿಯು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾಯಿಸಬೇಕಾಗಿರುವ ಮೊತ್ತದ ವರ್ಗಾವಣೆಯಲ್ಲಿ ಯಾವುದೇ ವಿಳಂಬವಿರುವುದಿಲ್ಲ.
- ಕಂಪನಿಯು 08ನೇ ನವೆಂಬರ್, 2016 ರಿಂದ 30ನೇ ಡಿಸೆಂಬರ್ 2016ರವರೆಗಿನ ಅವಧಿಯಲ್ಲಿ ಧಾರಕಗಳಿಗೆ ಸಂಬಂಧಿಸಿದಂತೆ ಹಾಗೂ ನಿರ್ದಿಷ್ಟಪಡಿಸಿದ ಬ್ಯಾಂಕ್ ನೋಟುಗಳಲ್ಲಿ ವ್ಯವಹರಿಸಿರುವ ಬಗ್ಗೆ ತನ್ನ ಹಣಕಾಸಿನ ಹೇಳಿಕೆಗಳಲ್ಲಿ ಅಗತ್ಯ ಪ್ರಕಟಣೆಗಳನ್ನು ನೀಡಿದೆ. ಇವು ಕಂಪನಿಯು ನಿರ್ವಹಿಸಿರುವ ಲೆಕ್ಕದ ಪುಸ್ತಕಗಳ ಅನುಸಾರ ಇರುವುದು.
- ಕಾಯ್ದೆಯ 143(5)ನೇ ಕಲಂನಡಿ ಅಗತ್ಯವಿರುವಂತೆ ನಾವು ತಿಳಿಸುವುದೇನೆಂದರೆ:
- 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ಅವಧಿಯ ಹಣಕಾಸಿನ ಹೇಳಿಕೆಯಲ್ಲಿ ತಿಳಿಸಿರುವಂತೆ ಮುಕ್ತ ಹಿಡುವಳಿಯ ಮತ್ತು ಗುತ್ತಿಗೆ ಮೇಲಿನ ಜಮೀನು ಮತ್ತು ಸ್ಥಿರಾಸ್ತಿಗಳಿಗೆ ಕಂಪನಿಯು ಸ್ಪಷ್ಟವಾದ ಹಕ್ಕುಪತ್ರ/ಗುತ್ತಿಗೆ ಪತ್ರಗಳನ್ನು ಹೊಂದಿರುವುದು.
- ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಅನುಸಾರ ಕಂಪನಿಯು ಬಂಡವಾಳ ಹಿಂತೆಗೆತಕ್ಕೆ ಆಯ್ಕೆಯಾಗಿರುವುದಿಲ್ಲ.
- ಸದರಿ ವರ್ಷಾವಧಿಯಲ್ಲಿ, ಕಂಪನಿಯು ರೂ.ಶೂನ್ಯ (ರೂ.46.67 ಲಕ್ಷಗಳು) ಮೊತ್ತವನ್ನು ವಸೂಲಾಗದ ಸಾಲವೆಂದು ಮನ್ನಾ ಮಾಡಿರುವುದನ್ನು ನಾವು ಗಮನಿಸಿದ್ದೇವೆ.
- ಕಾಗದ ವಿಭಾಗದ ವಿಚಾರದಲ್ಲಿ ಮೂರನೇ ವ್ಯಕ್ತಿಗಳಿಗೆ (ಪರಿವರ್ತಕರು) ತಪಶೀಲು ದಾಖಲೆಗಳೊಡನೆ ತಪಶೀಲುಗಳನ್ನು ಕಂಪನಿ ನಿರ್ವಹಣೆ ಮಾಡುತ್ತಿದೆ ಮತ್ತು ಪರಿವರ್ತಕರು ಹೊಂದಿರುವ ದಾಸ್ತಾನಿನ ಬಗ್ಗೆ ಸ್ಥಿರಪಡಿಸಿಕೊಳ್ಳುವುದು.
- ಕಂಪನಿಯು ಬಾಕಿ ಉಳಿದಿರುವ/ಮಧ್ಯಸ್ಥಿಕೆ ಪ್ರಕರಣಗಳ ಮೇಲ್ವಿಚಾರಣೆ ಮತ್ತು ವಿಶ್ಲೇಷಣೆಗೆ ಸಾಕಷ್ಟು ವ್ಯವಸ್ಥೆಯನ್ನು ಮಾಡಿಕೊಂಡಿದ್ದು, ತೀರ್ಮಾನವಾಗದೇ ಇರಲು ಕಾರಣಗಳನ್ನೂ ಕೊಟ್ಟಿದೆ. ಕಾನೂನು ಖರ್ಚು ವೆಚ್ಚಗಳಿಗೆ ತಗುಲುವ ವೆಚ್ಚದ ಮೇಲ್ವಿಚಾರಣೆಯ ಶಿಸ್ತನ್ನು ಕಾಪಾಡಿಕೊಂಡು ಬಂದಿದೆ.
- ಮದ್ಯದ ದಾಸ್ತಾನು ತಪಶೀಲು ಮತ್ತು ಕಾಗದ ದಾಸ್ತಾನು ತಪಶೀಲುಗಳು ಕಂಪನಿಯ ಒಟ್ಟಾರೆ ದಾಸ್ತಾನು ಮೌಲ್ಯದ ಬಹುಭಾಗವನ್ನು ಹೊಂದಿದೆ. ಎರಡೂ ಭಾಗಗಳಲ್ಲಿ ದಾಸ್ತಾನನ್ನು ಕಂಪ್ಯೂಟರ್‌ನಲ್ಲಿ ದಾಖಲಿಸಲಾಗಿದೆ. ಕಾಗದದ ವಿಭಾಗದಲ್ಲಿ ಪರಿವರ್ತಕರ ಬಳಿ ಇರುವ ಕಾಗದದ ದಾಸ್ತಾನನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡಲಾಗಿದೆ. ಪರಿವರ್ತಕರಿಂದ ಪಡೆದ ಆಖೈರು ದಾಸ್ತಾನಿನ ಸ್ಥಿರೀಕರಣವನ್ನು ಸದರಿ ವರ್ಷದ ಅವಧಿಯಲ್ಲಿ ಪುಸ್ತಕದಲ್ಲಿನ ದಾಸ್ತಾನಿನ ಜೊತೆ ತಾಳೆ ಮಾಡಲಾಗಿದೆ.
- ಮಾರಾಟ ಚಟುವಟಿಕೆಗಳಲ್ಲಿ ಬಾಕಿಯನ್ನು ವಸೂಲು ಮಾಡುವಲ್ಲಿ ಕಂಪನಿಯು ಪರಿಣಾಮಕಾರಿ ವ್ಯವಸ್ಥೆಯನ್ನು ಹೊಂದಿದೆ. ವಸೂಲಿಯನ್ನು ಕಂಪ್ಯೂಟರೀಕರಣದ ವ್ಯವಸ್ಥೆಯಲ್ಲಿ ನಿರ್ವಹಣೆ ಮಾಡಲಾಗಿದೆ. ಎಲ್ಲಾ ಬಾಕಿಯಿರುವ ಸ್ವೀಕರಣೆಗಳನ್ನು ಲೆಕ್ಕಪತ್ರ ಪುಸ್ತಕಗಳಲ್ಲಿ ನಮೂದಿಸಲಾಗಿದೆ.
- ಭೌತಿಕ ಪರೀಕ್ಷಣೆ, ದಾಸ್ತಾನಿನ ಮೌಲ್ಯಮಾಪನಕ್ಕೆ ಕಂಪನಿ ಪರಿಣಾಮಕಾರಿ ನಿರ್ವಹಣೆ ವ್ಯವಸ್ಥೆ ಹೊಂದಿದೆ. ಸರಕಿನಲ್ಲಿ ಯಾವುದೇ ಹೆಚ್ಚುವರಿ ಅಥವಾ ಕೊರತೆ ಇದ್ದಲ್ಲಿ ಅದನ್ನು ಅಂಗೀಕಾರವಾದ ನಿಖರವಾಗಿ ಅನುಸರಿಸುವ ಕಂಪನಿಯ ನೀತಿ ಅನುಸಾರ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಕಂಪನಿ ಅನುಸರಿಸಿರುವ ಕ್ರಮಾವಳಿಗಳು ಸಾಕಷ್ಟು ಮಟ್ಟದಲ್ಲಿದೆ.
- ಕಂಪನಿಯು ಈ ಎಲ್ಲಾ ವ್ಯವಹಾರದ ಅಂಕಿ-ಅಂಶಗಳನ್ನು ಗಣಕೀಕೃತ ವ್ಯವಸ್ಥೆಯಲ್ಲಿ ನಿರ್ವಹಣೆ ಮಾಡುತ್ತಿದೆ.

**ಮೆ।। ಪಿ. ಚಂದ್ರಶೇಖರ್ ಎಲ್‌ಎಲ್‌ಪಿ ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂ.ಸಂ.000580/ಎಸ್200066

ಸಹಿ/-
**(ಮಣಿಕುಮಾರ್ ಡಿ.)**
ಪಾಲುದಾರರು

ಸ್ಥಳ: ಬೆಂಗಳೂರು
ದಿನಾಂಕ: 18.09.2017

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

### ಸ್ವತಂತ್ರ ಲೆಕ್ಕ ಪರಿಶೋಧಕರ ಪರಿಷ್ಕೃತ ವರದಿಗೆ ಅನುಬಂಧ-ಎ

**(ಸಮ ದಿನಾಂಕದ ನಮ್ಮ ವರದಿಯ ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಬಗ್ಗೆಗಿನ ವರದಿ ಶೀರ್ಷಿಕೆ ಅಡಿಯಲ್ಲಿನ ಕಂಡಿಕೆ-1 ನೋಡಿ)**

(i) ಸ್ಥಿರಾಸ್ತಿಗಳ ವಿಚಾರದಲ್ಲಿ:

ಎ) ಕಂಪನಿಯು ಸ್ಥಿರಾಸ್ತಿಗಳ ಬಗ್ಗೆ ಗುಣಾತ್ಮಕ ವಿವರಗಳು ಮತ್ತು ಪರಿಸ್ಥಿತಿಯನ್ನು ಒಳಗೊಂಡ ಪೂರ್ಣ ವಿವರಗಳನ್ನು ತಿಳಿಸುವ ಸೂಕ್ತವಾದ ದಾಖಲೆಗಳನ್ನು ನಿರ್ವಹಣೆ ಮಾಡಿದೆ.

ಬಿ) ನಮಗೆ ವಿವರಿಸಿರುವಂತೆ ಸದರಿ ವರ್ಷಾವಧಿಯಲ್ಲಿ ಆಡಳಿತ ಮಂಡಳಿಯು ಸ್ಥಿರಾಸ್ತಿಗಳನ್ನು ಭೌತಿಕವಾಗಿ ಪರಿಶೀಲಿಸಿದೆ.

ಸಿ) ಸ್ಥಿರಾಸ್ತಿಗಳ ಕ್ರಯಪತ್ರಗಳು ಕಂಪನಿಯ ಹೆಸರಿನಲ್ಲಿವೆ.

(ii) ಸರಕು ತಪಶೀಲುಗಳ ವಿಚಾರವಾಗಿ :

ಎ) ಆಡಳಿತ ಮಂಡಳಿಯು ಸದರಿ ವರ್ಷದಲ್ಲಿ ಸೂಕ್ತವಾದ ಅಂತರಗಳಲ್ಲಿ ಸರಕುಗಳನ್ನು ಭೌತಿಕವಾಗಿ ಪರಿಶೀಲನೆ ನಡೆಸಿದೆ. ನಮ್ಮ ಅಭಿಪ್ರಾಯದ ಪ್ರಕಾರ ಅಂತಹ ಪರಿಶೀಲನೆಯ ಕಾಲಾಂತರವು ಸೂಕ್ತವಾಗಿರುವುದು.

ಬಿ) ನಮ್ಮ ಅಭಿಪ್ರಾಯದಂತೆ, ಸರಕಿನ ಭೌತಿಕ ಪರಿಶೀಲನೆಗೆ ಆಡಳಿತ ಮಂಡಳಿ ಅನುಸರಿಸಿರುವ ಕ್ರಮಾವಳಿಗಳು ಕಂಪನಿಯ ಗಾತ್ರ ಮತ್ತು ಇದರ ವ್ಯವಹಾರದ ಸ್ವರೂಪದ ಹಿನ್ನೆಲೆಯಲ್ಲಿ ಸೂಕ್ತವಾಗಿದೆ ಮತ್ತು ಸಾಕಷ್ಟು ಪ್ರಮಾಣದಲ್ಲಿರುವುದು.

ಸಿ) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಹಾಗೂ ನೀಡಿರುವ ವಿವರಣೆ ಅನುಸಾರ ಕಂಪನಿಯು ಸರಕುಗಳ ಸೂಕ್ತವಾದ ದಾಖಲೆಗಳನ್ನು ನಿರ್ವಹಿಸಿದೆ. ಸರಕುಗಳ ಭೌತಿಕ ಪರಿಶೀಲನೆ ನಡೆಸಿದಾಗ ಯಾವುದೇ ರೀತಿಯ ವಾಸ್ತವಿಕ ವ್ಯತ್ಯಾಸಗಳು ಕಂಡು ಬಂದಿರುವುದಿಲ್ಲ.

(iii) ಎ) ನಮಗೆ ವಿವರಿಸಿರುವಂತೆ ಕಂಪನಿಗಳ ಕಾಯ್ದೆಯ ಪ್ರಕರಣ 189ರ ಅನ್ವಯ ನಿರ್ವಹಣೆ ಮಾಡಿರುವ ರಿಜಿಸ್ಟರ್‌ನಲ್ಲಿ ಒಳಪಟ್ಟಿರುವ ಕಂಪನಿಗಳು, ಸಂಸ್ಥೆಗಳು ಅಥವಾ ಇತರೆ ವ್ಯಕ್ತಿಗಳಿಗೆ ಭದ್ರತೆಯುಳ್ಳ ಅಥವಾ ಭದ್ರತೆ ಇಲ್ಲದ ಯಾವುದೇ ಸಾಲಗಳನ್ನು ಕಂಪನಿಯು ಮಂಜೂರು ಮಾಡಿರುವುದಿಲ್ಲ. ಆದ್ದರಿಂದ ಸಿಎಆರ್‌ಒ 2016ರ ಕಂಡಿಕೆ 3 ರ ಕಲಂ (iii) ರ ಉಪಬಂಧಗಳು ಕಂಪನಿಗೆ ಅನ್ವಯ ವಾಗುವುದಿಲ್ಲ.

ಬಿ) ಸಾಲಗಳು, ಹೂಡಿಕೆಗಳು, ಜಾಮೀನುಗಳು ಮತ್ತು ಭದ್ರತೆಗಳ ವಿಚಾರದಲ್ಲಿ ಕಂಪನಿಗಳ ಕಾಯ್ದೆ 2013ರ ಪ್ರಕರಣ 185 ಮತ್ತು 186ರ ಉಪಬಂಧಗಳನ್ನು ಅನುಸರಿಸಲಾಗಿದೆ.

(iv) ನಮ್ಮ ಅಭಿಪ್ರಾಯದ ಪ್ರಕಾರ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ. ಆದ್ದರಿಂದಾಗಿ ಸಿಎಆರ್‌ಒ 2016ರ ಕಂಡಿಕೆ 3ರ ಕಲಂ (v) ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

(v) ಕೇಂದ್ರ ಸರ್ಕಾರವು ಕಂಪನಿಗಳ ಕಾಯ್ದೆ 2013ರ ಪ್ರಕರಣ 148(1)ರ ಅನ್ವಯ ವೆಚ್ಚದ ಸಂಬಂಧ ದಾಖಲೆ ನಿರ್ವಹಣೆ ಮಾಡಲು ನಿಗದಿಪಡಿಸಿರುವುದಿಲ್ಲ.

(vi) ಶಾಸನಬದ್ಧ ಬಾಕಿಗಳ ವಿಚಾರದಲ್ಲಿ ನಮಗೆ ಲಭ್ಯವಿರುವ ಮಾಹಿತಿ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ ತಿಳಿಸುವುದೇನೆಂದರೆ:

**ಎ. ನಮಗೆ ಲಭ್ಯವಿದ್ದ ಮಾಹಿತಿ ಮತ್ತು ನೀಡಿದ ವಿವರಣೆ ಅನುಸಾರ ಮತ್ತು ಲೆಕ್ಕದ ಪುಸ್ತಕಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದಲ್ಲಿ ಕಂಡುಬಂದಿರುವುದೇನೆಂದರೆ ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಸೆಸ್ ಮತ್ತು ಯಾವುದೇ ಇತರೆ ವಿವಾದರಹಿತ ಶಾಸನಬದ್ಧ ಬಾಕಿಗಳನ್ನು ಕಂಪನಿಯು ಸಾಮಾನ್ಯವಾಗಿ ನಿಯಮಿತವಾಗಿ ಸೂಕ್ತ ಪ್ರಾಧಿಕಾರಿಗಳಿಗೆ ಸಂದಾಯ ಮಾಡುತ್ತಿದೆ.**

**ಬಿ. 31ನೇ ಮಾರ್ಚ್ 2017 ರಂದು ಇದ್ದಂತೆ ಭವಿಷ್ಯನಿಧಿ, ನೌಕರರ ರಾಜ್ಯ ವಿಮೆ, ಮಾರಾಟ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಸೆಸ್ ಮತ್ತು ಇತರೆ ಶಾಸನಬದ್ಧ ಬಾಕಿಗಳನ್ನು ಅವುಗಳನ್ನು ಪಾವತಿ ಮಾಡಬೇಕಾಗಿದ್ದ ದಿನಾಂಕದಿಂದ ಆರು ತಿಂಗಳುಗಳಿಗೂ ಮಿಗಿಲಾದ ಅವಧಿವರೆಗೆ ಪಾವತಿ ಮಾಡದೆ ಬಾಕಿ ಉಳಿದಿರುವ ಯಾವುದೇ ವಿವಾದರಹಿತ ಮೊತ್ತ ಇರುವುದಿಲ್ಲ.**

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

ಸಿ. ವಿವಾದಗಳ ಪ್ರಯುಕ್ತ 31ನೇ ಮಾರ್ಚ್, 2016ರಂದು ಇದ್ದಂತೆ ಸಂದಾಯ ಮಾಡಿರದ ಸೇವಾ ತೆರಿಗೆ ಮತ್ತು ಆದಾಯ ತೆರಿಗೆ ಬಾಕಿಗಳ ವಿವರಗಳು ಈ ಕೆಳಕಂಡಂತಿರುವುದು.

| ಕ್ರಮ ಸಂಖ್ಯೆ | ಕಾಯ್ದೆಯ ಹೆಸರು | ಬಾಕಿಯ ಸ್ವರೂಪ | ವಿವಾದವು ಇತ್ಯರ್ಥವಾಗದೆ ಉಳಿದಿರುವ ಸಂಬಂಧಿತ ನ್ಯಾಯ ಸ್ಥಾನ | ಯಾವ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಮೊತ್ತ | ಮೊತ್ತ ರೂ. ಕೋಟಿಗಳಲ್ಲಿ | ಪಾವತಿಸಿದ ಮೊತ್ತ ರೂ.ಕೋಟಿಗಳಲ್ಲಿ* | ಬಾಕಿ ರೂ.ಕೋಟಿಗಳಲ್ಲಿ |
|---|---|---|---|---|---|---|---|
| 1. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2005-06 ಮತ್ತು 2006-07 | 0.48 | 0.10 | 0.38 |
| 2. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2002-03 ಮತ್ತು 2003-04 | 0.26 | 0.20 | 0.06 |
| 3. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2003-04 ರಿಂದ 2005-06 | 0.37 | 0.37 | 0 |
| 4. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಆಯುಕ್ತರು (ಎಲ್‌ಟಿಯು) | ಜೂನ್ 2007 ರಿಂದ ಮಾರ್ಚ್ 2011 | 0.13 | 0 | 0.13 |
| 5. | ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ | 2007-08 ಮತ್ತು 2008-09 | 0.36 | 0.10 | 0.26 |
| 6. | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ - ಮೂಲದಲ್ಲೇ ತೆರಿಗೆ ಸಂಗ್ರಹ | ಸುಪ್ರೀಂ ಕೋರ್ಟ್ | 1995-96ರಿಂದ 2000-01 | 20.05 | 20.05 | 0 |
| | | ಆದಾಯ ತೆರಿಗೆ - ಮೂಲದಲ್ಲೇ ತೆರಿಗೆ ಸಂಗ್ರಹ | ಹೈಕೋರ್ಟ್, ಬೆಂಗಳೂರು | 2001-02ರಿಂದ 2003-04 | 10.17 | 4.00 | 6.17 |
| | | ಆದಾಯ ತೆರಿಗೆ - ಮೂಲದಲ್ಲೇ ಸಂಗ್ರಹಿಸಿದ ಮೊತ್ತದ ಮೇಲೆ ಬಡ್ಡಿ | ಸುಪ್ರೀಂ ಕೋರ್ಟ್ | 1994-95ರಿಂದ 1999-2000 | 30.67 | 0.00 | 30.67 |
| 7. | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2010-11 | 1.69 | 0.00 | 1.69 |
| | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2012-13 | 0.26 | 0.00 | 0.26 |
| | ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ ಕಾಯ್ದೆ ಅನ್ವಯ ನಿರಾಕರಣೆ | ಸಿಐಟಿ (ಮೇಲ್ಮನವಿ) | ಲೆಕ್ಕಪತ್ರದ ವರ್ಷ 2014-15 | 1.08 | 0.00 | 1.08 |

* ಬಡ್ಡಿ ಹೊರತುಪಡಿಸಿ

(vii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಮತ್ತು ನಾವು ಪರಿಶೀಲಿಸಿದ ದಾಖಲೆಗಳ ಆಧಾರದ ಮೇಲೆ ನಾವು ತಿಳಿಸುವುದೇನೆಂದರೆ ಕಂಪನಿಯು ಹಣಕಾಸು ಸಂಸ್ಥೆ, ಬ್ಯಾಂಕು ಅಥವಾ ಸರ್ಕಾರದಿಂದ ಪಡೆದಿರುವ ಸಾಲಗಳ ಮರು ಪಾವತಿ ಮಾಡುವುದರಲ್ಲಿ ತಪ್ಪಿತಸ್ಥರಾಗಿರುವುದಿಲ್ಲ.

(viii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಮತ್ತು ನಾವು ಪರಿಶೀಲಿಸಿದ ದಾಖಲೆಯ ಆಧಾರದ ಮೇಲೆ ಸದರಿ ವರ್ಷಾವಧಿಯಲ್ಲಿ ಕಂಪನಿಯು ಪ್ರಾರಂಭಿಕ ಸಾರ್ವಜನಿಕರ ಕೊಡುಗೆ ಅಥವಾ ಮುಂದುವರಿದ ಸಾರ್ವಜನಿಕ ಕೊಡುಗೆ ರೂಪದಲ್ಲಿ (ಸಾಲ ಪತ್ರಗಳು ಸೇರಿದಂತೆ) ಮತ್ತು ಅವಧಿ ಸಾಲಗಳ ರೂಪದಲ್ಲಿ ಹಣವನ್ನು ಪಡೆದಿರುವುದಿಲ್ಲ.

(ix) ನಮ್ಮ ಅಭಿಪ್ರಾಯದಲ್ಲಿ, ನಮಗೆ ಒದಗಿಸಿರುವ ಮಾಹಿತಿ ಅನುಸಾರ, ನಮ್ಮ ಲೆಕ್ಕಪರಿಶೋಧನೆ ನಡೆಸಿದ ಆಧಾರದ ಮೇಲೆ ಹಾಗೂ ಕಂಪನಿಯ ಪುಸ್ತಕಗಳು ಮತ್ತು ದಾಖಲೆ ಪತ್ರಗಳ ಸಮಗ್ರ ಪರಿಶೀಲನೆ ನಡೆಸಿದ ಮೇರೆಗೆ ಸದರಿ ವರ್ಷದ ಅವಧಿಯಲ್ಲಿ ಕಂಪನಿಯಿಂದಾಗಲಿ ಅಥವಾ ಕಂಪನಿಗಾಗಲಿ ಯಾವುದೇ ವಂಚನೆ ಮಾಡಿರುವುದಾಗಲಿ ಅಥವಾ ಆಗಿರುವುದಾಗಲಿ ಕಂಡು ಬಂದಿರುವುದಿಲ್ಲ ಅಥವಾ ವರದಿಯಾಗಿರುವುದಿಲ್ಲ.

## ಲೆಕ್ಕ ಪರಿಶೋಧಕರ ವರದಿ (ಮುಂದುವರೆದುದು)

(x) ಕಂಪನಿಗಳ ಕಾಯ್ದೆಯ ಪರಿಶಿಷ್ಟ –V ಓದಿಕೊಂಡಂತೆ ಪ್ರಕರಣ 197ರ ಉಪಬಂಧಗಳ ಅನ್ವಯ ಕಡ್ಡಾಯಗೊಳಿಸಿರುವ ಅಗತ್ಯ ಅನುಮೋದನೆಗಳ ಅನುಸಾರ ವ್ಯವಸ್ಥಾಪನಾ ಸಂಭಾವನೆಯನ್ನು ಪಾವತಿ ಮಾಡಲಾಗಿದೆ ಅಥವಾ ಏರ್ಪಾಡು ಮಾಡಲಾಗಿದೆ.

(xi) ನಮ್ಮ ಅಭಿಪ್ರಾಯದಂತೆ, ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಚಿಟ್‌ಫಂಡ್ ವ್ಯವಹಾರದ ಸಂಬಂಧದಲ್ಲಿ ಇದಕ್ಕೆ ಅನ್ವಯವಾಗುವ ವಿಶೇಷ ಶಾಸನಗಳ ಉಪಬಂಧಗಳನ್ನು ಕಂಪನಿಯು ಪರಿಪಾಲಿಸಿದೆ. ಇದಲ್ಲದೆ ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದ ಪ್ರಯುಕ್ತ ಸಿಎಆರ್‌ಓ 2016ರ ಕಂಡಿಕೆ 3 ರ ಕಲಂ (xii) ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

(xii) ಸಂಬಂಧಪಟ್ಟ ವ್ಯಕ್ತಿಗಳ ಜೊತೆಗಿನ ವ್ಯವಹಾರವು ಕಂಪನಿಗಳ ಕಾಯ್ದೆ 2013ರ ಪ್ರಕರಣ 177 ಮತ್ತು 188ರ ಅನುಸಾರ ಇರುವುದು ಮತ್ತು ಅನ್ವಯವಾಗುವ ಲೆಕ್ಕಪತ್ರದ ಗುಣಮಟ್ಟದನ್ವಯ ಅಗತ್ಯವಾದಂತೆ ಹಣಕಾಸಿನ ಹೇಳಿಕೆಯಲ್ಲಿ ವಿವರಗಳನ್ನು ತಿಳಿಸಲಾಗಿದೆ.

(xiii) ಕಂಪನಿಯು ಪರಾಮರ್ಶನೆಯಲ್ಲಿರುವ ವರ್ಷದಲ್ಲಿ ಯಾವುದೇ ಷೇರುಗಳ ಆದ್ಯತಾ ಹಂಚಿಕೆಯನ್ನಾಗಲಿ ಅಥವಾ ಖಾಸಗಿಯವರಿಗೆ ನೀಡುವುದನ್ನಾಗಲಿ ಅಥವಾ ಪೂರ್ಣವಾಗಿ ಅಥವಾ ಭಾಗಶಃವಾಗಿ ಪರಿವರ್ತಿಸಬಹುದಾದ ಡಿಬೆಂಚರುಗಳನ್ನಾಗಲಿ ಹಂಚಿಕೆ ಮಾಡಿರುವುದಿಲ್ಲ.

(xiv) ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಯು ನಿರ್ದೇಶಕರುಗಳ ಜೊತೆ ಅಥವಾ ಇವರಿಗೆ ಸಂಬಂಧಿಸಿರುವ ವ್ಯಕ್ತಿಗಳ ಜೊತೆಯಾಗಲಿ ಯಾವುದೇ ನಗದೇತರ ವ್ಯವಹಾರ ಮಾಡಿಕೊಂಡಿರುವುದಿಲ್ಲ.

(xv) ಕಂಪನಿಯು ಬ್ಯಾಂಕಿಂಗೇತರ ಹಣಕಾಸು ಕಂಪನಿಯಾಗಿರುವುದಿಲ್ಲ. ಆದ ಪ್ರಯುಕ್ತ ಸಿಎಆರ್‌ಓ 2016ರ ಕಂಡಿಕೆ 3 ಕಲಂ (xvi) ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

**ಮೆ॥ ಪಿ. ಚಂದ್ರಶೇಖರ್, ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066

ಸಹಿ/–
**(ಮಣಿಕುಮಾರ್.ಡಿ)**
ಪಾಲುದಾರರು
ಸದಸ್ಯತ್ವ ಸಂಖ್ಯೆ 212544

ಸ್ಥಳ : ಬೆಂಗಳೂರು
ದಿನಾಂಕ : 18.09.2017

## 'ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಹಣಕಾಸಿನ ಹೇಳಿಕೆಗಳ ಮೇಲಿನ ಸಮ ದಿನಾಂಕದ ಸ್ವತಂತ್ರ ಲೆಕ್ಕಪರಿಶೋಧಕರ ಪರಿಷ್ಕೃತ ವರದಿಗೆ ಅನುಬಂಧ-ಬಿ'

**ಕಂಪನಿಗಳ ಕಾಯ್ದೆ, 2013ರ ಪ್ರಕರಣ 143ರ ಉಪ ಪ್ರಕರಣ 3ರ ಕಲಂ (ಎಫ್) ಅನ್ವಯ ('ಕಾಯ್ದೆ') ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲಿನ ವರದಿ.**

ನಾವು 31ನೇ ಮಾರ್ಚ್, 2017ರಂದು ಇದ್ದಂತೆ **ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ** (''ದಿ ಕಂಪನಿ'')ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ, ಸದರಿ ದಿನಾಂಕಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಹಣಕಾಸಿನ ಹೇಳಿಕೆಗಳ ಬಗ್ಗೆ ಪರಿಶೋಧನೆ ಮಾಡುವುದರ ಜೊತೆಗೆ ಲೆಕ್ಕಪರಿಶೋಧನೆ ಮಾಡಿದ್ದೇವೆ.

**ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಆಡಳಿತ ಮಂಡಳಿಯ ಹೊಣೆಗಾರಿಕೆ:**

ಭಾರತದ ಲೆಕ್ಕ ಪರಿಶೋಧಕರ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಯ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಅಂಶಗಳನ್ನು ಪರಿಗಣಿಸಿ ಅದರ ಮೇರೆಗೆ ರೂಪಿಸಿರುವ ಹಣಕಾಸಿನ ವರದಿ ಅರ್ಹತೆಯ ಮೇಲಿನ ಆಂತರಿಕ ನಿಯಂತ್ರಣಗಳ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಜಾರಿಗೆ ತರಲು ಮತ್ತು ನಿರ್ವಹಣೆ ಮಾಡಲು ಕಂಪನಿಯ ಆಡಳಿತ ಮಂಡಳಿ ಜವಾಬ್ದಾರಿಯಾಗಿರುವುದು. ಕಂಪನಿಯ ನೀತಿಗಳ ಪಾಲನೆ, ಕಂಪನಿಯ ಸ್ವತ್ತುಗಳ ರಕ್ಷಣೆ, ವಂಚನೆ ಮತ್ತು ತಪ್ಪುಗಳ ತಡೆ ಮತ್ತು ಪತ್ತೆಹಚ್ಚುವಿಕೆ, ಲೆಕ್ಕಪತ್ರದ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಮತ್ತು ಕಂಪನಿಗಳ ಕಾಯ್ದೆ, 2013ರ ಅನ್ವಯ ಅಗತ್ಯವಾದಂತೆ ವಿಶ್ವಾಸನೀಯ ಹಣಕಾಸಿನ ಮಾಹಿತಿಯ ಸಕಾಲಿಕ ಸಿದ್ಧಪಡಿಸುವಿಕೆ ಸೇರಿದಂತೆ ಕಂಪನಿಯ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥವಾಗಿ ನಡೆಸುವಿಕೆಯನ್ನು ಖಾತರಿಪಡಿಸಲು ಸಮರ್ಥವಾಗಿ ಕಾರ್ಯಾಚರಣೆ ಯಾಗುವ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಯೂ ಈ ಜವಾಬ್ದಾರಿಯಲ್ಲಿ ಒಳಗೊಂಡಿರುವುದು.

**ಲೆಕ್ಕಪರಿಶೋಧಕರ ಜವಾಬ್ದಾರಿ:**

ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ಹಣಕಾಸಿನ ವರದಿ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಯ ಮಾರ್ಗದರ್ಶಿ ಟಿಪ್ಪಣಿ ಅನುಸಾರ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ ಕಂಪನಿಗಳ ಕಾಯ್ದೆ 2013ರ ಪ್ರಕರಣ 143(10)ರ ಅನ್ವಯ ನಿಗದಿಪಡಿಸಲಾಗಿದೆ ಎಂಬುದಾಗಿ ಭಾವಿಸಲಾಗಿರುವ ಭಾರತದ ಲೆಕ್ಕ ಪರಿಶೋಧಕರ ಸಂಸ್ಥೆ (ಐಸಿಎಐ) ಹೊರಡಿಸಿರುವ ಪರಿಶೋಧನೆ ಮೇಲಿನ ಗುಣಮಟ್ಟಗಳ ಅನ್ವಯ ನಾವು ಲೆಕ್ಕಪರಿಶೋಧನೆ ನಡೆಸಿದ್ದೇವೆ. ಇವೆರಡೂ ಆಂತರಿಕ ಹಣಕಾಸಿನ ನಿಯಂತ್ರಣಗಳ ಪರಿಶೋಧನೆಗೆ ಅನ್ವಯವಾಗುತ್ತವೆ ಮತ್ತು ಇವೆರಡೂ ಮಾರ್ಗದರ್ಶನಗಳನ್ನು ಐಸಿಎಐ ನೀಡಿದೆ.

ಸದರಿ ಗುಣಮಟ್ಟಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಯಂತೆ ನಾವು ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅಳವಡಿಸಿಕೊಳ್ಳಲಾಗಿದೆಯೇ ಮತ್ತು ಅವುಗಳನ್ನು ನಿರ್ವಹಣೆ ಮಾಡಲಾಗಿದೆಯೇ ಮತ್ತು ಸದರಿ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧದಲ್ಲಿ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಗೊಳ್ಳುತ್ತಿರುವವೇ ಎಂಬುದರ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅವಶ್ಯಕತೆಗಳನ್ನು ಅನುಸರಿಸಬೇಕಾಗುತ್ತದೆ ಮತ್ತು ಯೋಜನೆ ಮಾಡಿ ಲೆಕ್ಕಪರಿಶೋಧನೆ ಮಾಡಬೇಕಾಗುತ್ತದೆ.

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆ ಸಾಕಷ್ಟು ಪ್ರಮಾಣದಲ್ಲಿ ಇರುವುದೇ ಮತ್ತು ಅವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿರುವವೇ ಎಂಬ ವಿಚಾರದ ಬಗ್ಗೆ ಪರಿಶೋಧನಾ ಪುರಾವೆ ಪಡೆಯಲು ಕ್ರಮಗಳನ್ನು ನಡೆಸುವಿಕೆಯ ಕಾರ್ಯವೂ ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ಹಣಕಾಸಿನ ವರದಿಯ ಮೇಲಿನ ಆಂತರಿಕ ನಿಯಂತ್ರಣಗಳ ಬಗ್ಗೆ ನಾವು ನಡೆಸುವ ಪರಿಶೋಧನೆಯಲ್ಲಿ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅರ್ಥವಂತಿಕೆಯನ್ನು ಪಡೆಯುವಂತೆ ವಾಸ್ತವಿಕ ದೌರ್ಬಲ್ಯ ಇರುವಿಕೆಯ ತೊಂದರೆಯ ನಿರ್ಧರಣೆ ಮತ್ತು ಈ ರೀತಿ ನಿರ್ಧರಣೆ ಮಾಡಿದ ತೊಂದರೆಯ ಆಧಾರದ ಮೇಲೆ ಆಂತರಿಕ ನಿಯಂತ್ರಣಗಳ ವಿನ್ಯಾಸ ಮತ್ತು ಕಾರ್ಯಾಚರಣೆ ಪರಿಣಾಮವನ್ನು ಪರೀಕ್ಷಿಸುವುದು ಮತ್ತು ಮೌಲ್ಯ ಮಾಪನ ಮಾಡುವಿಕೆಯ ಜವಾಬ್ದಾರಿಯೂ ಒಳಗೊಂಡಿರುವುದು. ಹಣಕಾಸಿನ ಹೇಳಿಕೆಗಳಲ್ಲಿ ವಂಚನೆಯ ಪ್ರಯುಕ್ತ ಅಥವಾ ತಪ್ಪಿನ ಕಾರಣ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗುವ ತೊಂದರೆಗಳನ್ನು ನಿರ್ಧರಣೆ ಮಾಡುವುದು ಸೇರಿದಂತೆ ಲೆಕ್ಕಪರಿಶೋಧಕರ ತೀರ್ಮಾನಗಳ ಮೇಲೆ ಕ್ರಮಾವಳಿಗಳನ್ನು ಆಯ್ಕೆ ಮಾಡಲಾಗಿದೆ.

ಹಣಕಾಸಿನ ವರದಿ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ನಮ್ಮ ಪರಿಶೋಧನೆ ಅಭಿಪ್ರಾಯಕ್ಕೆ ಆಧಾರ ಒದಗಿಸಲು ನಾವು ಪಡೆದುಕೊಂಡಿರುವ ಪರಿಶೋಧನಾ ಪುರಾವೆಯು ಸಾಕಷ್ಟಿರುವುದು ಮತ್ತು ಸೂಕ್ತವಾಗಿರುವುದು ಎಂಬುದಾಗಿ ನಾವು ನಂಬಿದ್ದೇವೆ.

**ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥ:**

ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದು ಮತ್ತು ಹಣಕಾಸಿನ ವರದಿಯ ವಿಶ್ವಾಸಾರ್ಹತೆ ಬಗ್ಗೆ

ಸೂಕ್ತವಾದ ಆಶ್ವಾಸನೆ ಒದಗಿಸಲು ರೂಪಿಸಿರುವ ಒಂದು ಪ್ರಕ್ರಿಯೆ ಆಗಿದೆ. ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಒಳಪಡುವ ನೀತಿಗಳು ಮತ್ತು ಕ್ರಮಾವಳಿಗಳು ಈ ಕೆಳಕಂಡಂತಿರುವವು:

- ಕಂಪನಿಯ ವ್ಯವಹಾರಗಳನ್ನು ಮತ್ತು ಆಸ್ತಿಗಳ ಸ್ಥಾನಮಾನವನ್ನು ಸೂಕ್ತವಾದ ವಿವರಣೆಗಳೊಡನೆ ನಿಖರವಾಗಿ ಮತ್ತು ಅತ್ಯುತ್ತಮವಾಗಿ ನಿರೂಪಿಸುವ ದಾಖಲೆಗಳ ನಿರ್ವಹಣೆ.
- ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಅನುಮತಿ ನೀಡಲು ಅಗತ್ಯವಾದಂತೆ ವ್ಯವಹಾರವನ್ನು ದಾಖಲು ಮಾಡಲಾಗಿದೆ, ಮತ್ತು ಕಂಪನಿಯ ಸ್ವೀಕರಣೆ ಮತ್ತು ಖರ್ಚುಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರು ನೀಡಿರುವ ಅಧಿಕಾರಿಗಳ ಅನುಸಾರ ಮಾತ್ರ ಮಾಡಲಾಗುತ್ತಿದೆ ಎಂಬುದಕ್ಕೆ ಸೂಕ್ತವಾದ ಭರವಸೆ ನೀಡಿಕೆ; ಮತ್ತು
- ಹಣಕಾಸಿನ ಹೇಳಿಕೆಗಳ ಮೇಲೆ ವಾಸ್ತವಿಕವಾಗಿ ಪರಿಣಾಮ ಬೀರಬಹುದಾದ ಕಂಪನಿಯ ಸ್ವತ್ತುಗಳ ಅನಧಿಕೃತ ಸ್ವಾಧೀನತೆ, ಉಪಯೋಗ ಅಥವಾ ವ್ಯವಸ್ಥೆಯ ತಡೆ ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವಿಕೆ ಬಗ್ಗೆ ಸೂಕ್ತ ಭರವಸೆ ಒದಗಿಸುವುದು.

**ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅಂತರ್ಗತ ಮಿತಿಗಳು:**

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿನ ಅಂತರ್ಗತ ಮಿತಿಗಳಿಂದಾಗಿ ಮೋಸ ಅಥವಾ ಅಸಮರ್ಪಕ ಆಡಳಿತವು ನಿಯಂತ್ರಣಗಳನ್ನು ದಾಟಿ ಹೋಗುವ ತಪ್ಪು ಅಥವಾ ವಂಚನೆಯ ಪ್ರಯುಕ್ತ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗುವ ಸಾಧ್ಯತೆಗಳಿರುತ್ತವೆ. ಇವುಗಳನ್ನು ಪತ್ತೆ ಹಚ್ಚುವುದು ಸಾಧ್ಯವಾಗುವುದಿಲ್ಲ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಮುಂದಿನ ಅವಧಿಗಳಿಗೆ ಅನ್ವಯಿಸಿದರೆ ಅದು ಪರಿಸ್ಥಿತಿಯ ಬದಲಾವಣೆಗಳ ಪ್ರಯುಕ್ತ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಕೊರತೆಯಾಗುವ ಅಪಾಯಕ್ಕೆ ಒಳಪಟ್ಟಿರುತ್ತದೆ ಅಥವಾ ನೀತಿಗಳು ಅಥವಾ ಕ್ರಮಾವಳಿಗಳ ಅನುಸರಣೆ ಪ್ರಮಾಣ ಕ್ಷೀಣಿಸಬಹುದಾಗಿರುತ್ತದೆ.

**ಅಭಿಪ್ರಾಯ:**

ನಮ್ಮ ಅಭಿಪ್ರಾಯವೇನೆಂದರೆ, ಕಂಪನಿಯು ಪ್ರತಿಯೊಂದು ವಾಸ್ತವಿಕ ವಿಚಾರಗಳ ಸಂಬಂಧದಲ್ಲಿ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿದೆ. ಹಣಕಾಸಿನ ವರದಿಯ ಮೇಲಿನ ಈ ಆಂತರಿಕ ಹಣಕಾಸು ನಿಯಂತ್ರಣಗಳು ದಿನಾಂಕ 31ನೇ ಮಾರ್ಚ್ 2017ರಂದು ಇದ್ದಂತೆ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿವೆ; ಭಾರತದ ಲೆಕ್ಕಪರಿಶೋಧಕರ ಸಂಸ್ಥೆಯು ಹೊರಡಿಸಿರುವ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ರೂಪಿಸಿರುವ ಹಣಕಾಸಿನ ವರದಿಯ ಮೇಲಿನ ಆಂತರಿಕ ನಿಯಂತ್ರಣಗಳ ಅರ್ಹತೆಯ ಮೇಲೆ ಇವು ಆಧಾರಿತವಾಗಿವೆ.

**ಮೆ|| ಪಿ. ಚಂದ್ರಶೇಖರ್, ಎಲ್‌ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066

ಸಹಿ/-
**(ಮಣಿಕುಮಾರ್.ಡಿ)**
ಪಾಲುದಾರರು
ಸದಸ್ಯತ್ವ ಸಂಖ್ಯೆ 212544

ಸ್ಥಳ : ಬೆಂಗಳೂರು
ದಿನಾಂಕ : 18.09.2017

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2017ರಲ್ಲಿದ್ದಂತೆ ಸ್ಥಿತಿ ವಿವರಣಾ ಪಟ್ಟಿ

(ರೂ.ಗಳಲ್ಲಿ)

| ವಿವರ | ಟಿಪ್ಪಣಿ ಸಂಖ್ಯೆ | 31.03.2017ರಲ್ಲಿದ್ದಂತೆ | | 31.03.2016ರಲ್ಲಿದ್ದಂತೆ | |
|---|---|---|---|---|---|
| **I. ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | | | |
| **(1) ಷೇರುದಾರರ ನಿಧಿಗಳು** | | | | | |
| (ಎ) ಷೇರು ಬಂಡವಾಳ | 3 | 201,766,000 | | 201,766,000 | |
| (ಬಿ) ಮೀಸಲು ಮತ್ತು ಹೆಚ್ಚಳ | 4 | 2,920,674,404 | 3,122,440,404 | 2,577,821,892 | 2,779,587,892 |
| **(2) ಹಂಚಿಕೆ ಆಗದೆ ಉಳಿದ ಷೇರು ಅರ್ಜಿ ಹಣ** | | | 225,581,779 | | 225,581,779 |
| **(3) ಚಾಲ್ತಿಯಲ್ಲಿಲ್ಲದ ಹೊಣೆಗಾರಿಕೆಗಳು** | | | | | |
| (ಎ) ಇತರೆ ದೀರ್ಘಾವಧಿ ಹೊಣೆಗಾರಿಕೆಗಳು | 5 | 805,583,312 | | 779,843,149 | |
| (ಬಿ) ದೀರ್ಘಾವಧಿ ಮುನ್ನೇರ್ಪಾಡುಗಳು | 6 | 103,263,658 | 908,846,970 | 98,729,346 | 878,572,495 |
| **(4) ಚಾಲ್ತಿ ಹೊಣೆಗಾರಿಕೆಗಳು** | | | | | |
| (ಎ) ಸಂದಾಯವಾಗಬೇಕಾದ ವ್ಯಾಪಾರ | 7 | 1,113,960,906 | | 1,114,986,890 | |
| (ಬಿ) ಇನ್ನಿತರೆ ಚಾಲ್ತಿ ಹೊಣೆಗಾರಿಕೆಗಳು | 8 | 393,261,416 | | 223,934,833 | |
| (ಸಿ) ಅಲ್ಪಾವಧಿ ಮುನ್ನೇರ್ಪಾಡುಗಳು | 9 | 393,083,486 | 1,900,305,808 | 395,365,230 | 1,734,286,953 |
| ಒಟ್ಟು | | | **6,157,174,961** | | **5,618,029,119** |
| **II. ಆಸ್ತಿಗಳು :** | | | | | |
| **(1) ಚಾಲ್ತಿಯಲ್ಲಿಲ್ಲದ ಆಸ್ತಿಗಳು** | | | | | |
| (ಎ) ಸ್ಥಿರಾಸ್ತಿಗಳು | 10 | | | | |
| (i) ಗೋಚರಿತ ಆಸ್ತಿಗಳು | | 278,591,546 | | 245,307,991 | |
| (ii) ಅಗೋಚರಿತ ಆಸ್ತಿಗಳು | | 3,668,740 | | 4,144,625 | |
| (iii) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ | | 340,240,465 | | 313,172,589 | |
| (ಬಿ) ಚಾಲ್ತಿಯಲ್ಲಿಲ್ಲದ ಹೂಡಿಕೆಗಳು | 11 | 134,600,831 | | 133,650,831 | |
| (ಸಿ) ಮುಂದೂಡಿದ ತೆರಿಗೆ ಆಸ್ತಿಗಳು (ನಿವ್ವಳ) | 12 | 97,635,096 | | 101,382,759 | |
| (ಡಿ) ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು | 13 | 889,955,086 | | 955,062,973 | |
| | | – | 1,744,691,764 | | 1,752,721,768 |
| **(2) ಚಾಲ್ತಿ ಆಸ್ತಿಗಳು** | | | | | |
| (ಎ) ತಪಶೀಲು ಸರಕುಗಳು | 14 | 942,540,438 | | 786,428,124 | |
| (ಬಿ)ಸ್ವೀಕರಿಸಬಹುದಾದ ವ್ಯಾಪಾರ | 15 | 195,105,223 | | 87,489,194 | |
| (ಸಿ) ನಗದು ಮತ್ತು ಬ್ಯಾಂಕ್ ಶಿಲ್ಕುಗಳು | 16 | 2,109,390,121 | | 1,630,604,527 | |
| (ಡಿ) ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು | 17 | 1,031,673,708 | | 1,213,664,178 | |
| (ಇ) ಇನ್ನಿತರೆ ಚಾಲ್ತಿ ಆಸ್ತಿಗಳು | 18 | 133,773,707 | 4,412,483,197 | 147,121,328 | 3,865,307,351 |
| ಒಟ್ಟು | | | **6,157,174,961** | | **5,618,029,119** |

ಮಹತ್ವದ ಲೆಕ್ಕಪತ್ರ ನೀತಿಗಳು, ಲೆಕ್ಕಗಳ ಮೇಲಿನ ಟಿಪ್ಪಣಿಗಳು ಮತ್ತು ನಗದು ಹರಿವಿನ ಹೇಳಿಕೆಯು ಹಣಕಾಸಿನ ಹೇಳಿಕೆಗಳ ಸಮಗ್ರ ಭಾಗವಾಗಿರುವುದು.

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

ಸಹಿ/-
ಎ.ಎಂ. ಚಂದ್ರಪ್ಪ
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
ಶ್ರೀದೇವಿ ಬಿ.ಎಸ್.
ಕಂಪನಿ ಕಾರ್ಯದರ್ಶಿ

ಸಹಿ/-
ಡಾ. ಜಿ.ಸಿ. ಪ್ರಕಾಶ್
ವ್ಯವಸ್ಥಾಪಕ ನಿರ್ದೇಶಕರು

ಸಹಿ/-
ಹಂಪನ್‌ಗೌಡ ಬಾದರ್ಲಿ
ಅಧ್ಯಕ್ಷರು

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ
ಮೆ|| ಪಿ. ಚಂದ್ರಶೇಖರ್ ಎಲ್‌ಎಲ್‌ಪಿ
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066
ಸಹಿ/-
ಡಿ. ಮಣಿಕುಮಾರ್
ಪಾಲುದಾರರು (ಸದಸ್ಯತ್ವ ಸಂಖ್ಯೆ 212544)

ಬೆಂಗಳೂರು
ದಿನಾಂಕ : 07.08.2017

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ತಃಖ್ತೆ

(ರೂ.ಗಳಲ್ಲಿ)

| | ವಿವರ | ಟಿಪ್ಪಣಿ ಸಂಖ್ಯೆ | 31.03.2017ಕ್ಕೆ ಕೊನೆಗೊಂಡ ವರ್ಷ | 31.03.2016ಕ್ಕೆ ಕೊನೆಗೊಂಡ ವರ್ಷ |
|---|---|---|---|---|
| I. | ಕಾರ್ಯಾಚರಣೆಯಿಂದ ಬಂದ ಆದಾಯ | 19 | 13,892,846,269 | 12,839,807,005 |
| II. | ಇತರೆ ಆದಾಯ | 20 | 185,515,629 | 200,238,869 |
| III. | **ಒಟ್ಟು ಆದಾಯ (I +II)** | | **14,078,361,898** | **13,040,045,874** |
| IV. | **ವೆಚ್ಚಗಳು :** | | | |
| | ಉಪಯೋಗಿಸಿದ ವಸ್ತುಗಳ ವೆಚ್ಚ | 21 | 104,530,364 | 103,310,484 |
| | ವ್ಯಾಪಾರದಲ್ಲಿರುವ ಸರಕುಗಳ ಖರೀದಿ | 22 | 12,508,660,759 | 11,530,308,952 |
| | ವ್ಯಾಪಾರದಲ್ಲಿರುವ ಸರಕು ಮತ್ತು ಸಿದ್ಧವಾದ ಸರಕುಗಳ ತಪಶೀಲಿನಲ್ಲಿ ಬದಲಾವಣೆ | 23 | (188,935,417) | (151,821,972) |
| | ನೌಕರರ ಸೌಲಭ್ಯಗಳ ವೆಚ್ಚ | 24 | 230,845,036 | 222,980,213 |
| | ಹಣಕಾಸು ಖರ್ಚುಗಳು | 25 | 5,330,871 | 19,208,864 |
| | ಸವಕಳಿ ಮತ್ತು ಇಳಿನಿಧಿಯ ವೆಚ್ಚಗಳು | 10 | 28,521,468 | 25,538,958 |
| | ಇತರೆ ವೆಚ್ಚಗಳು | 26 | 818,447,377 | 751,130,579 |
| | **ಒಟ್ಟು ವೆಚ್ಚಗಳು** | | **13,507,400,458** | **12,500,656,078** |
| V. | **ಅಸಾಧಾರಣ ಮತ್ತು ವಿಶೇಷ ವಸ್ತುಗಳು ಮತ್ತು ತೆರಿಗೆಗಳ ಮುಂಚಿನ ಲಾಭ (III-IV)** | | **570,961,440** | **539,389,795** |
| VI. | ಅಸಾಧಾರಣ ವಸ್ತುಗಳು | | 1,283,155 | 1,283,153 |
| VII. | **ಅಸಾಧಾರಣ ವಸ್ತುಗಳು ಮತ್ತು ತೆರಿಗೆ ನಂತರದ** ಲಾಭ **(V-VI)** | | **569,678,285** | **538,106,642** |
| VIII. | ಹಿಂದಿನ ಅವಧಿಯ ವಸ್ತುಗಳು | 27 | 1,788,661 | 3,866,677 |
| IX. | **ತೆರಿಗೆ ಪೂರ್ವದ ಲಾಭ (VII-VIII)** | | **567,889,624** | **534,239,965** |
| X. | **ತೆರಿಗೆ ವೆಚ್ಚ :** | | | |
| | (1) ಚಾಲ್ತಿ ತೆರಿಗೆ | | 197,773,538 | 191,649,920 |
| | (2) ಮುಂದೂಡಿದ ತೆರಿಗೆ | 12 | 3,747,661 | (16,721,090) |
| XI. | **ಮುಂದುವರೆದಿರುವ ಕಾರ್ಯಾಚರಣೆಯಿಂದ ಸದರಿ ಅವಧಿಯಲ್ಲಿನ ಲಾಭ (ನಷ್ಟ) (IX-X)** | | **366,368,425** | **359,311,135** |
| XII. | **ಸ್ಥಗಿತಗೊಳಿಸಿದ ಕಾರ್ಯಾಚರಣೆಗಳು** | 28 | | |
| | ಸ್ಥಗಿತಗೊಳಿಸಿದ ಕಾರ್ಯಾಚರಣೆಯಿಂದ ಲಾಭ/(ನಷ್ಟ) | | 308,691 | 1,943,247 |
| XIII. | ಸ್ಥಗಿತಗೊಳಿಸಿದ ಕಾರ್ಯಾಚರಣೆಯ ತೆರಿಗೆ ವೆಚ್ಚಗಳು | | 106,832 | 672,519 |
| XIV. | ಸ್ಥಗಿತಗೊಳಿಸಿದ ಕಾರ್ಯಾಚರಣೆಯಿಂದ ಲಾಭ/(ನಷ್ಟ) (ತೆರಿಗೆ ನಂತರ) (XII-XIII) | | **201,859** | **1,270,728** |
| XV. | **ಅವಧಿಯ ಲಾಭ (ನಷ್ಟ) (XI+XIV)** | | **366,570,284** | **360,581,863** |
| XVI. | **ಪ್ರತಿ ಈಕ್ವಿಟಿ ಷೇರಿನ ಗಳಿಕೆ** | 29 | | |
| | (1) ಮೂಲ | | **182** | **179** |
| | (2) ದುರ್ಬಲ | | **182** | **179** |

ಮಹತ್ವದ ಲೆಕ್ಕಪತ್ರ ನೀತಿಗಳು, ಲೆಕ್ಕಗಳ ಮೇಲಿನ ಟಿಪ್ಪಣಿಗಳು ಮತ್ತು ನಗದು ಹರಿವಿನ ಹೇಳಿಕೆಯು ಹಣಕಾಸಿನ ಹೇಳಿಕೆಗಳ ಸಮಗ್ರ ಭಾಗವಾಗಿರುವುದು.

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

ಸಹಿ/-
**ಎ.ಎಂ. ಚಂದ್ರಪ್ಪ**
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
**ಶ್ರೀದೇವಿ ಬಿ.ಎಸ್.**
ಕಂಪನಿ ಕಾರ್ಯದರ್ಶಿ

ಸಹಿ/-
**ಡಾ. ಜಿ.ಸಿ. ಪ್ರಕಾಶ್**
ವ್ಯವಸ್ಥಾಪಕ ನಿರ್ದೇಶಕರು

ಸಹಿ/-
**ಹಂಪನ್‌ಗೌಡ ಬಾದರ್ಲಿ**
ಅಧ್ಯಕ್ಷರು

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ
**ಮೆ|| ಪಿ. ಚಂದ್ರಶೇಖರ್ ಎಲ್ಎಲ್‌ಪಿ**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066
ಸಹಿ/-
**ಡಿ. ಮಣಿಕುಮಾರ್**
ಪಾಲುದಾರರು (ಸದಸ್ಯತ್ವ ಸಂಖ್ಯೆ 212544)

ಬೆಂಗಳೂರು
ದಿನಾಂಕ : 07.08.2017

## 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದಲ್ಲಿನ ನಗದು ಹರಿವಿನ ಹೇಳಿಕೆ

(ಮೊತ್ತ ರೂ.ಗಳಲ್ಲಿ)

| ಕಾರ್ಯಾಚರಣೆ ಚಟುವಟಿಕೆಗಳಿಂದ ಆದ ನಗದು ಹರಿವು | ಪ್ರಸಕ್ತ ವರ್ಷ | ಕಳೆದ ವರ್ಷ |
|---|---|---|
| ತೆರಿಗೆ ಪೂರ್ವ ನಿವ್ವಳ ಲಾಭ | **568,219,163** | **523,579,611** |
| ಇವುಗಳಿಗೆ ಹೊಂದಾಣಿಕೆಗಳು : | | |
| ಸವಕಳಿ | 28,521,468 | 38,237,463 |
| ಸ್ಥಿರಾಸ್ತಿಗಳ ಮಾರಾಟದ ಮೇಲಿನ (ಲಾಭ)/ನಷ್ಟ | (20,590) | (21,817) |
| ಬ್ಯಾಂಕಿನಲ್ಲಿನ ಹೂಡಿಕೆಗಳಿಗೆ | (950,000) | (50,000) |
| ಹೂಡಿಕೆಗಳ ಮನ್ನಾ ಮಾಡಿರುವಿಕೆ | – | 5,000 |
| ಪಾವತಿಸಿದ ಬಡ್ಡಿ ಮತ್ತು ಗ್ಯಾರಂಟಿ ಕಮಿಷನ್ | 3,520,791 | 17,698,438 |
| ಸ್ವೀಕರಿಸಲ್ಪಟ್ಟ ಬಾಡಿಗೆ | (28,925,050) | (29,025,117) |
| ಆದಾಯ/(ನಷ್ಟ)ದ ಜೆವಿ ಪಾಲು | (31,751) | (31,803) |
| ಸ್ವೀಕರಿಸಲ್ಪಟ್ಟ ಬಡ್ಡಿ | (132,275,772) | (143,346,246) |
| ಸ್ವೀಕರಿಸಲ್ಪಟ್ಟ ಲಾಭಾಂಶ | (3,504,295) | (2,344,987) |
| **ಕಾರ್ಯನಿರತ ಬಂಡವಾಳ ಬದಲಾವಣೆಗಳ ಮುಂಚಿನ ಕಾರ್ಯಾಚರಣೆ ಲಾಭ** | **434,553,967** | **404,700,541** |
| ಇವುಗಳಿಗೆ ಹೊಂದಾಣಿಕೆಗಳು : | | |
| ತಪಶೀಲು ಪಟ್ಟಿಯಲ್ಲಿನ ಇಳಿಕೆ/(ಏರಿಕೆ) | (156,112,314) | (143,900,812) |
| ಸಾದಿಲ್ವಾರು ಸಾಲಗಾರರಲ್ಲಿನ (ಇಳಿಕೆ)/ಏರಿಕೆ(ನಿವ್ವಳ) | (107,616,029) | 21,707,398 |
| ಸಾಲಗಳು ಮತ್ತು ಮುಂಗಡಗಳಲ್ಲಿನ ಇಳಿಕೆ / (ಏರಿಕೆ) | 247,098,356 | (350,757,886) |
| ಇತರೆ ಚಾಲ್ತಿ ಆಸ್ತಿಗಳಲ್ಲಿನ (ಇಳಿಕೆ)/ಏರಿಕೆ | 13,347,621 | (22,210,351) |
| ಚಾಲ್ತಿ ಹೊಣೆಗಾರಿಕೆಗಳು ಮತ್ತು ಮುನ್ನೇರ್ಪಾಡುಗಳಲ್ಲಿನ ಇಳಿಕೆ / (ಏರಿಕೆ) | 172,554,709 | (149,774,812) |
| ಕಾರ್ಯಾಚರಣೆಗಳಿಂದ ಉತ್ಪತ್ತಿಯಾದ ನಗದು | 603,826,311 | (240,235,922) |
| ಪಾವತಿಸಲಾದ ಆದಾಯ ತೆರಿಗೆ | (197,880,370) | (192,322,439) |
| **ಕಾರ್ಯಾಚರಣೆ ಚಟುವಟಿಕೆಗಳಿಗೆ ವ್ಯಯಿಸಿದ ನಿವ್ವಳ ನಗದು** | **405,945,941** | **(432,558,361)** |
| **ಹೂಡಿಕಾ ಚಟುವಟಿಕೆಗಳಿಂದ ಬಂದ ನಗದು ಹರಿವು** | | |
| ಸ್ಥಿರಾಸ್ತಿಗಳ ಖರೀದಿ | (61,639,555) | (9,852,820) |
| ಪ್ರಗತಿಯಲ್ಲಿರುವ ಬಂಡವಾಳ ಕಾರ್ಯ | (27,067,876) | (69,757,450) |
| ಸ್ವೀಕರಿಸಲ್ಪಟ್ಟ ಲಾಭಾಂಶ | 3,504,295 | 2,344,987 |
| ಸ್ವೀಕರಿಸಲ್ಪಟ್ಟ ಬಡ್ಡಿ | 132,275,772 | 143,346,246 |
| ಸ್ವೀಕರಿಸಲ್ಪಟ್ಟ ಬಾಡಿಗೆ | 28,925,050 | 29,025,117 |
| ಆದಾಯ / (ನಷ್ಟ)ದ ಜೆವಿ ಪಾಲು | 31,751 | 31,803 |
| ಸ್ಥಿರಾಸ್ತಿಗಳ ಮಾರಾಟದ ಬಂದ ಮೊತ್ತ | 331,007 | 41,235,192 |
| **ಹೂಡಿಕೆ ಚಟುವಟಿಕೆಗಳಿಂದ ಉತ್ಪತ್ತಿಯಾದ ನಿವ್ವಳ ನಗದು** | **76,360,444** | **136,373,074** |
| **ಹಣಕಾಸಿನ ಚಟುವಟಿಕೆಗಳಿಂದ ಬಂದ ನಗದು ಹರಿವು** | | |
| ಪಾವತಿಸಿದ ಬಡ್ಡಿ ಮತ್ತು ಗ್ಯಾರಂಟಿ ಕಮಿಷನ್ | (3,520,791) | (17,698,438) |
| **ಹಣಕಾಸಿನ ಚಟುವಟಿಕೆಗಳಲ್ಲಿ ಬಳಸಿದ ನಿವ್ವಳ ನಗದು** | **(3,520,791)** | **(17,698,438)** |
| **ನಗದು ಮತ್ತು ನಗದಿಗೆ ಸಮಾನವಾದವುಗಳಲ್ಲಿನ ನಿವ್ವಳ ಹೆಚ್ಚಳ** | **478,785,594** | **(313,883,725)** |
| **ಪ್ರಾರಂಭಿಕ ನಗದು ಮತ್ತು ನಗದಿಗೆ ಸಮಾನವಾದವುಗಳು** | **1,630,604,527** | **1,944,488,252** |
| **ಮುಕ್ತಾಯದ ನಗದು ಮತ್ತು ನಗದಿಗೆ ಸಮಾನವಾದವುಗಳು** | **2,109,390,121** | **1,630,604,527** |

**ಮಹತ್ವದ ಲೆಕ್ಕಪತ್ರ ನೀತಿಗಳು, ಲೆಕ್ಕಗಳ ಮೇಲಿನ ಟಿಪ್ಪಣಿಗಳು ಮತ್ತು ನಗದು ಹರಿವಿನ ಹೇಳಿಕೆಯು ಹಣಕಾಸಿನ ಹೇಳಿಕೆಗಳ ಸಮಗ್ರ ಭಾಗವಾಗಿರುವುದು.**

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

| ಸಹಿ/- | ಸಹಿ/- | ಸಹಿ/- | ಸಹಿ/- |
|---|---|---|---|
| **ಎ.ಎಂ. ಚಂದ್ರಪ್ಪ** | **ಶ್ರೀದೇವಿ ಬಿ.ಎಸ್.** | **ಡಾ. ಜಿ.ಸಿ. ಪ್ರಕಾಶ್** | **ಹಂಪನ್‌ಗೌಡ ಬಾದರ್ಲಿ** |
| ಮುಖ್ಯ ಹಣಕಾಸು ಅಧಿಕಾರಿ | ಕಂಪನಿ ಕಾರ್ಯದರ್ಶಿ | ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ
**ಮೆ|| ಪಿ. ಚಂದ್ರಶೇಖರ್**
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066
ಸಹಿ/-
**ಡಿ. ಮಣಿಕುಮಾರ್**
ಪಾಲುದಾರರು (ಸದಸ್ಯತ್ವ ಸಂಖ್ಯೆ 212544)

ಬೆಂಗಳೂರು
ದಿನಾಂಕ : 07.08.2017

## 31ನೇ ಮಾರ್ಚ್ 2017ಕ್ಕೆ ಮುಕ್ತಾಯಗೊಂಡ ವರ್ಷದ ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು

### 1. ಕಂಪನಿ ಕುರಿತ ಮಾಹಿತಿ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪನಿಯು ಕರ್ನಾಟಕ ಸರ್ಕಾರದ ಒಂದು ಪ್ರಮುಖ ಸಂಸ್ಥೆಯಾಗಿರುವುದು. ಇದು ವ್ಯಾಪಾರ ಸಂಸ್ಥೆಯಾಗಿ 1966ರಲ್ಲಿ ಸ್ಥಾಪನೆಯಾಗಿದ್ದು, ವಿವಿಧ ಉತ್ಪನ್ನಗಳು ಮತ್ತು ಸೇವೆಗಳನ್ನು ಪೂರೈಸುವ ವ್ಯವಹಾರ ನಡೆಸುತ್ತಿದೆ. ಕಂಪನಿಯು ಪ್ರಾರಂಭವಾದ ಸಮಯದಿಂದ ಪ್ರಮುಖ ಮಾರಾಟ ಶಕ್ತಿಯಾಗಿ ರಾಷ್ಟ್ರೀಯ ಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ಮೂಡಿಸಿ ಪ್ರವರ್ಧನೆಯಾಗಿದೆ. ಕರ್ನಾಟಕದಾದ್ಯಂತ ಕಚೇರಿಗಳ ವ್ಯಾಪಕ ವ್ಯವಸ್ಥೆಯನ್ನು ಹೊಂದಿದೆ. ಇದಲ್ಲದೆ ದೇಶದ ಕೆಲವು ಪ್ರಮುಖ ಸ್ಥಳಗಳಲ್ಲಿಯೂ ಕಚೇರಿಗಳನ್ನು ಹೊಂದಿದೆ. ಭಾರತದಲ್ಲಿ ತಯಾರಿಸಿದ ವಿದೇಶಿ ಮದ್ಯ ಸೇರಿದಂತೆ ಹಲವಾರು ಉತ್ಪನ್ನಗಳು ಮತ್ತು ಸೇವೆಗಳನ್ನು ಮಾರಾಟ ಮಾಡುತ್ತಿದೆ. ಚಿಟ್ ಫಂಡ್‌ಗಳ ವ್ಯವಹಾರ ನಡೆಸುತ್ತಿದೆ. ಕಾಗದದ ಉತ್ಪನ್ನಗಳ ಉತ್ಪಾದನೆ ಮತ್ತು ಮಾರಾಟ ಮತ್ತು ಫಾರ್ಮಸ್ಯೂಟಿಕಲ್, ಕೈಗಾರಿಕಾ ಹಾಗೂ ಗ್ರಾಹಕ ಉತ್ಪನ್ನಗಳ ವ್ಯಾಪಾರ/ಮಾರಾಟ ಕಾರ್ಯದಲ್ಲಿಯೂ ತೊಡಗಿದೆ.

### 2. ಮಹತ್ತರವಾದ ಲೆಕ್ಕ ನಿರ್ವಹಣೆ ನೀತಿಗಳು :

#### ಎ. ಸಿದ್ಧತೆಯ ಮೂಲಾಧಾರ:

ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7 ಮತ್ತು ಕಂಪನಿಗಳ ಕಾಯ್ದೆ, 2013ರ ಸಂಬಂಧಪಟ್ಟ ಉಪಬಂಧಗಳನ್ನು ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 133ರ ಅನ್ವಯ ನಿಗದಿಪಡಿಸಿರುವ ಲೆಕ್ಕಪತ್ರದ ಗುಣಮಟ್ಟಗಳ ಪರಿಪಾಲನೆ ಮಾಡಲು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ (ಭಾರತೀಯ ಜಿಎಎಪಿ) ಕಂಪನಿಯ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲಾಗಿದೆ ಮತ್ತು ಮಂಡಿಸಲಾಗಿದೆ. ಹಣಕಾಸಿನ ಹೇಳಿಕೆಗಳನ್ನು ಐತಿಹಾಸಿಕ ವೆಚ್ಚದ ಒಡಂಬಡಿಕೆಯ ಅನ್ವಯ ಸಂಚಯನದ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ.

ಹೊಸದಾಗಿ ಹೊರಡಿಸಿರುವ ಲೆಕ್ಕ ನಿರ್ವಹಣೆ ಮಾನದಂಡವನ್ನು ಪ್ರಾರಂಭಿಕವಾಗಿ ಅಳವಡಿಸಿಕೊಂಡಿರುವ ಅಥವಾ ಇದುವರೆಗೆ ಅನುಸರಿಸಲಾಗಿರುವ ಲೆಕ್ಕನಿರ್ವಹಣೆ ನೀತಿಯಲ್ಲಿ ಬದಲಾವಣೆ ಮಾಡಬೇಕಾಗಿರುವ ಹಾಲಿ ಇರುವ ಲೆಕ್ಕ ನಿರ್ವಹಣೆ ಗುಣಮಟ್ಟಕ್ಕೆ ಪರಿಷ್ಕರಣೆ ಮಾಡಬೇಕಾದ ಸಂದರ್ಭಗಳ ಹೊರತಾಗಿ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ ಹಿಂದಿನ ವರ್ಷ ಅನುಸರಿಸಲಾಗಿರುವ ಲೆಕ್ಕ ನಿರ್ವಹಣಾ ನೀತಿಗಳನ್ನು ಅಳವಡಿಸಲಾಗಿದೆ.

#### ಬಿ. ಅಂದಾಜು ಬಳಕೆ :

ಭಾರತೀಯ ಜಿಎಎಪಿಗೆ ಅನುಗುಣವಾಗಿ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಬೇಕಾದರೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವರದಿಯಾಗಿರುವ ಬಾಕಿಗಳು ಮತ್ತು ಹಣಕಾಸಿನ ಹೇಳಿಕೆಯ ದಿನಾಂಕದಂದು ಇದ್ದಂತೆ ಸಂಭವನೀಯ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಮಾಹಿತಿಗಳು ಮತ್ತು ಸದರಿ ವರ್ಷದ ಅವಧಿಯಲ್ಲಿನ ಆದಾಯ ಮತ್ತು ವ್ಯಯಗಳನ್ನು ತಿಳಿಸಿರುವ ಮೊತ್ತಗಳ ಮೇಲೆ ಪರಿಣಾಮ ಬೀರುವ ಅಂದಾಜುಗಳನ್ನು ಮತ್ತು ಊಹೆಗಳನ್ನು ಕಂಪನಿಯ ಆಡಳಿತ ಮಂಡಳಿ ಮಾಡಬೇಕಾಗುತ್ತದೆ. ಆಡಳಿತ ಮಂಡಳಿಯು ನಂಬಿರುವುದೇನೆಂದರೆ, ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ ಅನುಸರಿಸಿರುವ ಅಂದಾಜು ನ್ಯಾಯಸಮ್ಮತವಾದುದು ಮತ್ತು ಸೂಕ್ತವಾದುದು ಆಗಿದೆ. ಸದರಿ ಅಂದಾಜುಗಳ ಪ್ರಯುಕ್ತ ಮುಂದಿನ ಫಲಿತಾಂಶವು ವ್ಯತ್ಯಾಸವಾಗಬಹುದು ಮತ್ತು ಫಲಿತಾಂಶವು ತಿಳಿದುಬಂದ/ವಾಸ್ತವಗೊಂಡ ಅವಧಿಗಳಲ್ಲಿ ಗುರುತಿಸಿರುವ ಅಂದಾಜುಗಳು ಮತ್ತು ವಾಸ್ತವಿಕ ಫಲಿತಾಂಶಗಳ ನಡುವೆ ವ್ಯತ್ಯಾಸ ಉಂಟಾಗಬಹುದಾಗಿರುತ್ತದೆ.

#### ಸಿ. ನಗದು ಹರಿವಿನ ಹೇಳಿಕೆ

ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ನೀಡಿಕೆ ಚಟುವಟಿಕೆಗಳಲ್ಲಿನ ನಗದು ಹರಿಯುವಿಕೆಗಳನ್ನು ವಿಭಜಿಸಿ ನಗದು ಹರಿವಿನ ಹೇಳಿಕೆಯನ್ನು ಸಿದ್ಧಪಡಿಸಲಾಗಿದೆ. ಕಾರ್ಯಾಚರಣೆ ಚಟುವಟಿಕೆಗಳಿಂದ ಆದ ನಗದು ಹರಿವಿನ ಬಗ್ಗೆ 'ನಗದು ಹರಿವಿನ ಹೇಳಿಕೆಗೆ ಸಂಬಂಧಿಸಿದ ಲೆಕ್ಕ ನಿರ್ವಹಣೆ ಮಾನದಂಡ 3 ರಲ್ಲಿ ತಿಳಿಸಿರುವ ಪರೋಕ್ಷ ವಿಧಾನ ಅನುಸರಿಸಿ ವರದಿ ಮಾಡಲಾಗಿದೆ. ಪರೋಕ್ಷ ವಿಧಾನದಲ್ಲಿ ನಿವ್ವಳ ಲಾಭವನ್ನು ಈ ಕೆಳಕಂಡವುಗಳಿಗೆ ಅನ್ವಯವಾಗುವಂತೆ ಹೊಂದಾಣಿಕೆ ಮಾಡಲಾಗಿದೆ:

1) ನಗದೇತರ ಸ್ವರೂಪದ ವ್ಯವಹಾರಗಳು

2) ಹಿಂದಿನ ಅಥವಾ ಮುಂದಿನ ಕಾರ್ಯಾಚರಣೆ ನಗದು ಸ್ವೀಕರಣೆ ಅಥವಾ ಪಾವತಿಗಳ ಯಾವುದೇ ಮುಂದೂಡಿದ ಅಥವಾ ಸಂಚಯನವಾದುದಕ್ಕೆ ಮತ್ತು

3) ಹೂಡಿಕೆ ಅಥವಾ ಹಣ ನೀಡಿಕೆ ನಗದು ಹರಿವಿನೊಡನೆ ಸೇರಿರುವ ಆದಾಯ ಅಥವಾ ಖರ್ಚಿನ ಐಟಂಗಳು.

ನಗದು ಮತ್ತು ನಗದಿಗೆ ಸಮಾನವಾದುವುಗಳಲ್ಲಿ ಕೈಯಲ್ಲಿರುವ ನಗದು ಮತ್ತು ಬ್ಯಾಂಕುಗಳಲ್ಲಿರುವ ಬೇಡಿಕೆ ಠೇವಣಿಗಳು, ಚಾಲ್ತಿ ಖಾತೆಯಲ್ಲಿನ ಬ್ಯಾಂಕ್ ಶಿಲ್ಕುಗಳು (ಠೇವಣಿ ಮಾಡಿದ ದಿನಾಂಕದಿಂದ 12 ತಿಂಗಳು ಅಥವಾ ಇದಕ್ಕಿಂತ ಕಡಿಮೆ ಅವಧಿಯ ಅವಧಿ ಪೂರ್ಣತೆ ಹೊಂದಿರುವುದು) ಗೊತ್ತಿರುವ ಮೊತ್ತದ ನಗದಿಗೆ ಸಿದ್ಧವಾಗಿ ಪರಿವರ್ತಿಸಬಲ್ಲ ಅತ್ಯಂತ ದ್ರವೀಕೃತ ಹೂಡಿಕೆಗಳು ಒಳಗೊಂಡಿರುವವು ಮತ್ತು ಇವುಗಳು ಮೌಲ್ಯಗಳಲ್ಲಿ ಬದಲಾವಣೆಯಾಗುವ ಅರ್ಥವಿಲ್ಲದ ತೊಂದರೆಗೆ ಒಳಪಟ್ಟಿರುವುದು.

#### ಡಿ. ಆದಾಯ ಗುರುತಿಸುವಿಕೆ

I) **ಮಾರಾಟ, ಕಮಿಷನ್ ಮತ್ತು ಸೇವಾ ಶುಲ್ಕಗಳು:**

ಎ) ಉತ್ಪನ್ನ ಮಾರಾಟದಿಂದ ಬಂದ ಆದಾಯ ಮತ್ತು ಅನುಷಂಗಿಕ ಮಾರಾಟದಿಂದ ಬಂದ ಕಮಿಷನ್ ಆದಾಯವನ್ನು ರವಾನೆ ಸಂದರ್ಭದಲ್ಲಿ ಗುರುತಿಸಲಾಗಿದೆ.

ಬಿ) ಸೇವೆಗೆ ಸಂಬಂಧಿಸಿದ ಆದಾಯವನ್ನು ಸಂಬಂಧಪಟ್ಟ ಸೇವೆಗಳನ್ನು ಒದಗಿಸುವಾಗ ಗ್ರಾಹಕರ ಜೊತೆ ಮಾಡಿಕೊಂಡಿರುವ ಒಪ್ಪಂದದ ನಿಯಮಗಳ ಅನುಸಾರ ಅಥವಾ ಒಪ್ಪಿಗೆಯಾದ ಗುರಿಯನ್ನು ಸಾಧಿಸಿದ ಆಧಾರದ ಮೇಲೆ ಗುರುತಿಸಲಾಗಿದೆ.

## ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದುದು)

ಸಿ) ಫೋರ್‌ಮನ್ಸ್ ಕಮಿಷನ್, ಫೋರ್‌ಮನ್ಸ್ ಶಾಸನಬದ್ಧ ಟಿಕೆಟ್ ಮೇಲಿನ ಲಾಭಾಂಶದ ಆದಾಯ, ತಪ್ಪಿತಸ್ಥ ಅಮೂಲ್ಯವಲ್ಲದ/ಅಮೂಲ್ಯವಾದ ಚಂದಾದಾರರುಗಳಿಂದ ಬಂದ ಬಡ್ಡಿ, ಚಿಟ್ ಫಂಡ್ ವ್ಯವಹಾರದ ಅಮೂಲ್ಯ ಚಂದಾದಾರರಿಂದ ಪಡೆದ ದಾಖಲೆಯ ಶುಲ್ಕಗಳು ಮತ್ತು ಬಾಡಿಗೆದಾರರಿಂದ ಬಂದ ದಂಡದ ಬಡ್ಡಿಯನ್ನು ಅವುಗಳ ಸಂಗ್ರಹದ ಅನಿಶ್ಚಿತತೆಯ ಕಾರಣದಿಂದಾಗಿ ನಗದಿನ ಆಧಾರದ ಮೇಲೆ ಗುರುತಿಸಲಾಗಿದೆ.

II) **ಇತರೆ ಆದಾಯ:**

ಎ) ಹೈರ್ ಪರ್ಚೇಸ್ ಮಾರಾಟಗಳ ಮೇಲಿನ ಬಡ್ಡಿ ವರಮಾನವನ್ನು ಹಣಕಾಸಿನ ಆಧಾರದ ಮೇಲೆ ಮಾನ್ಯ ಮಾಡಲಾಗಿದೆ.

ಬಿ) ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ದಿನಾಂಕ: 01.07.1990 ರಿಂದ 13.02.1997ರವರೆಗಿನ ಅವಧಿಗೆ ಮದ್ಯ ತಯಾರಕರುಗಳಿಂದ ಬರಬೇಕಾಗಿದ್ದ ಕಮಿಷನ್ ಆದಾಯವನ್ನು ಕಮಿಷನ್ ಸಂದಾಯವಾದ ಸಮಯದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಸಿ) ಬಡ್ಡಿಯ ಆದಾಯವನ್ನು ಸಂಚಯನದ ಆಧಾರದ ಮೇಲೆ ಮಾನ್ಯ ಮಾಡಲಾಗಿದೆ.

ಡಿ) ಹೂಡಿಕೆಗಳ ಮೇಲಿನ ಲಾಭಾಂಶದ ಆದಾಯ ಮತ್ತು ಸಹಾಯಕ ಕಂಪನಿಗಳಿಂದ ಬಂದ ಲಾಭಾಂಶವನ್ನು ಪಾವತಿ ಸ್ವೀಕರಣೆ ಹಕ್ಕು ಸಾಬೀತಾದಾಗ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಇ) ವಿಮಾ ಹಕ್ಕುಗಳನ್ನು ವಿಮಾ ಕಂಪನಿಯಿಂದ ಸ್ಥಿರೀಕರಣ ಪಡೆದಾಗ ಆದಾಯ ಎಂದು ಮಾನ್ಯ ಮಾಡಲಾಗಿದೆ.

ಇ. **ಸ್ಥಿರಾಸ್ತಿಗಳು ಮತ್ತು ಸವಕಳಿ:**

**ಗೋಚರಿತ ಸ್ಥಿರಾಸ್ತಿಗಳು:**

ಎ) ಗೋಚರಿತ ಸ್ಥಿರಾಸ್ತಿಗಳ ಬೆಲೆಯನ್ನು ಸೆಸ್, ವ್ಯಾಟ್ ಜಮೆ, ಅನುದಾನಗಳು, ಸವಕಳಿ ಮತ್ತು ಯಾವುದೇ ಇದ್ದಲ್ಲಿ ದುರ್ಬಲಗೊಳಿಸಿದ ನಷ್ಟದ ನಿವ್ವಳ ಸೇರಿದಂತೆ ಸ್ವಾಧೀನ ಪಡೆದ ಅಥವಾ ನಿರ್ಮಾಣ ಮಾಡಿದ ಸಮಯದಲ್ಲಿ ಇದ್ದಂತೆ ತಿಳಿಸಿದೆ. ಸದರಿ ಬೆಲೆಯಲ್ಲಿ ಆಸ್ತಿಯನ್ನು ಉಪಯೋಗಕ್ಕೆ ಒಳಪಡಿಸುವವರೆಗೆ ಮಾಡಿದ ಖರ್ಚುಗಳೂ ಸಹ ಒಳಗೊಂಡಿರುವುದು.

ಬಿ) ಗುತ್ತಿಗೆ ಮೇಲೆ ಪಡೆದಿರುವ ಆಸ್ತಿಗಳ ಬೆಲೆಯನ್ನು ಗುತ್ತಿಗೆ ಅವಧಿಯಲ್ಲಿ ಕಳೆಯಲಾಗಿದೆ.

ಸಿ) ಗುತ್ತಿಗೆ ಹಾಗೂ ಮಾರಾಟದ ಮೇಲೆ ಪಡೆದಿರುವ ಜಮೀನಿನ ಸಂಬಂಧದಲ್ಲಿ ಹಂಚಿಕೆಯ ಮೌಲ್ಯವನ್ನು ಯಾವುದೇ ಇದ್ದಲ್ಲಿ ವಾರ್ಷಿಕ ಗುತ್ತಿಗೆ ಬಾಡಿಗೆಯ ಜೊತೆಗೆ ಬಂಡವಾಳೀಕರಣಗೊಳಿಸಿದೆ.

ಡಿ) ಪ್ರಗತಿಯಲ್ಲಿರುವ ಬಂಡವಾಳ ಕೆಲಸವು ಅಭಿವೃದ್ಧಿಯಲ್ಲಿರುವ ಬಂಡವಾಳ ಯೋಜನೆಯ ಸಂಬಂಧದಲ್ಲಿ ಆಗಿರುವ ಖರ್ಚನ್ನು ಪ್ರತಿನಿಧಿಸುತ್ತದೆ ಮತ್ತು ಅದನ್ನು ಬೆಲೆಯಲ್ಲಿ ಒಳಪಡಿಸಿದೆ. ಕೆಲಸದ ವೆಚ್ಚದಲ್ಲಿ ಸಂಬಂಧಪಟ್ಟ ಸ್ವಾಧೀನತೆಯ ಖರ್ಚು, ಅಭಿವೃದ್ಧಿ ವೆಚ್ಚ, ಪಡೆಯುವಿಕೆ ವೆಚ್ಚ (ಅನ್ವಯವಾಗುವ ಕಡೆ) ಹಾಗೂ ಇತರೆ ನೇರ ಖರ್ಚುಗಳು ಒಳಗೊಂಡಿವೆ.

ಇ) ಗುತ್ತಿಗೆಗೆ ಪಡೆದ ಸ್ವತ್ತುಗಳಲ್ಲಿನ ಕಟ್ಟಡಗಳ ನಿರ್ಮಾಣದ ವೆಚ್ಚವನ್ನು ಗುತ್ತಿಗೆ ಅವಧಿಯಲ್ಲಿ ಕಳೆಯಲಾಗಿದೆ.

ಎಫ್) ಸ್ಥಿರಾಸ್ತಿಗಳ ಸಂಬಂಧ ಪೂರ್ಣವಾಗಿ ಸವಕಳಿಯನ್ನು ಕಳೆಯಲಾಗಿದೆ ಅಥವಾ ಉಳಿಕೆ ಮೌಲ್ಯವಾಗಿ ರೂ.1ರ ಸಾಧಾರಣ ಮೌಲ್ಯದ ನಿರ್ವಹಣೆ ಮೂಲಕ ಉಳಿಸಿಕೊಳ್ಳಲಾಗಿದೆ.

**ಅಗೋಚರ ಸ್ಥಿರಾಸ್ತಿಗಳು :**

ಎ) ಅಗೋಚರಿತ ಆಸ್ತಿಗಳನ್ನು ಸಂಚಯನವಾದ ಕಳಿಕೆ ಮತ್ತು ಸಂಚಯನವಾದ ಸಂಭವನೀಯ ನಷ್ಟದ ನಿವ್ವಳದ ಜೊತೆಗೆ ಸ್ವಾಧೀನತೆಯ ಬೆಲೆಯಲ್ಲಿ ತಿಳಿಸಲಾಗಿದೆ. ತಂತ್ರಾಂಶ/ತಾಂತ್ರಿಕ/ಪರವಾನಗಿಗಳನ್ನು ಮುಂದಿನ ಆರ್ಥಿಕ ಸೌಲಭ್ಯ ಒದಗಿಸಬೇಕಾಗಿರುವ ಸಂದರ್ಭಗಳಲ್ಲಿ ಬಂಡವಾಳೀಕರಣಗೊಳಿಸಿದೆ.

**ಎಫ್) ಸವಕಳಿ ಮತ್ತು ಇಳಿನಿಧಿ:**

ಎ) ಗೋಚರಿತ ಸ್ಥಿರಾಸ್ತಿಗಳ ಸವಕಳಿಯನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಅವಧಿಯ ಅನುಸಾರ ನೇರ ಮಾರ್ಗದ ವಿಧಾನದಲ್ಲಿ ತಿಳಿಸಿದೆ. ಸ್ವತ್ತುಗಳ ಮೂಲತಃ ಅಂದಾಜು ಮಾಡಿದ ಉಪಯೋಗದ ಅವಧಿಯ ಬಗ್ಗೆ ಪರಿಷ್ಕರಣೆ ಮಾಡಬೇಕಾಗಿರುವ ತದನಂತರದ ಖರ್ಚಿನ ವಿಚಾರದಲ್ಲಿ ಆಸ್ತಿಯ ಇಳಿನಿಧಿಯ ಸವಕಳಿ ಮೊತ್ತವನ್ನು ಆಸ್ತಿಯ ಪರಿಷ್ಕರಿಸಿದ ಉಳಿಕೆ ಉಪಯೋಗದ ಅವಧಿಯಲ್ಲಿನ ಆದಾಯಕ್ಕೆ ಸೇರಿಸಲಾಗಿದೆ.

ಸವಕಳಿ, ಕಂಪ್ಯೂಟೇಶನ್‌ಗೆ ಪರಿಗಣಿಸಿರುವ ಸ್ವತ್ತುಗಳ ಉಪಯುಕ್ತ ಅವಧಿಯನ್ನು ಈ ಕೆಳಗೆ ಕೊಟ್ಟಿದೆ:

## ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದುದು)

| ಸ್ವತ್ತಿನ ಪ್ರವರ್ಗ | | ಉಪಯುಕ್ತತೆ ಅವಧಿ |
|---|---|---|
| ಎ. | ಅಗ್ನಿಶಾಮಕ ಉಪಕರಣಗಳು | 20 ವರ್ಷಗಳು |
| ಬಿ. | ಮದ್ಯ ಮಾರಾಟ ಮಳಿಗೆಗಳಲ್ಲಿನ ಪೀಠೋಪಕರಣ ಮತ್ತು ಅಳವಡಿಕೆಗಳು | 5 ವರ್ಷಗಳು |
| ಸಿ. | ಪೀಠೋಪಕರಣ ಮತ್ತು ಅಳವಡಿಕೆಗಳು–ಇತರೆ | 10 ವರ್ಷಗಳು |
| ಡಿ. | ನಿರ್ವಹಣೆ ಉಪಕರಣಗಳು | 14 ವರ್ಷಗಳು |
| ಇ. | ತೂಕದ ಯಂತ್ರಗಳು | 14 ವರ್ಷಗಳು |
| ಎಫ್. | ಆರ್‌ಸಿಸಿ ಚೌಕಟ್ಟಿನ ನಿರ್ಮಾಣ ಹೊರತಾದ ಕಟ್ಟಡ | 60 ವರ್ಷಗಳು |
| ಜಿ. | ಕಂಪ್ಯೂಟರ್ | 3 ವರ್ಷಗಳು |
| ಎಚ್. | ಕಚೇರಿ ಉಪಕರಣಗಳು | 5 ವರ್ಷಗಳು |
| ಐ. | ವಿದ್ಯುತ್ ಉಪಕರಣಗಳು | 10 ವರ್ಷಗಳು |
| ಜೆ. | ವಾಹನಗಳು | 8 ವರ್ಷಗಳು |

ಬಿ. ಗುತ್ತಿಗೆದಾರಿಕೆ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡದ ಬಗ್ಗೆ ಸವಕಳಿಯನ್ನು ಬಳಕೆಗೆ ಅದನ್ನು ಒಳಪಡಿಸಿದ ದಿನಾಂಕದಿಂದ ಪ್ರಾರಂಭಿಸಿ ಗುತ್ತಿಗೆಯ ಉಳಿಕೆ ಅವಧಿಗೆ ಅನ್ವಯ ಮಾಡಿ ಲೆಕ್ಕ ಹಾಕಿದೆ.

ಸಿ. ಸದರಿ ವರ್ಷದಲ್ಲಿ ಸೇರ್ಪಡೆಗೊಂಡ/ ವಿಲೇವಾರಿ ಮಾಡಿದ/ ವಿಸರ್ಜಿಸಿದ ಸ್ಥಿರಾಸ್ತಿಗಳ ಸಂಬಂಧ ಸವಕಳಿಯನ್ನು ಸೇರ್ಪಡೆ/ ವಿಲೇವಾರಿ/ ವಿಸರ್ಜನೆ ದಿನಾಂಕದ ಗಣನೆಯ ಮೇರೆಗೆ ದಮಾಷ ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ.

### ಜಿ. ಸಾಲದ ವೆಚ್ಚ:

ಸಾಲದ ವೆಚ್ಚದಲ್ಲಿ ಬಡ್ಡಿ ಸಾಲಗಳನ್ನು ವ್ಯವಸ್ಥೆ ಮಾಡುವ ಸಂಬಂಧದಲ್ಲಿ ಉಂಟಾದ ಸಹಾಯಕ ವೆಚ್ಚ ಕಳೆಯುವಿಕೆ ಸೇರಿರುವುದು. ಸಾಲ ಪಡೆಯುವಿಕೆ ವ್ಯವಸ್ಥೆಯ ಸಂಬಂಧದಲ್ಲಿ ಆದ ಇತರೆ ವೆಚ್ಚಗಳು ಹಾಗೂ ವಿದೇಶಿ ಕರೆನ್ಸಿಯ ಸಾಲಗಳಿಂದ ಉದ್ಭವಿಸುವ ವಿನಿಮಯದ ವ್ಯತ್ಯಾಸಗಳನ್ನು ಅವುಗಳ ಪ್ರಮಾಣದನುಸಾರ ಬಡ್ಡಿಯ ವೆಚ್ಚಗಳಿಗೆ ಹೊಂದಾಣಿಕೆ ಎಂಬುದಾಗಿ ಕಳೆದುಹಾಕಲಾಗಿರುವುದು. ಸಾಲದ ವೆಚ್ಚವನ್ನು ಅರ್ಹತಾ ಸ್ವತ್ತಿನ ಬೆಲೆಯ ಭಾಗವಾಗಿ ಬಂಡವಾಳೀಕರಣ ಗೊಳಿಸಲಾಗಿದೆ. ಇದು ಮುಂದಿನ ಆರ್ಥಿಕ ಸೌಲಭ್ಯಗಳಲ್ಲಿ ಉಂಟು ಮಾಡುವ ಫಲಿತಾಂಶದ ಸಾಧ್ಯತೆ ಇದ್ದಾಗ ಈ ರೀತಿ ಮಾಡಲಾಗುವುದು ಮತ್ತು ವೆಚ್ಚವನ್ನು ವಿಶ್ವಾಸನೀಯವಾಗಿ ಲೆಕ್ಕ ಮಾಡಲಾಗಿದೆ.

ಇತರೆ ಸಾಲದ ವೆಚ್ಚಗಳನ್ನು ಅವುಗಳನ್ನು ಮಾಡಿದ ಅವಧಿಯಲ್ಲಿ ಖರ್ಚು ಎಂಬುದಾಗಿ ಮಾನ್ಯ ಮಾಡಲಾಗಿದೆ ಮತ್ತು ಲಾಭ ಮತ್ತು ನಷ್ಟದ ಹೇಳಿಕೆಗೆ ಅದನ್ನು ಸೇರಿಸಲಾಗಿದೆ.

### ಎಚ್.ಗುತ್ತಿಗೆಗಳು :

i) **ಕಂಪನಿಯು ಗುತ್ತಿಗೆ ನೀಡಿಕೆದಾರರಾಗಿದ್ದಲ್ಲಿ:**

ಗುತ್ತಿಗೆಗೆ ನೀಡಿರುವ ಬಾಬ್ತುಗಳ ಮಾಲೀಕತ್ವದ ಎಲ್ಲಾ ಹೊಣೆಗಾರಿಕೆಗಳು ಮತ್ತು ಅನುಕೂಲಗಳನ್ನು ಗಣನೀಯವಾಗಿ ಕಂಪನಿಯು ಪರಿಣಾಮಕಾರಿಯಾಗಿ ಉಳಿಸಿಕೊಂಡಿದ್ದ ಸಂದರ್ಭಗಳಲ್ಲಿ ಆ ಗುತ್ತಿಗೆಗಳನ್ನು ಕಾರ್ಯಾಚರಣೆಯ ಗುತ್ತಿಗೆ ಎಂಬುದಾಗಿ ವರ್ಗೀಕರಿಸಲಾಗಿದೆ.

ಕಾರ್ಯಾಚರಣೆ ಗುತ್ತಿಗೆಯ ಅನ್ವಯ ಗುತ್ತಿಗೆ ನೀಡಿರುವ ಆಸ್ತಿಗಳನ್ನು ಬಂಡವಾಳೀಕರಿಸಿದೆ. ಬಾಡಿಗೆ ಆದಾಯವನ್ನು ಗುತ್ತಿಗೆಯ ಅವಧಿಯಲ್ಲಿ ಸಂಚಯನ ಆಧಾರದಲ್ಲಿ ಮಾನ್ಯ ಮಾಡಲಾಗಿದೆ.

ii) **ಕಂಪನಿಯು ಗುತ್ತಿಗೆ ಪಡೆದಿರುವುದಾಗಿದ್ದಲ್ಲಿ :**

ಗುತ್ತಿಗೆಗೆ ನೀಡಿರುವ ಬಾಬ್ತುಗಳ ಮಾಲೀಕತ್ವಕ್ಕೆ ಸಂಬಂಧಿಸಿದ ಎಲ್ಲಾ ಹೊಣೆಗಾರಿಕೆಗಳು ಮತ್ತು ಅನುಕೂಲಗಳನ್ನು ಕಂಪನಿಗೆ ಗಣನೀಯವಾಗಿ ವರ್ಗಾಯಿಸಿರುವ ಸಂದರ್ಭದಲ್ಲಿ ಹಣಕಾಸಿನ ಗುತ್ತಿಗೆಗಳನ್ನು ನ್ಯಾಯಯುತ ಮೌಲ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮತ್ತು ಗುತ್ತಿಗೆ ಅವಧಿಯ ಪ್ರಾರಂಭದಲ್ಲಿ ಕನಿಷ್ಠ ಗುತ್ತಿಗೆ ಪಾವತಿಯ ಪ್ರಸಕ್ತದ ಮೌಲ್ಯದಲ್ಲಿ ಬಂಡವಾಳೀಕರಿಸಿದೆ ಮತ್ತು ಗುತ್ತಿಗೆಗೆ ಪಡೆದ ಆಸ್ತಿ ಎಂಬುದಾಗಿ ತಿಳಿಸಲಾಗಿದೆ.

ಗುತ್ತಿಗೆ ಅವಧಿಯ ಕೊನೆಯ ವೇಳೆಗೆ ಕಂಪನಿಯು ಸ್ವತ್ತಿನ ಮಾಲೀಕತ್ವ ಪಡೆಯುವ ಬಗ್ಗೆ ಸೂಕ್ತವಾದ ಖಾತರಿಯಿರದಿದ್ದ ಪಕ್ಷದಲ್ಲಿ, ಬಂಡವಾಳೀಕರಿಸಿದ ಗುತ್ತಿಗೆಯ ಆಸ್ತಿಗಳನ್ನು ಆಸ್ತಿಯ ಅಂದಾಜು ಮಾಡಿದ ಉಪಯುಕ್ತತೆ ಅವಧಿ ಅಥವಾ ಗುತ್ತಿಗೆ ಅವಧಿ ಇವುಗಳಲ್ಲಿ ಯಾವುದು ಕಡಿಮೆಯಿರುವುದೋ ಆ ಅವಧಿ ಯಲ್ಲಿ ಸವಕಳಿ ಲೆಕ್ಕ ಹಾಕಲಾಗಿದೆ.

ಗುತ್ತಿಗೆ ಅವಧಿಯಲ್ಲಿ ಆಸ್ತಿಯ ಮಾಲೀಕತ್ವದ ಎಲ್ಲಾ ಹೊಣೆಗಾರಿಕೆಗಳು ಮತ್ತು ಅನುಕೂಲಗಳನ್ನು ಗುತ್ತಿಗೆ ನೀಡಿಕೆದಾರನು ಸಮಗ್ರವಾಗಿ ಹಾಗೂ ಪರಿಣಾಮಕಾರಿಯಾಗಿ ತನ್ನಲ್ಲೇ ಉಳಿಸಿಕೊಂಡಿರುವ ಸಂದರ್ಭದಲ್ಲಿ ಅಂತಹ ಗುತ್ತಿಗೆಗಳನ್ನು ಕಾರ್ಯಾಚರಣೆ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಕಾರ್ಯಾಚರಣೆ ಗುತ್ತಿಗೆ ಪಾವತಿಗಳನ್ನು ಗುತ್ತಿಗೆಯ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಲಾಭ ಮತ್ತು ನಷ್ಟದ ಲೆಕ್ಕದಲ್ಲಿನ ಖರ್ಚು ಎಂಬುದಾಗಿ ಗುರುತಿಸಲಾಗಿದೆ.

### ಐ. ವಿದೇಶಿ ಕರೆನ್ಸಿ ವ್ಯವಹಾರ :

ವಿದೇಶಿ ಕರೆನ್ಸಿಯಲ್ಲಿನ ವ್ಯವಹಾರವನ್ನು ಆ ವ್ಯವಹಾರ ನಡೆದ ದಿನಾಂಕದಂದು ಜಾರಿಯಲ್ಲಿದ್ದ ವಿನಿಮಯ ದರದಲ್ಲಿ ದಾಖಲಿಸಲಾಗಿದೆ.

## ಲೆಕ್ಕಪತ್ರಗಳ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದುದು)

ವರ್ಷಾಂತ್ಯದಲ್ಲಿ ಇತ್ಯರ್ಥವಾಗದೆ ಉಳಿದಿರುವ ವಿದೇಶಿ ಕರೆನ್ಸಿ ವ್ಯವಹಾರಗಳಿಗೆ ಸಂಬಂಧಿಸಿದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಅವು ಮೊದಲೇ ಒಪ್ಪಂದ ಆಗಿದ್ದ ವಿದೇಶಿ ವಿನಿಮಯ ಗುತ್ತಿಗೆಯಡಿ ಒಳಪಟ್ಟ ಸಂದರ್ಭದಲ್ಲಿ ಒಪ್ಪಂದವಾದ ದರಗಳಲ್ಲಿ ತಿಳಿಸಿದೆ ಮತ್ತು ಇತರೆ ಸಂದರ್ಭಗಳಲ್ಲಿ ವರ್ಷಾಂತ್ಯದ ದರದಲ್ಲಿ ತಿಳಿಸಿದೆ. ವರ್ಷದ ಅವಧಿಯಲ್ಲಿ ನಡೆದ ವಿದೇಶಿ ಕರೆನ್ಸಿ ವ್ಯವಹಾರದ ಇತ್ಯರ್ಥದ ಸಮಯದಲ್ಲಿನ ವಿನಿಮಯ ವ್ಯತ್ಯಾಸಗಳನ್ನು ಆದಾಯ ಅಥವಾ ಖರ್ಚು ಎಂಬುದಾಗಿ ಪರಿಗಣಿಸಿದೆ ಮತ್ತು ಲಾಭ ಮತ್ತು ನಷ್ಟದ ಖಾತೆಗೆ ಹೊಂದಾಣಿಕೆ ಮಾಡಿದೆ.

### ಜೆ) ಸರಕುಗಳು:

ಸರಕುಗಳ ಬಗ್ಗೆ ಈ ಕೆಳಕಂಡತೆ ಮೌಲ್ಯ ಮಾಡಲಾಗಿದೆ:

ಕಚ್ಚಾ ಸಾಮಗ್ರಿಗಳು, ರವಾನೆ ಸರಕು, ವ್ಯಾಪಾರ ಪದಾರ್ಥಗಳು ಮತ್ತು ಸಿದ್ಧಪಡಿಸಿದ ಸರಕುಗಳನ್ನು ಅವುಗಳ ಬೆಲೆ ಅಥವಾ ಪಡೆಯುವ ನಿವ್ವಳ ಮೌಲ್ಯ ಇವುಗಳಲ್ಲಿ ಯಾವುದು ಕಡಿಮೆಯೋ ಅದರಂತೆ ಬೆಲೆ ಕಟ್ಟಲಾಗಿದೆ. ಕಾಗದದ ವಿಭಾಗದ ವಿಚಾರದಲ್ಲಿ ಬೆಲೆಯನ್ನು ತೂಕದ ಸರಾಸರಿ ಆಧಾರದಲ್ಲಿ ನಿರ್ಧರಣೆ ಮಾಡಲಾಗಿದೆ ಮತ್ತು ಪಾನೀಯಗಳ ವಿಭಾಗ/ಫಾರ್ಮ ವಿಭಾಗದ ವಿಚಾರದಲ್ಲಿ ಮೊದಲ ಆಗಮನ ಮೊದಲು ನಿರ್ಗಮನ (ಎಫ್‌ಐಎಫ್‌ಒ) ಆಧಾರದ ಮೇಲೆ ಬೆಲೆ ನಿರ್ಧಣೆ ಮಾಡಿದೆ. ಉಪ ಉತ್ಪನ್ನಗಳು ಮತ್ತು ಹಾನಿಗೊಳಗಾದ ದಾಸ್ತಾನುಗಳಿಗೆ ತೂಕ ಮಾಡಿದ ಸರಾಸರಿ ಬೆಲೆ ಅಥವಾ ಅಂದಾಜು ಮಾಡಲಾದ ಪಡೆಯಬಹುದಾದ ಮೌಲ್ಯ ಇದರಲ್ಲಿ ಯಾವುದು ಕಡಿಮೆಯೋ ಅದರಂತೆ ಬೆಲೆ ಕಟ್ಟಲಾಗಿದೆ. ಪರಿವರ್ತಕರುಗಳಿಗೆ ನೀಡಿದ ಕಚ್ಚಾ ಸಾಮಗ್ರಿಗಳು ಮತ್ತು ಬಳಕೆ ವಸ್ತುಗಳನ್ನು ಅವರಿಂದ ನೋಟ್ ಪುಸ್ತಕಗಳನ್ನು ಪಡೆದ ಸಮಯದಲ್ಲಿ ಸಿದ್ಧಪಡಿಸಿದ ಸರಕುಗಳೆಂದು ಮಾತ್ರ ಪರಿಗಣಿಸಲಾಗಿದೆ. ಮದ್ಯದ ದಾಸ್ತಾನಿನ ಮೌಲ್ಯ ನಿರ್ಣಯಕ್ಕೆ ಅವುಗಳನ್ನು ತರಿಸಿಕೊಳ್ಳುವಲ್ಲಿ ತಗುಲಿದ ಸಾಗಾಣೆ ವೆಚ್ಚವನ್ನು ಪರಿಗಣಿಸಿರುವುದಿಲ್ಲ.

### ಕೆ) ಹೂಡಿಕೆಗಳು:

ಎ. ಚಾಲ್ತಿ ಹೂಡಿಕೆಗಳನ್ನು ಅವುಗಳ ಮೌಲ್ಯ ಅಥವಾ ಪ್ರತಿಯೊಂದರ ಹೂಡಿಕೆ ಆಧಾರದ ಮೇಲಿನ ನ್ಯಾಯಯುತ ಮೌಲ್ಯ ಇದರಲ್ಲಿ ಯಾವುದು ಕಡಿಮೆಯೋ ಅದರಂತೆ ಮೌಲ್ಯ ಮಾಡಿ ಗಣನೆಗೆ ತೆಗೆದುಕೊಳ್ಳಲಾಗಿದೆ. ದೀರ್ಘಾವಧಿ ಹೂಡಿಕೆಗಳನ್ನು ಅವುಗಳ ಮೌಲ್ಯದಂತೆ ಪರಿಗಣಿಸಲಾಗಿದೆ. ಪ್ರತಿ ಹೂಡಿಕೆ ಆಧಾರದ ಮೇಲೆ ಅದರ ಮೌಲ್ಯದಲ್ಲಿ ಯಾವುದೇ ಖಾಯಂ ಕ್ಷೀಣತೆ ಇದ್ದಲ್ಲಿ ಅದರಂತೆ ಅದನ್ನು ದಾಖಲಿಸಿದೆ. ಅಂತಹ ಕಾಯಂ ಆದ ಕ್ಷೀಣತೆ ಯಾವುದಾದರೂ ಇದ್ದರೆ ಅದನ್ನು ಅದರ ಮಾರುಕಟ್ಟೆ ಮೌಲ್ಯವನ್ನು ಅವಲೋಕಿಸಿ ತಿಳಿದುಕೊಳ್ಳಲಾಗಿದೆ.

### ಬಿ. ವಿಪರ್ಾಡಿನ ಉದ್ದೇಶಕ್ಕಾಗಿ:-

i) ಚಾಲ್ತಿ ಕೊಟೇಶನ್ ಲಭ್ಯವಿರುವ ಈಕ್ವಿಟಿ ಷೇರುಗಳ ಸಂಬಂಧದಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿನ ವ್ಯಾಪಾರ ಸಂಸ್ಥೆಗಳು/ಬಂದರುಗಳಲ್ಲಿ ದೊರೆಯುವಂತೆ ವರ್ಷಾಂತ್ಯದಲ್ಲಿನ ದಾಖಲೆಯ ಮಾರುಕಟ್ಟೆ ದರದ ಆಧಾರದ ಮೇಲೆ ಮಾಡಲಾದ ಮಾರುಕಟ್ಟೆ ಮೌಲ್ಯದ ಅನುಸಾರ ಮೌಲ್ಯಮಾಪನ ಮಾಡಲಾಗಿದೆ.

ii) ಸ್ಟಾಕ್ ಎಕ್ಸ್‌ಚೇಂಜ್‌ನಿಂದ ಚಾಲ್ತಿ ಕೊಟೇಶನ್‌ಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಅಥವಾ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಕೋಟ್ ಮಾಡದಿರುವ ಷೇರುಗಳ ವಿಚಾರದಲ್ಲಿ ಇತ್ತೀಚಿನ ದೊರೆಯತಕ್ಕ ಸ್ಥಿತಿ ವಿವರಣಾ ಪಟ್ಟಿಯ ಅನುಸಾರ ವಿಭಜನಾ ಮೌಲ್ಯದಲ್ಲಿ ಈ ಷೇರುಗಳ ಮೌಲ್ಯ ನಿರ್ಣಯ ಮಾಡಲಾಗಿದೆ.

### ಎಲ್. ನೌಕರರ ಸೌಲಭ್ಯಗಳು :

### ಎ) ಅಲ್ಪಾವಧಿ ನೌಕರರ ಸೌಲಭ್ಯಗಳು:

ಸೇವೆ ಸಲ್ಲಿಕೆಯ ಹನ್ನೆರಡು ತಿಂಗಳುಗಳ ಒಳಗೆ ಸಂಪೂರ್ಣವಾಗಿ ಪಾವತಿ ಮಾಡಬೇಕಾದ ಎಲ್ಲಾ ನೌಕರರ ಸೌಲಭ್ಯಗಳನ್ನು ಅಲ್ಪಾವಧಿ ನೌಕರರ ಸೌಲಭ್ಯಗಳೆಂದು ವರ್ಗೀಕರಿಸಲಾಗಿದೆ. ಸಂಬಳಗಳು, ವೇತನಗಳು, ಅಂದಾಜು ಮಾಡಲಾದ ಬೋನಸ್, ಎಕ್ಸ್‌ಗ್ರೇಷಿಯಾ ಮತ್ತು ಅಲ್ಪಾವಧಿ ಪರಿಹಾರಿತ ಗೈರು ಹಾಜರಿಗಳಂತಹ ಸೌಲಭ್ಯಗಳನ್ನು ನೌಕರರು ಸಂಬಂಧಿಸಿದ ಸೇವೆ ಸಲ್ಲಿಸಿದ ಅವಧಿಯಲ್ಲಿ ಮಾನ್ಯ ಮಾಡಿದೆ.

### ಬಿ ನಿರೂಪಿತ ಸೌಲಭ್ಯ ಯೋಜನೆ:

i. **ಗ್ರಾಚ್ಯುಯಿಟಿ:**

ಗ್ರಾಚುಯಿಟಿಯ ಹೊಣೆಗಾರಿಕೆಯು ನಿರೂಪಿತ ಸೌಲಭ್ಯ ಯೋಜನೆಯಾಗಿದೆ. ಇದನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ವಿಮಾಗಣನ ಮೌಲ್ಯ ಮಾಪನದ ಮೂಲಕ ನಿರ್ಧರಿಸಲಾಗುವುದು. ವಿಮಾಗಣನ ಆದಾಯ/ನಷ್ಟವನ್ನು ಲಾಭ ಮತ್ತು ನಷ್ಟದ ವಿವರಣೆಗೆ ವಿಧಿಸಲ್ಪಟ್ಟಿದೆ. ಎಲ್‌ಐಸಿಯಿಂದ ನಿರ್ವಹಿಸಲ್ಪಡುತ್ತಿರುವ ಎಂಎಸ್‌ಐಎಲ್ ನೌಕರರ ಗ್ರಾಚ್ಯುಯಿಟಿ ಫಂಡ್ ಟ್ರಸ್ಟ್‌ಗೆ ಕಂಪನಿಯು ವಂತಿಕೆ ನೀಡುತ್ತಿದೆ.

ii. **ಪರಿಹಾರಾರ್ಥ ಗೈರು ಹಾಜರಿ :**

ರಜೆ ಹಕ್ಕಿನ ಸೌಲಭ್ಯಗಳ ಬಗ್ಗೆ ಕಂಪನಿಯ ಹೊಣೆಗಾರಿಕೆಯನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ವಿಮಾ ಗಣನ ಮೌಲ್ಯದ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ. ವಿಮಾಗಣನ ನಷ್ಟ/ಲಾಭವನ್ನು ಲಾಭ ಮತ್ತು ನಷ್ಟದ ವಿವರಗಳಿಗೆ ವಿಧಿಸಲಾಗಿದೆ.

iii. **ಮರಣ ಪರಿಹಾರ ನಿಧಿ :**

ಮರಣ ಪರಿಹಾರ ನಿಧಿಯ ಬಗ್ಗೆ ಕಂಪನಿಯ ಹೊಣೆಗಾರಿಕೆಯನ್ನು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ವಿಮಾಗಣನ

ಮೌಲ್ಯಮಾಪನದ ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ. ಮೌಲ್ಯಮಾಪನದ ನಿರ್ಧರಣೆಯನ್ನು ಕಂಪನಿಯ ನೀತಿ ಅನುಸಾರ ಮಾಡಲಾಗಿದೆ.

### ಕೆ. ನಿರೂಪಿತ ವಂತಿಕೆ ಯೋಜನೆ:

ಕಂಪನಿಯ ನಿರೂಪಿತ ವಂತಿಕೆ ಯೋಜನೆಗಳು ನೌಕರರ ಭವಿಷ್ಯನಿಧಿ (ನೌಕರರ ಭವಿಷ್ಯನಿಧಿ ಮತ್ತು ಸಾದಿಲ್ವಾರು ಉಪಬಂಧಗಳ ಕಾಯ್ದೆ, 1952ರ ಉಪಬಂಧಗಳ ಅನ್ವಯ) ಮತ್ತು ಇಎಸ್ಐ (ನೌಕರರ ರಾಜ್ಯ ವಿಮಾ ಕಾಯ್ದೆ, 1948ರ ಉಪಬಂಧಗಳ ಅನ್ವಯ) ಈ ಸಂಬಂಧ ಕಂಪನಿಯು ತನ್ನ ವಂತಿಕೆಗಳನ್ನು ಪಾವತಿ ಮಾಡುವುದು ಹೊರತಾಗಿ ಯಾವುದೇ ಹೆಚ್ಚಿನ ಹೊಣೆಗಾರಿಕೆ ಹೊಂದಿರುವುದಿಲ್ಲ. ಭವಿಷ್ಯನಿಧಿ ಮತ್ತು ಇಎಸ್ಐಗೆ ನಿಗದಿಪಡಿಸಿದ ದರಗಳಲ್ಲಿ ಕಂಪನಿಯ ಕೊಡುಗೆ ನೀಡಲಾಗಿದೆ ಮತ್ತು ಇದನ್ನು ಲಾಭ ಅಥವಾ ನಷ್ಟದ ವಿವರಗಳಿಗೆ ಸೇರಿಸಿದೆ.

### ಎಂ. ಸರ್ಕಾರದ ಅನುದಾನಗಳು :

ಸವಕಳಿಯಾಗುವ ಆಸ್ತಿಗಳ ಸಂಬಂಧ, ಅವುಗಳ ಪುಸ್ತಕದ ಮೌಲ್ಯ ನಿರ್ಧರಣೆ ಮಾಡುವಾಗ ಸಂಬಂಧಪಟ್ಟ ಆಸ್ತಿಗಳ ಒಟ್ಟು ಮೌಲ್ಯದಿಂದ ಕಡಿತವಾಗಿ ಸರ್ಕಾರದ ಅನುದಾನವನ್ನು ತೋರಿಸಲಾಗಿದೆ. ನಿರ್ದಿಷ್ಟವಾದ ಸ್ಥಿರಾಸ್ತಿಗೆ ಸಂಬಂಧಿಸಿದ ಅನುದಾನವು ಆಸ್ತಿಯ ಪೂರ್ಣವಾದ ಅಥವಾ ವಾಸ್ತವವಾಗಿ ಪೂರ್ಣವಾದ ಬೆಲೆಗೆ ಸಮಾನವಾಗಿರುವ ಸಂದರ್ಭದಲ್ಲಿ ಆ ಸ್ವತ್ತನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಸಾಧಾರಣ ಮೌಲ್ಯದಲ್ಲಿ ತೋರಿಸಲಾಗಿದೆ. ಅನುಪಯುಕ್ತ ಎಂಬುದಾಗಿ ಪರಿಗಣಿಸಲು ಗುರುತಿಸಿರುವ ಆಸ್ತಿಗಳ ವಿಚಾರದಲ್ಲಿ ಅನುಪಯುಕ್ತ ಆಸ್ತಿಯ ಮಾರಾಟದ ಸಮಯದಲ್ಲಿ ಸಂಪೂರ್ಣವಾಗಿ ಸವಕಳಿಯನ್ನು ಕಳೆಯಲಾಗಿದೆ.

### ಎನ್.ಸಹಭಾಗಿತ್ವದ ಸಂಸ್ಥೆಯಲ್ಲಿ ಬಡ್ಡಿಯ ಲೆಕ್ಕಾಚಾರ:

ಕಂಪನಿಯ ಆದಾಯ, ಸಾಮಾನ್ಯವಾದ ಖರ್ಚುಗಳು, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪಾಲನ್ನು ಅನುಕ್ರಮವಾಗಿ ಆದಾಯ, ಖರ್ಚುಗಳು, ಆಸ್ತಿಗಳು ಮತ್ತು ಹೊಣೆಗಾರಿಕೆಗಳಲ್ಲಿ ಸೇರಿಸಲಾಗಿದೆ.

### ಒ. ಆದಾಯದ ಮೇಲಿನ ತೆರಿಗೆ :

ಆದಾಯ ತೆರಿಗೆ ಕಾಯ್ದೆ, 1961ರ ಉಪಬಂಧಗಳ ಅನುಸಾರ ಚಾಲ್ತಿ ತೆರಿಗೆಗೆ ವ್ಯವಸ್ಥೆ ಮಾಡಲಾಗಿದೆ. ಮುಂದೂಡಿದ ತೆರಿಗೆ ಖರ್ಚು ಅಥವಾ ಲಾಭವನ್ನು ಒಂದು ಅವಧಿಯಲ್ಲಿ ಗೋಚರವಾದ ಮತ್ತು ಮುಂದಿನ ಒಂದು ಅಥವಾ ಹೆಚ್ಚು ಅವಧಿಗಳಲ್ಲಿ ವ್ಯತಿರಿಕ್ತವಾಗಬಹುದಾದ ತೆರಿಗೆ ವಿಧಿಸಬಹುದಾದ ಆದಾಯ ಮತ್ತು ಲೆಕ್ಕಾಚಾರ ಮಾಡಿದ ಆದಾಯದ ನಡುವಿನ ವ್ಯತ್ಯಾಸವನ್ನು ಸಮಯದ ವ್ಯತ್ಯಾಸದ ಮೇಲೆ ಮಾನ್ಯ ಮಾಡಿದೆ. ಮುಂದೂಡಿದ ತೆರಿಗೆ ಆಸ್ತಿಗಳ ಮತ್ತು ಹೊಣೆಗಾರಿಕೆಗಳನ್ನು ತೆರಿಗೆ ದರ ಮತ್ತು ಜಾರಿಗೊಳಿಸಿರುವ ಅಥವಾ ಸ್ಥಿತಿ ವಿವರಣಾ ಪಟ್ಟಿ ದಿನಾಂಕದ ವೇಳೆಗೆ ಸಮಗ್ರವಾಗಿ ಜಾರಿಗೊಳಿಸಿರುವ ತೆರಿಗೆ ಕಾನೂನುಗಳನ್ನು ಉಪಯೋಗಿಸಿ ಲೆಕ್ಕ ಹಾಕಲಾಗಿದೆ.

ಮುಂದೂಡಿದ ತೆರಿಗೆ ಆಸ್ತಿಗಳ ವಾಹಕ ಮೊತ್ತವನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಲ್ಲಿ ಪರಾಮರ್ಶಿಸಲಾಗಿದೆ. ಕಂಪನಿಯು ಮುಂದೂಡಿದ ತೆರಿಗೆ ಆಸ್ತಿಯ ವಾಹಕ ಮೊತ್ತವನ್ನು ಅದು ಸಕಾರಣವಾಗಿ ಅಥವಾ ಸಾಧಾರಣವಾಗಿ ಖಚಿತವಾಗದಿರುವ ಮಟ್ಟಕ್ಕೆ ಅದನ್ನು ದಾಖಲಿಸುತ್ತದೆ. ಮುಂದೂಡಿದ ತೆರಿಗೆ ಆಸ್ತಿಯ ಸಂಬಂಧ ಸಾಕಷ್ಟು ಪ್ರಮಾಣದ ಮುಂದಿನ ತೆರಿಗೆ ವಿಧಿಸಬಹುದಾದ ಆದಾಯ ಲಭ್ಯವಾಗುವವರೆಗೆ ಮತ್ತು ಮುಂದೂಡಿದ ತೆರಿಗೆ ಪಾವತಿಸಲು ಸಾಧ್ಯವಾಗುವ ತನಕ ಹಾಗೆಯೇ ಮುಂದುವರಿಸಲಾಗಿದೆ. ಮುಂದೆ ತೆರಿಗೆ ವಿಧಿಸಬಹುದಾದ ಆದಾಯ ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಕ್ಕೆ ಒಳಪಟ್ಟು ಅಂತಹ ಯಾವುದೇ ದಾಖಲಿಸಿರುವಿಕೆಯನ್ನು ಅದು ಸಕಾರಣವಾಗಿ ಖಂಡಿತವಾಗಿರುವಿಕೆ ಅಥವಾ ವಾಸ್ತವಿಕ ಖಂಡಿತವಾಗಿರುವ ಪ್ರಮಾಣದವರೆಗೆ ಪರಿವರ್ತಿಸಲಾಗಿದೆ.

### ಪಿ. ಷೇರು ಒಂದರ ಗಳಿಕೆ:

ಸದರಿ ವರ್ಷದಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಗಣನೆ ಮಾಡಿದ ಸರಾಸರಿ ಸಂಖ್ಯೆಯನ್ನು ಈಕ್ವಿಟಿ ಷೇರುದಾರರಿಗೆ ಸೇರಿದ ಅವಧಿಗೆ (ಆದ್ಯತೆ ಲಾಭಾಂಶ ಮತ್ತು ಯಾವುದೇ ಸೇರಿದ ತೆರಿಗೆಗಳನ್ನು ಮುರಿದುಕೊಂಡ ನಂತರ) ನಿವ್ವಳ ಲಾಭ ಅಥವಾ ನಷ್ಟವನ್ನು ವಿಭಾಗಿಸುವ ಮೂಲಕ ಷೇರು ಒಂದರ ಮೂಲ ಗಳಿಕೆಯನ್ನು ಲೆಕ್ಕ ಹಾಕಲಾಗಿದೆ. ಭಾಗಶಃ ಪಾವತಿಯಾಗಿರುವ ಈಕ್ವಿಟಿ ಷೇರುಗಳನ್ನು (ಯಾವುದೇ ಇದ್ದಲ್ಲಿ) ವರದಿಯ ಅವಧಿಯಲ್ಲಿ ಪೂರ್ಣ ಪಾವತಿಯಾದ ಈಕ್ವಿಟಿ ಷೇರುಗಳಿಗೆ ಸಂಬಂಧಿಸಿದ ಲಾಭಾಂಶಗಳಲ್ಲಿ ಪಾಲ್ಗೊಳ್ಳಲು ಅರ್ಹವಾಗಿರುವ ಪ್ರಮಾಣದವರೆಗೆ ಈಕ್ವಿಟಿ ಷೇರಿನ ಭಾಗವನ್ನಾಗಿ ಪರಿಗಣಿಸಿದೆ. ಸದರಿ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಗಣನೆ ಮಾಡಿದ ಸರಾಸರಿ ಸಂಖ್ಯೆಯನ್ನು ಹಾಲಿಯಿರುವ ಷೇರುದಾರರಿಗೆ ಬೋನಸ್ ನೀಡಿಕೆಗಾಗಿ, ಹಕ್ಕು ನೀಡಿಕೆಯ ಬೋನಸ್ ಅಂಶವಾಗಿ; ಷೇರುಗಳ ವಿಭಜನೆ ಮತ್ತು ಯಾವುದೇ ಇದ್ದಲ್ಲಿ ಷೇರುಗಳ ಸಂಯೋಜನೆಗೆ ಹೊಂದಾಣಿಕೆ ಮಾಡಲಾಗಿದೆ.

ಪ್ರತಿಯೊಂದು ಷೇರು ಗಳಿಕೆ ಪ್ರಮಾಣ ಕುಗ್ಗಿರುವಿಕೆಯನ್ನು ಲೆಕ್ಕಾಚಾರ ಮಾಡಲು ಅವಧಿಯಲ್ಲಿ ಈಕ್ವಿಟಿ ಷೇರುದಾರರಿಗೆ ಆಗಿರುವ ನಿವ್ವಳ ಲಾಭ ಅಥವಾ ನಿವ್ವಳ ನಷ್ಟವನ್ನು ಮತ್ತು ಆ ಅವಧಿಯಲ್ಲಿ ಬಾಕಿ ಉಳಿದಿರುವ ಸರಾಸರಿ ಷೇರುಗಳ ಹೊಂದಾಣಿಕೆಯನ್ನು ಗಣನೆಗೆ ತೆಗೆದುಕೊಂಡಿದೆ.

### ಕ್ಯೂ. ಆಸ್ತಿಗಳ ಕುಗ್ಗುವಿಕೆ :

ಪ್ರತಿಯೊಂದು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು, ಆಸ್ತಿಗಳ ವಾಹಕ ಮೊಬಲಗನ್ನು ಆಸ್ತಿಗಳ ಮೌಲ್ಯದಲ್ಲಿನ ಸಂಭವನೀಯ ಕುಗ್ಗುವಿಕೆಯ ನಷ್ಟದ ಯಾವುದೇ ಸೂಚನೆ ಇರುವುದೇ ಎಂಬುದನ್ನು ತಿಳಿಯಲು

ಮಾಪನ ಮಾಡಲಾಗಿದೆ. ಆಸ್ತಿಗಳ ವಾಹಕ ಮೊಬಲಗು ಅದರ ವಸೂಲಾಗಬಹುದಾದ ಮೌಲ್ಯವನ್ನು ಮೀರಿದಾಗ ಕುಗ್ಗುವಿಕೆಯ ನಷ್ಟವನ್ನು ಗುರುತಿಸಲಾಗಿದೆ. ಲಾಭ ಮತ್ತು ನಷ್ಟದ ಲೆಕ್ಕಪತ್ರದಲ್ಲಿ ಈ ಆಸ್ತಿ ಕುಗ್ಗುವಿಕೆ ನಷ್ಟವನ್ನು ಹಿಮ್ಮುಖ ಮಾಡಿದಾಗ ಅದನ್ನು ತಕ್ಷಣ ಆದಾಯವೆಂದು ಗುರುತಿಸಲಾಗಿದೆ. ಹಾನಿಗೊಂಡ ಕುಗ್ಗಿದ ಆಸ್ತಿಯ ಸವಕಳಿಯನ್ನು ವಾಹಕ ಮೊತ್ತದಲ್ಲಿ ಇನ್ನೂ ಉಪಯೋಗವಾಗುವ ಹಾಗಿದ್ದರೆ ಮಾತ್ರ ನೀಡಲಾಗುತ್ತದೆ.

## ಆರ್.ಮುನ್ನೇರ್ಪಾಡುಗಳು/ಸಂಭಾವ್ಯತೆಗಳು :

ಹಿಂದಿನ ಘಟನಾವಳಿಗಳ ಕಾರಣದಿಂದ ಉಂಟಾಗಿರುವ ಪ್ರಸಕ್ತದ ಹೊಣೆಗಾರಿಕೆಯನ್ನು ಸಂಸ್ಥೆಯೊಂದು ಹೊಂದಿದ್ದಲ್ಲಿ ಆಗ ಮುನ್ನೇರ್ಪಾಡುಗಳನ್ನು ಮಾನ್ಯ ಮಾಡಿದೆ. ಹೊಣೆಗಾರಿಕೆಗಳನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ಹೊರಹರಿಯುವಿಕೆ ಅಗತ್ಯವಾಗಿರುತ್ತದೆ. ಈ ಸಂಬಂಧದಲ್ಲಿ ವಿಶ್ವಾಸನೀಯ ಅಂದಾಜು ಮಾಡಬಹುದು. ಎಎಸ್ 29ರ ಅನ್ವಯ ಮಾಡಿರುವ ಏರ್ಪಾಡುಗಳನ್ನು ಪ್ರಸಕ್ತ ಮೌಲ್ಯಕ್ಕೆ ಕಡಿಮೆ ಮಾಡಿರುವುದಿಲ್ಲ ಮತ್ತು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಇದ್ದ ಹೊಣೆಗಾರಿಕೆ ಇತ್ಯರ್ಥಪಡಿಸಲು ಅಗತ್ಯವಾದ ಉತ್ತಮ ಅಂದಾಜಿನ ಮೇಲೆ ನಿರ್ಧರಣೆ ಮಾಡಲಾಗಿದೆ. ಇವುಗಳನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಪುನರ್ ಪರಿಶೀಲನೆ ಮಾಡಿ ಚಾಲ್ತಿಯ ಅತ್ಯುತ್ತಮ ಅಂದಾಜುಗಳನ್ನು ಪಡೆಯಲು ಹೊಂದಾಣಿಕೆ ಮಾಡಲಾಗಿದೆ.

ಸಂಪನ್ಮೂಲಗಳ ಹೊರಹರಿವಿನ ಸಾಧ್ಯತೆಯಿರುವ, ಆದರೆ ಹಾಗೆ ಆಗದಿರುವ ಸಾಧ್ಯತೆಯ ಹೊಣೆಗಾರಿಕೆ ಅಥವಾ ಪ್ರಸಕ್ತದ ಹೊಣೆಗಾರಿಕೆ ಇದ್ದ ಪಕ್ಷದಲ್ಲಿ ಅವುಗಳ ಬಗ್ಗೆ ಸಂಭಾವ್ಯ ಹೊಣೆಗಾರಿಕೆ ರೂಪದಲ್ಲಿ ಮಾಹಿತಿ ನೀಡಲಾಗಿದೆ. ಸಂಭಾವ್ಯ ಸ್ವತ್ತುಗಳನ್ನು ಹಣಕಾಸಿನ ಹೇಳಿಕೆಯಲ್ಲಿ ಮಾನ್ಯ ಮಾಡಿರುವುದಿಲ್ಲ.

## ಎಸ್. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಸಿದ್ಧಪಡಿಸುವಿಕೆ :

ಕಂಪನಿಗಳ (ಲೆಕ್ಕಪತ್ರಗಳು) ತಿದ್ದುಪಡಿ ನಿಯಮಗಳು, 2014ರ ದ್ವಿತೀಯ ಉಪಬಂಧದ ನಿಯಮ 6 ಓದಿಕೊಂಡಂತೆ ಪ್ರಕರಣ 129(3)ರ ಅನ್ವಯ 31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ಹಣಕಾಸಿನ ವರ್ಷಕ್ಕೆ ಕ್ರೋಡೀಕೃತ ಹಣಕಾಸಿನ ಹೇಳಿಕೆ ಸಿದ್ಧಪಡಿಸಲು ಕಂಪನಿಯು ವಿನಾಯ್ತಿ ಪಡೆದಿದೆ. ಈ ವಿನಾಯ್ತಿ ಪ್ರಯುಕ್ತ ಕಂಪನಿಯು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಿರುವುದಿಲ್ಲ.

## ಸ್ಥಿತಿ ವಿವರಣಾ ಪಟ್ಟಿಯ ಭಾಗವಾಗಿರುವ ಟಿಪ್ಪಣಿಗಳು

(ರೂ.ಗಳಲ್ಲಿ)

### 3. ಷೇರು ಬಂಡವಾಳ

| | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ಅಧಿಕೃತ ಷೇರು ಬಂಡವಾಳ:<br>ತಲಾ ರೂ.100/-ರ 7500000 ಈಕ್ವಿಟಿ ಷೇರುಗಳು (75,00,000) | 750,000,000 | 750,000,000 |
| ವಿತರಿಸಿದ, ಚಂದಾದಾರಿಕೆಯಾದ ಮತ್ತು ಪಾವತಿಸಿದ ಷೇರು ಬಂಡವಾಳ:<br>ತಲಾ ರೂ.100/-ರ ಮೌಲ್ಯದ 20,17,660 (20,17,660) ಈಕ್ವಿಟಿ ಷೇರುಗಳು, ಇವುಗಳಲ್ಲಿ ತಲಾ ರೂ.100/-ರ ಮೌಲ್ಯದ 24,000 (24,000) ಈಕ್ವಿಟಿ ಷೇರುಗಳನ್ನು ಸಾಮಾನ್ಯ ಮೀಸಲಿನ ಬಂಡವಾಳೀಕರಣದಿಂದಾದ ಸಂಪೂರ್ಣ ಪಾವತಿಸಿದ ಬೋನಸ್ ಷೇರುಗಳಾಗಿ ಹಂಚಿಕೆ ಮಾಡಲಾಗಿದೆ | 201,766,000 | 201,766,000 |

**(ಎ) ಷೇರುಗಳ ಸಂಖ್ಯೆಯ ಸಮನ್ವಯ**

| | 31.03.2017ರಲ್ಲಿದ್ದಂತೆ | | 31.03.2016ರಲ್ಲಿದ್ದಂತೆ | |
|---|---|---|---|---|
| | ಷೇರುಗಳ ಸಂಖ್ಯೆ | ಮೊತ್ತ | ಷೇರುಗಳ ಸಂಖ್ಯೆ | ಮೊತ್ತ |
| ಪ್ರಾರಂಭದ ಶಿಲ್ಕು | 20,17,660 | 20,17,66,000 | 20,17,660 | 20,17,66,000 |
| ವರ್ಷದ ಅವಧಿಯಲ್ಲಿ ಕೂಡಿರುವುದು/ ಕಳೆದಿರುವುದು | | | | |
| ಅಖೈರು ಶಿಲ್ಕು | 20,17,660 | 20,17,66,000 | 20,17,660 | 20,17,66,000 |

**(ಬಿ) ಷೇರುಗಳಿಗೆ ಸಂಬಂಧಪಟ್ಟ ಹಕ್ಕುಗಳು, ಆದ್ಯತೆಗಳು ಮತ್ತು ನಿರ್ಬಂಧಗಳು:**

ಸಂಸ್ಥೆಯಲ್ಲಿ ರೂ.100/- ಸಮಾನ ಮೌಲ್ಯವುಳ್ಳ ಒಂದೇ ವರ್ಗದ ಈಕ್ವಿಟಿ ಷೇರುಗಳಿವೆ. ಷೇರುದಾರರು ಹೊಂದಿರುವ ಪ್ರತಿ ಷೇರಿಗೆ ಒಂದು ಮತದ ಅರ್ಹತೆ ಹೊಂದಿರುವರು.

**(ಸಿ) ಧಾರಕ ಕಂಪನಿಯಲ್ಲಿರುವ ಷೇರುಗಳು**

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಸರ್ಕಾರದ ಒಂದು ಉದ್ಯಮವು ತಲಾ ರೂ.100/-ರ ಮೌಲ್ಯದ 20,17,660 ಈಕ್ವಿಟಿ ಷೇರುಗಳನ್ನು (20,17,660) ಹೊಂದಿದೆ | 20,17,66,000 | 20,17,66,000 |
| **(ಡಿ) ಶೇ.5ಕ್ಕಿಂತ ಹೆಚ್ಚು ಷೇರುಗಳನ್ನು ಹೊಂದಿರುವ ಷೇರುದಾರರ ವಿವರಗಳು** | **31.03.2017ರಲ್ಲಿದ್ದಂತೆ** (ಷೇರುಗಳ ಸಂಖ್ಯೆ) | **31.03.2016ರಲ್ಲಿದ್ದಂತೆ** (ಷೇರುಗಳ ಸಂಖ್ಯೆ) |
| - ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ | 20,17,660 | 20,17,660 |
| - ಹೊಂದಿರುವ ಶೇಕಡಾವಾರು | 100 | 100 |

### 4. ಮೀಸಲುಗಳು ಮತ್ತು ಹೆಚ್ಚುವರಿಗಳು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ಸಾಮಾನ್ಯ ಮೀಸಲು | | |
| ಆರಂಭದ ಶಿಲ್ಕು | 1,628,048,780 | 1,592,233,216 |
| ಕೂಡಿರಿ : ವರ್ಷದಲ್ಲಿ ವಿನಿಯೋಗಿಸಿರುವುದು | 43,386,985 | 35,815,564 |
| ಅಖೈರು ಶಿಲ್ಕು | 1,671,435,765 | 1,628,048,780 |
| ಹೆಚ್ಚುವರಿಗಳು | | |
| ಆರಂಭದ ಶಿಲ್ಕು | 949,773,113 | 661,916,028 |
| ಕಳೆಯಿರಿ: ಸ್ಥಿರಾಸ್ತಿ ವಜಾ ಮಾಡಿರದ ವಾಹಕ ಮೌಲ್ಯ (ಕಂಪನಿಗಳ ಕಾಯ್ದೆ 2013ರ ಪರಿಶಿಷ್ಟ-II ರಲ್ಲಿ ನಿಗದಿಪಡಿಸಿರುವ ಪರಿವರ್ತನಾ ಏರ್ಪಾಡಿನ ಅನ್ವಯ) | - | 12,698,505 |
| ಕೂಡಿರಿ : ಲಾಭ ಮತ್ತು ನಷ್ಟದ ಹೇಳಿಕೆಯಿಂದ ತಿಳಿಸಿದ ವರ್ಷದ ಲಾಭ | 366,570,284 | 360,581,863 |
| ಕಳೆಯಿರಿ : ವಿನಿಯೋಜನೆ | 43,386,985 | 35,815,564 |
| ಉದ್ದೇಶಿತ ಲಾಭಾಂಶ | 20,176,600 | 20,176,600 |
| ಲಾಭಾಂಶ ವಿತರಣಾ ತೆರಿಗೆ | 3,562,021 | 4,129,013 |
| ಲಾಭಾಂಶ ವಿತರಣಾ ತೆರಿಗೆ ಮೇಲೆ ಮಾಡಿರುವ ಹೆಚ್ಚುವರಿ ಏರ್ಪಾಡು | (20,848) | (94,903) |
| ಅಖೈರು ಶಿಲ್ಕು | 1,249,238,639 | 949,773,113 |
| **ಅಖೈರು ಶಿಲ್ಕು** | **2,920,674,404** | **2,577,821,892** |

MSIL

## ಸ್ಥಿತಿ ವಿವರಣಾ ಪಟ್ಟಿಯ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

(ರೂ.ಗಳಲ್ಲಿ)

### 5. ಇತರೆ ದೀರ್ಘಾವಧಿ ಹೊಣೆಗಾರಿಕೆಗಳು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ಠೇವಣಿಗಳು | 65,035,747 | 44,976,806 |
| ಸರ್ಕಾರಿ ಸಾಲಗಳ ಮೇಲೆ ಸಂಚಯನಗೊಂಡ ಬಡ್ಡಿ | 5,387,534 | 5,387,534 |
| ಬಹುಮಾನವಿಲ್ಲದ ಚಿಟ್ ಚಂದಾದಾರರಿಂದ ಸಂಗ್ರಹಗೊಂಡ ಮೊತ್ತ | 726,842,500 | 718,389,500 |
| ಇತರೆ | 8,317,531 | 11,089,309 |
| ಅಖೈರು ಶಿಲ್ಕು | 805,583,312 | 779,843,149 |

### 6. ದೀರ್ಘಾವಧಿ ಮುನ್ನೇರ್ಪಾಡುಗಳು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ನೌಕರರ ಸೌಲಭ್ಯಗಳ ಮುನ್ನೇರ್ಪಾಡು: | | |
| – ರಜೆ ನಗದೀಕರಣಕ್ಕೆ ಮುನ್ನೇರ್ಪಾಡು (ನಿವ್ವಳ) | 73,286,851 | 70,035,692 |
| – ವಿಮಾ ಕ್ಲೇಮ್‌ಗೆ ವ್ಯವಸ್ಥೆ | 29,976,807 | 28,693,654 |
| ಅಖೈರು ಶಿಲ್ಕು | 103,263,658 | 98,729,346 |

### 7. ವ್ಯಾಪಾರ ಪಾವತಿ

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ಬಹುಮಾನವಿಲ್ಲದ ಚಿಟ್ ಚಂದಾದಾರರಿಂದ ಸಂಗ್ರಹಗೊಂಡ ಮೊತ್ತ | 764,321,500 | 794,955,500 |
| ಇತರರಿಗೆ ಪಾವತಿಗೆ ಬಾಕಿ | 349,206,116 | 313,233,122 |
| ಎಂಎಸ್‌ಎಂಇಡಿ ಸಾಲಗಾರರಿಗೆ ಬಾಕಿ | 433,290 | 6,798,268 |
| ಅಖೈರು ಶಿಲ್ಕು | 1,113,960,906 | 1,114,986,890 |

### 8. ಇತರೆ ಚಾಲ್ತಿ ಹೊಣೆಗಾರಿಕೆಗಳು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ಸಹಾಯಕ ಸಂಸ್ಥೆ : | | |
| ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | 2,110,370 | 3,704,925 |
| ಬಂಡವಾಳ ಸರಕುಗಳಿಗೆ ಸಾಲಗಾರರು | 892,077 | 358,690 |
| ಠೇವಣಿಗಳು | 9,257,353 | 30,427,729 |
| ವಿಟಿಪಿಸಿಗೆ (ಅಸೈಡ್ ಅನುದಾನ) ಪಾವತಿಸಬೇಕಾಗಿರುವುದು | 24,705,144 | 24,705,144 |
| ಇತರೆ ಹೊಣೆಗಾರಿಕೆಗಳು | 356,296,472 | 164,738,345 |
| ಅಖೈರು ಶಿಲ್ಕು | 393,261,416 | 223,934,833 |

### 9. ಅಲ್ಪಾವಧಿ ಮುನ್ನೇರ್ಪಾಡುಗಳು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ಸಾರಾಯಿ ಡೀಲರ್‌ಗಳಿಗೆ ಸಂಬಂಧಿಸಿದ ಟಿಸಿಎಸ್‌ಗೆ ಮುನ್ನೇರ್ಪಾಡು | 364,274,788 | 364,274,788 |
| ಚಾಲ್ತಿ ಆದಾಯ ತೆರಿಗೆ | – | – |
| ಕಡಿತ – ಮುಂಗಡ ತೆರಿಗೆ, ಟಿಡಿಎಸ್ ಮತ್ತು ಟಿಸಿಎಸ್ | – | – |
| ಆದಾಯ ತೆರಿಗೆಗೆ ಮುನ್ನೇರ್ಪಾಡು | – | – |
| ಪ್ರಸ್ತಾಪಿತ ಲಾಭಾಂಶ | 20,176,600 | 20,176,600 |
| ಲಾಭಾಂಶ ವಿತರಣಾ ತೆರಿಗೆ ಪಾವತಿಸಬೇಕಾಗಿರುವುದು | 3,562,021 | 4,129,013 |
| ನೌಕರರ ಸೌಲಭ್ಯಕ್ಕೆ ಮುನ್ನೇರ್ಪಾಡು : | | |
| ಗ್ರಾಚುಯಿಟಿಗೆ ಮುನ್ನೇರ್ಪಾಡು (ನಿವ್ವಳ) | (1,510,168) | 421,508 |
| ರಜೆ ನಗದೀಕರಣಕ್ಕೆ ಮುನ್ನೇರ್ಪಾಡು (ನಿವ್ವಳ) | 5,297,090 | 5,080,168 |
| ವಿಮಾ ಕ್ಲೇಮಿಗೆ ಮುನ್ನೇರ್ಪಾಡು | 1,283,155 | 1,283,153 |
| | 5,070,077 | 6,784,829 |
| ಅಖೈರು ಶಿಲ್ಕು | 393,083,486 | 395,365,230 |

(ರೂ.ಗಳಲ್ಲಿ)

## ಸ್ಥಿತಿ ವಿವರಣಾ ಪಟ್ಟಿಯ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

**10. ಸ್ಥಿರಾಸ್ತಿಗಳು :**

| ವಿವರಗಳು | ಬೆಲೆ 1.4.2016 ರಲ್ಲಿದ್ದಂತೆ | ಬೆಲೆ ವರ್ಷದ ಅವಧಿಯಲ್ಲಿ ಸೇರ್ಪಡೆ | ಬೆಲೆ ವರ್ಷದ ಅವಧಿಯಲ್ಲಿ ತೆಗೆದು ಹಾಕಿದ್ದು/ ಹೊಂದಾಣಿಕೆ ಮಾಡಿದ್ದು | ಬೆಲೆ 31.3.2017 ರಲ್ಲಿದ್ದಂತೆ | ಸವಕಳಿ 1.4.2016 ರವರೆಗೆ | ಸವಕಳಿ ವರ್ಷದ ಅವಧಿಯಲ್ಲಿ ಒದಗಿಸಿದ್ದು | ಸವಕಳಿ ಉಳಿಸಿಕೊಂಡಿರುವ ಗಳಿಕೆಗಳಿಗೆ ಹೊಂದಾಣಿಕೆ * | ಸವಕಳಿ ವರ್ಷದ ಅವಧಿಯಲ್ಲಿ ತೆಗೆದುಹಾಕಿದ್ದು/ ಹೊಂದಾಣಿಕೆ ಮಾಡಿದ್ದು | ಸವಕಳಿ 31.3.2017 ರವರೆಗೆ | ನಿವ್ವಳ ಬ್ಲಾಕ್ 31.3.2017 ರಲ್ಲಿದ್ದಂತೆ | ನಿವ್ವಳ ಬ್ಲಾಕ್ 31.3.2016 ರಲ್ಲಿದ್ದಂತೆ |
|---|---|---|---|---|---|---|---|---|---|---|---|
| | ರೂ. | ರೂ. | ರೂ. | ರೂ. | ರೂ. | ರೂ. | ರೂ. | ರೂ. | ರೂ. | ರೂ. | |
| **(i) ಗೋಚರಿತ ಆಸ್ತಿಗಳು:** | | | | | | | | | | | |
| ಭೂಮಿ : ಮುಕ್ತ ಹಿಡುವಳಿ | 7,248,812 | | | 7,248,812 | | | | | | 7,248,812 | 7,248,812 |
| ಗುತ್ತಿಗೆ ಹಿಡುವಳಿ | 10,534,547 | 1,714,511 | | 12,249,058 | | | | | | 12,249,058 | 10,534,547 |
| ಕಟ್ಟಡ : | | | | | | | | | | | |
| ಮುಕ್ತ ಹಿಡುವಳಿ | 207,143,494 | 709,161 | | 207,852,655 | 28,886,241 | 3,461,627 | | | 32,347,868 | 175,504,787 | 178,257,253 |
| ಗುತ್ತಿಗೆ ಹಿಡುವಳಿ | 5,291,255 | | | 5,291,255 | 1,538,035 | 148,868 | | | 1,686,903 | 3,604,352 | 3,753,220 |
| ಪೀಠೋಪಕರಣ ಮತ್ತು ಅಳವಡಿಕೆಗಳು | 101,824,210 | 2,477,726 | 147,148 | 104,154,788 | 83,843,440 | 7,728,444 | | 147,146 | 91,424,738 | 12,730,050 | 17,980,770 |
| ಕಂಪ್ಯೂಟರ್‌ಗಳು | 18,194,071 | 3,125,479 | 11,420 | 21,308,130 | 15,037,757 | 2,054,196 | | 10,986 | 17,080,967 | 4,227,164 | 3,156,315 |
| ಕಚೇರಿ ಉಪಕರಣಗಳು | 19,605,250 | 46,386,951 | 240,028 | 65,752,173 | 16,167,083 | 10,525,841 | | | 26,692,924 | 39,059,249 | 3,438,167 |
| ನಿರ್ವಹಣಾ ಉಪಕರಣಗಳು | 1,174,098 | | | 1,174,098 | 1,065,765 | 76,695 | | | 1,142,460 | 31,638 | 108,333 |
| ವಿದ್ಯುತ್ ಉಪಕರಣಗಳು | 43,157,828 | 3,209,250 | 107,034 | 46,260,044 | 25,371,065 | 2,534,535 | | 37,081 | 27,868,519 | 18,391,525 | 17,786,763 |
| ಗುತ್ತಿಗೆ ಆಸ್ತಿಗಳು | 244,499,975 | | | 244,499,975 | 244,499,883 | | | | 244,499,883 | 92 | 92 |
| ವಾಹನಗಳು | 6,433,050 | 3,289,444 | | 9,722,494 | 3,389,528 | 788,344 | | | 4,177,872 | 5,544,622 | 3,043,522 |
| ಗ್ರಾಂಟ್ ಸ್ವತ್ತುಗಳು-ಹೊಸ ಆಮದು /ರಫ್ತು ಉಗ್ರಾಣ | | | | | | | | | | | |
| ಕಟ್ಟಡ | 6 | - | - | 6 | - | - | - | - | - | 6 | 6 |
| ಪೀಠೋಪಕರಣ ಮತ್ತು ಅಳವಡಿಕೆಗಳು | 82 | - | - | 82 | - | - | - | - | - | 82 | 82 |
| ನಿರ್ವಹಣಾ ಸಲಕರಣೆಗಳು | 2 | - | - | 2 | - | - | - | - | - | 2 | 2 |
| ವಿದ್ಯುತ್ ಉಪಕರಣಗಳು | 18 | - | - | 18 | - | - | - | - | - | 18 | 18 |
| ಕಚೇರಿ ಉಪಕರಣಗಳು | 88 | - | - | 88 | - | - | - | - | - | 88 | 88 |
| ವಾಹನಗಳು | 1 | - | - | 1 | - | - | - | - | - | 1 | 1 |
| **ಒಟ್ಟು** | **665,106,787** | **60,912,522** | **505,630** | **725,513,679** | **419,798,797** | **27,318,550** | **-** | **195,213** | **446,922,134** | **278,591,546** | **245,307,991** |
| ಕಳೆದ ವರ್ಷದ್ದು | 697,234,966 | 9,630,060 | 41,758,238 | 665,106,788 | 383,271,654 | 24,408,855 | 12,663,151 | 544,863 | 419,798,796 | 245,307,991 | 313,963,312 |

**(ii) ಅಗೋಚರಿತ ಆಸ್ತಿಗಳು:**

| ವಿವರಗಳು | ಬೆಲೆ | | | | ಸವಕಳಿ | | | | | ನಿವ್ವಳ ಬ್ಲಾಕ್ | |
|---|---|---|---|---|---|---|---|---|---|---|---|
| ಕಂಪ್ಯೂಟರ್ ಸಾಫ್ಟ್‌ವೇರ್ | 7,379,513 | 727,033 | - | 8,106,546 | 3,234,888 | 1,202,918 | | - | 4,437,806 | 3,668,740 | 4,144,625 |
| ಕಳೆದ ವರ್ಷ | 7,156,753 | 222,760 | - | 7,379,513 | 2,069,431 | 1,130,103 | 35,354 | - | 3,234,888 | 4,144,625 | 5,087,322 |

**(iii) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ**

| ವಿವರಗಳು | ಆರಂಭಿಕ ಶಿಲ್ಕು | ವರ್ಷದಲ್ಲಿ ಸೇರ್ಪಡೆ | ಕಳೆದದ್ದು | ವರ್ಷದಲ್ಲಿ ಬಂಡವಾಳೀಕರಣ | 31.03.2017ರಲ್ಲಿದ್ದಂತೆ ಶಿಲ್ಕು |
|---|---|---|---|---|---|
| ಪ್ರಗತಿಯಲ್ಲಿರುವ ನಿರ್ಮಾಣ ಕಾಮಗಾರಿಗಳು | 313,172,589 | 27,296,553 | 228677 | - | 340,240,465 |

* ಸ್ಥಿರಾಸ್ತಿಗಳ ವಜಾ ಮಾಡಿರದ ವಾಹಕ ಮೌಲ್ಯ (ಕಂಪನಿಗಳ ಕಾಯ್ದೆ 2013ರ ಷೆಡ್ಯೂಲ್-II ರಲ್ಲಿ ನಿಗದಿಪಡಿಸಿರುವ ಪರಿವರ್ತನಾ ಉಪಬಂಧದಂತೆ)

## ಸ್ಥಿತಿ ವಿವರಣಾ ಪಟ್ಟಿಯ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

(ರೂ.ಗಳಲ್ಲಿ)

**11. ಚಾಲ್ತಿಯೇತರ ಹೂಡಿಕೆಗಳು:**

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| **(ಎ) ವ್ಯಾಪಾರ ವಹಿವಾಟು ಹೂಡಿಕೆಗಳು** | ಇಲ್ಲ | ಇಲ್ಲ |
| **(ಬಿ) ಇತರೆ** | | |
| **ಎ. ಈಕ್ವಿಟಿ ಹೂಡಿಕೆಗಳು :-** | | |
| I ಕೋಟ್ ಮಾಡಿರದ :- | | |
| ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಸಂಪೂರ್ಣ ಸ್ವಾಮ್ಯದ ಸಹಾಯಕ ಕಂಪನಿ - 3,57,252 (3,57,252) ಸಂಪೂರ್ಣ ಪಾವತಿಸಲಾದ ತಲಾ ರೂ.100ರ ಈಕ್ವಿಟಿ ಷೇರುಗಳು. ಇವುಗಳಲ್ಲಿ ಪೂರ್ಣ ಪಾವತಿಯಾದ ತಲಾ ರೂ. 100/-ರ ಮೌಲ್ಯದ 3,10,230 ಷೇರುಗಳು, ರೂ.600/-ರ ಪ್ರೀಮಿಯಂನಲ್ಲಿ ಸ್ವಾಧೀನಪಡಿಸಿಕೊಂಡ 41,022 ಷೇರುಗಳು ಮತ್ತು ಬೋನಸ್ ಷೇರುಗಳೆಂದು ವಿತರಿಸಲಾಗಿರುವ ರೂ.100/- ಮೌಲ್ಯದ ಸಂಪೂರ್ಣ ಪಾವತಿಸಲಾದ 6,000(6,000) ಈಕ್ವಿಟಿ ಷೇರುಗಳೂ ಸೇರಿವೆ) * | 59,738,400 | 59,738,400 |
| ಹಾಸನ ಮಂಗಳೂರು ರೈಲು ಡೆವಲಪ್‌ಮೆಂಟ್ ಕಂಪನಿ ಲಿಮಿಟೆಡ್-ತಲಾ ರೂ.10/-ರ ಮೌಲ್ಯದ ಸಂಪೂರ್ಣ ಪಾವತಿಸಲಾದ 70,00,000 (70,00,000) ಈಕ್ವಿಟಿ ಷೇರುಗಳು | 70,000,000 | 70,000,000 |
| ಫುಡ್ ಕರ್ನಾಟಕ ಲಿಮಿಟೆಡ್‌ನ ತಲಾ ರೂ. 10/- ರ ಮೌಲ್ಯದ ಸಂಪೂರ್ಣ ಪಾವತಿಸಲಾದ 50,000 (50,000) ಈಕ್ವಿಟಿ ಷೇರುಗಳು | 500,000 | 500,000 |
| ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ (ಸಹಾಯಕ ಕಂಪನಿ) - ತಲಾ ರೂ.10/-ರ ಮೌಲ್ಯದ ಸಂಪೂರ್ಣ ಪಾವತಿಸಲಾದ 7,20,875 (7,20,875) ಈಕ್ವಿಟಿ ಷೇರುಗಳು (ಸರ್ಕಾರಿ ಆದೇಶದ ಮೇರೆಗೆ ರೂ.5,000/- ಸಾಧಾರಣ ಮೌಲ್ಯಕ್ಕೆ ನೀಡಿರುವುದು) | 5,000 | 5,000 |
| ಕೆ.ಟಿ. ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್-ತಲಾ ರೂ. 100/- ರ ಮೌಲ್ಯದ ಸಂಪೂರ್ಣ ಪಾವತಿಸಲಾದ 35 (35) ಷೇರುಗಳು | 3,500 | 3,500 |
| ಕೆ.ಟಿ. ಮ್ಯಾನ್ಷನ್ಸ್ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್- ತಲಾ ರೂ. 100/- ರ ಮೌಲ್ಯದ ಸಂಪೂರ್ಣ ಪಾವತಿಸಲಾದ 25 (25) ಷೇರುಗಳು | 2,500 | 2,500 |
| ದಿ ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್-ತಲಾ ರೂ.10,00,000/- ಮೌಲ್ಯದ ಒಂದು ಸಿ-ದರ್ಜೆ ಸಾಮಾನ್ಯ ಷೇರು. (ಇ-ದರ್ಜೆ ರೂ.50,000/-) | 1,000,000 | 50,000 |
| **ಕೋಟ್ ಮಾಡಿರದ ಒಟ್ಟು ಈಕ್ವಿಟಿ ಹೂಡಿಕೆಗಳು** | **131,249,400** | **130,299,400** |
| **II ಕೋಟ್ ಮಾಡಿದ :** | | |
| ಜೆ.ಕೆ. ಟೈರ್ ಇಂಡಸ್ಟ್ರೀಸ್ ಲಿಮಿಟೆಡ್‌ನಲ್ಲಿ ಸಂಪೂರ್ಣ ಪಾವತಿಸಲಾದ, ತಲಾ ರೂ.2/-ರ 3,29,060 ಈಕ್ವಿಟಿ ಷೇರುಗಳು (ಸಂಪೂರ್ಣ ಪಾವತಿಸಲಾದ ತಲಾ ರೂ.10ರ 65,812 ಈಕ್ವಿಟಿ ಷೇರುಗಳು (ಮಾರುಕಟ್ಟೆ ಒಟ್ಟು ದರ ರೂ.4,32,38,484/- (ರೂ.55,41,370/-) | 2,861,005 | 2,861,005 |
| ಬೆಂಗಾಲ್ ಅಂಡ್ ಅಸ್ಸಾಂ ಕಂ. ಲಿಮಿಟೆಡ್ ಸಂಪೂರ್ಣ ಪಾವತಿಸಲಾದ, ತಲಾ ರೂ.10/-ರ ಮೌಲ್ಯದ, 3831(3831)ಈಕ್ವಿಟಿ ಷೇರುಗಳು (ಒಟ್ಟಾರೆ ಮಾರುಕಟ್ಟೆ ಮೌಲ್ಯ ರೂ.65,52,926/- (ರೂ.18,20,108/-) | 487,426 | 487,426 |
| **ಕೋಟ್ ಮಾಡಿದ ಒಟ್ಟಾರೆ ಈಕ್ವಿಟಿ ಹೂಡಿಕೆಗಳು** | **3,348,431** | **3,348,431** |
| **ಬಿ. ಸರ್ಕಾರಿ ಸೆಕ್ಯುರಿಟಿಗಳು: (ಕೋಟ್ ಮಾಡಿರದ)** | | |
| ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರ ** | 3,000 | 3,000 |
| **ಕೋಟ್ ಮಾಡಿರದ ಸರ್ಕಾರಿ ಸೆಕ್ಯುರಿಟಿಗಳ ಒಟ್ಟು ಮೊತ್ತ** | **3,000** | **3,000** |
| **ಒಟ್ಟಾರೆ ಹೂಡಿಕೆ ಮೊತ್ತ (A) + (B) (a I + a II + b)** | **134,600,831** | **133,650,831** |

* 30 ಷೇರುಗಳು (30) ಕಂಪನಿ ಪ್ರಮೋಟರ್ಸ್ ಹೆಸರಿನಲ್ಲಿವೆ.

** ಕಂಪನಿ ಹೆಸರಿನಲ್ಲಿಲ್ಲ, ಮಾರಾಟ ತೆರಿಗೆ ಇಲಾಖೆಯಲ್ಲಿ ಠೇವಣಿಯಾಗಿರಿಸಿದೆ.

# ಸ್ಥಿತಿ ವಿವರಣಾ ಪಟ್ಟಿಯ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

(ರೂ.ಗಳಲ್ಲಿ)

## 12. ಮುಂದೂಡಿದ ತೆರಿಗೆ ಆಸ್ತಿಗಳು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ಮುಂದೂಡಿದ ತೆರಿಗೆ ಹೊಣೆಗಾರಿಕೆಗಳು : | | |
| ಸ್ಥಿರಾಸ್ತಿ : ಆದಾಯ ತೆರಿಗೆ, ಸವಕಳಿ ಮತ್ತು ಸವಕಳಿ | | |
| ವ್ಯತ್ಯಾಸದಿಂದ ಆದ ಪರಿಣಾಮು/ಹಣಕಾಸು ವರದಿ ಮೇಲೆ ವಿಧಿಸಿದ ಋಣ ವಿಮೋಚನೆ | 4,234,961 | 1,663,730 |
| **ಒಟ್ಟಾರೆ ಮುಂದೂಡಿದ ತೆರಿಗೆ ಹೊಣೆಗಾರಿಕೆ** | **4,234,961** | **1,663,730** |
| ಮುಂದೂಡಿದ ತೆರಿಗೆ ಆಸ್ತಿ : | | |
| ಸಂದೇಹಾಸ್ಪದ ಸಾಲ ಮತ್ತು ಮುಂಗಡಗಳಿಗೆ ಮುನ್ನೇರ್ಪಾಡು | 73,645,011 | 74,277,258 |
| ರಜೆ ನಗದೀಕರಣ ಮತ್ತು ಗ್ರಾಚ್ಯುಯಿಟಿಗಾಗಿ ಮುನ್ನೇರ್ಪಾಡು | 26,376,739 | 25,918,947 |
| ಮರಣ ಪರಿಹಾರ ನಿಧಿಗಾಗಿ ಮುನ್ನೇರ್ಪಾಡು | 1,848,307 | 2,850,284 |
| ವಿಆರ್‌ಎಸ್ ವೆಚ್ಚಗಳು (ಐಟಿ ಉದ್ದೇಶಕ್ಕೆ ಕಡಿತವಾಗಿರುವಿಕೆಗೆ ಅನುಮತಿ ನೀಡದ ಪ್ರಮಾಣಕ್ಕೆ) | – | |
| **ಒಟ್ಟು ಮುಂದೂಡಿದ ತೆರಿಗೆ ಆಸ್ತಿಗಳು** | **101,870,057** | **103,046,488** |
| **ನಿವ್ವಳ ಮುಂದೂಡಿದ ತೆರಿಗೆ ಆಸ್ತಿಗಳು** | **97,635,096** | **101,382,759** |

## 13. ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| (ಎ) ಸಾಲಗಳು I. ಭದ್ರತೆಯುಳ್ಳ ಉತ್ತಮವೆಂದು ಪರಿಗಣಿಸಿರುವುದು. | 27,846 | 182,612 |
| II. ಭದ್ರತೆಯಿಲ್ಲದ ಉತ್ತಮವೆಂದು ಪರಿಗಣಿಸಿರುವುದು | 193,330 | 448,985 |
| | **221,176** | **631,597** |
| (ಬಿ) ಮುಂಗಡಗಳು | | |
| I. ಉತ್ತಮವೆಂದು ಪರಿಗಣಿಸಲಾದುದು : – ಭದ್ರತೆಯುಳ್ಳದ್ದು | 757,149,500 | 852,399,500 |
| – ಭದ್ರತೆಯಿಲ್ಲದ್ದು | 132,584,410 | 102,031,876 |
| II. ಸಂದೇಹಾಸ್ಪದವೆಂದು ಪರಿಗಣಿಸಲಾದ | 109,546,806 | 109,546,806 |
| ಕಳೆಯಿರಿ : ಸಂದೇಹಾಸ್ಪದ ಮುಂಗಡಗಳಿಗೆ ಮುನ್ನೇರ್ಪಾಡು | (109,546,806) | (109,546,806) |
| | 889,733,910 | 954,431,376 |
| **ಆಖೈರು ಶಿಲ್ಕು** | **889,955,086** | **955,062,973** |

## 14. ಸರಕುಗಳು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| (i) ಕಚ್ಚಾ ಸರಕು (ಕಡಿಮೆ ದರದ ಅಥವಾ ಮಾರುಕಟ್ಟೆ ಮೌಲ್ಯ)* ಕಾಗದ ಮತ್ತು ಸ್ಟ್ರಾ ಬೋರ್ಡ್ | 17,681,338 | 24,206,906 |
| – ಪರಿವರ್ತಕರು | 2,062,231 | 28,359,766 |
| (ii) ಸಿದ್ಧವಾದ ಸರಕುಗಳು (ಕಡಿಮೆ ದರದ ಅಥವಾ ನಿವ್ವಳ ಗಳಿಕೆ ಮೌಲ್ಯ)* | 128,624,181 | 180,809,076 |
| (iii) ವಹಿವಾಟು ನಡೆಸಿದ ಸರಕುಗಳು (ಕಡಿಮೆ ದರದ ಅಥವಾ ನಿವ್ವಳ ಗಳಿಕೆ ಮೌಲ್ಯ) | 794,172,688 | 553,052,376 |
| (iv) ಬಾಡಿಗೆದಾರರ ಬಳಿಯಿರುವ ಸರಕು | | |
| ಹೈರ್ ಪರ್ಚೇಸ್ ಒಪ್ಪಂದದ ಮೇರೆಗೆ (ಒಪ್ಪಿದ ಮೌಲ್ಯಕ್ಕಿಂತ ಕಡಿಮೆ ಮೊತ್ತ ಸ್ವೀಕಾರ) | 37,930,820 | 41,259,575 |
| ಕಳೆಯಿರಿ : ಬಾಡಿಗೆದಾರರ ಬಾಕಿ ಮೊತ್ತಕ್ಕೆ ಮುನ್ನೇರ್ಪಾಡು | (37,930,820) | (41,259,575) |
| **ಆಖೈರು ಶಿಲ್ಕು** | **942,540,438** | **786,428,124** |

* ರೂ.31,239/–ರ ಹಾನಿಯಾದ ಸರಕು ಸೇರಿವೆ.

## 15. ವ್ಯಾಪಾರದಿಂದ ಬರಬೇಕಾಗಿರುವುದು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ಭದ್ರತೆಯುಳ್ಳ ಉತ್ತಮವೆಂದು ಪರಿಗಣಿತ | 441,411 | 1,457,000 |
| ಭದ್ರತೆಯಿಲ್ಲದ ಉತ್ತಮವೆಂದು ಪರಿಗಣಿತ | | |
| (i) ಪಾವತಿಸಬೇಕಾದ ದಿನಾಂಕದಿಂದ ಆರು ತಿಂಗಳಿಗಿಂತ ಕಡಿಮೆ ಅವಧಿಯದು | 50,633,897 | 51,969,848 |
| ii) ಇತರೆ | 144,029,915 | 34,062,346 |
| (iii) ಸಂದೇಹಾಸ್ಪದವೆಂದು ಪರಿಗಣಿಸಲ್ಪಟ್ಟ | 53,497,111 | 53,484,380 |
| | **248,602,334** | **140,973,574** |
| ಕಳೆಯಿರಿ : ಸಂದೇಹಾಸ್ಪದ ಸಾಲಗಳಿಗೆ ಮುನ್ನೇರ್ಪಾಡು | 53,497,111 | 53,484,380 |
| **ಆಖೈರು ಶಿಲ್ಕು** | **195,105,223** | **87,489,194** |

# ಸ್ಥಿತಿ ವಿವರಣಾ ಪಟ್ಟಿಯ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

(ರೂ.ಗಳಲ್ಲಿ)

## 16. ನಗದು ಮತ್ತು ಬ್ಯಾಂಕ್‌ನಲ್ಲಿನ ಶಿಲ್ಕು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| (i) ನಗದು ಮತ್ತು ನಗದು ಸಮಾನ | | |
| (ಎ) ಬ್ಯಾಂಕ್‌ಗಳಲ್ಲಿನ ಶಿಲ್ಕು – ಚಾಲ್ತಿ ಖಾತೆ | 280,455,782 | 109,027,309 |
| – ಠೇವಣಿ ಖಾತೆ | 512,621,010 | 229,680,127 |
| (ಬಿ) ಕೈಯಲ್ಲಿರುವ ಚೆಕ್, ಡ್ರಾಫ್ಟ್ಸ್ | – | 6,537,844 |
| (ಸಿ) ಕೈಯಲ್ಲಿರುವ ನಗದು ಮತ್ತು ಸ್ಟಾಂಪ್ಸ್ | 43,215,121 | 40,269,449 |
| (ಡಿ) ರವಾನೆಯಲ್ಲಿರುವ ಸಂದಾಯಗಳು | 212,345 | 117,668 |
| (ii) ಅಂಚಿನ ಹಣ ಅಥವಾ ಸಾಲಗಳಿಗೆ ನೀಡಿದ ಭದ್ರತೆ, ಗ್ಯಾರಂಟಿಗಳು, ಇತರೆ ಬದ್ಧತೆಗಳ ಪ್ರಮಾಣಕ್ಕೆ ಬ್ಯಾಂಕುಗಳಲ್ಲಿ ಇರುವ ಶಿಲ್ಕುಗಳು | 639,585,965 | 659,015,606 |
| (iii) 3ರಿಂದ 12 ತಿಂಗಳಲ್ಲಿ ಅವಧಿ ಪೂರೈಕೆಯ ಬ್ಯಾಂಕ್ ಠೇವಣಿಗಳು | 633,299,898 | 585,956,524 |
| ಆಖೈರು ಶಿಲ್ಕು | 2,109,390,121 | 1,630,604,527 |

## 17. ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| (ಎ) ಸಂಬಂಧಿಸಿದ ವ್ಯಕ್ತಿಗಳಿಗೆ ನೀಡಿದ ಸಾಲ ಮತ್ತು ಮುಂಗಡಗಳು | – | – |
| (ಬಿ) ಸಾಲಗಳು I. ಭದ್ರತೆಯುಳ್ಳ ಉತ್ತಮವೆಂದು ಪರಿಗಣಿತ | 204,134 | 204,134 |
| II. ಭದ್ರತೆಯಿಲ್ಲದ ಉತ್ತಮವೆಂದು ಪರಿಗಣಿತ | 99,901 | 99,901 |
| | 304,035 | 304,035 |
| (ಸಿ) ಮುಂಗಡಗಳು I ಉತ್ತಮವೆಂದು ಪರಿಗಣಿತ – ಭದ್ರತೆಯುಳ್ಳ | 860,586,000 | 764,650,500 |
| – ಭದ್ರತೆಯಿಲ್ಲದ | 122,145,287 | 397,212,728 |
| II ಸಂಶಯಾಸ್ಪದವೆಂದು ಪರಿಗಣಿತವಾದ | 11,822,913 | 10,333,770 |
| ಕಳೆಯಿರಿ : ಸಂಶಯಾಸ್ಪದ ಮುಂಗಡಗಳಿಗೆ ಮುನ್ನೇರ್ಪಾಡು | (11,822,913) | (10,333,770) |
| | 982,731,287 | 1,161,863,228 |
| (ಡಿ) ಇತರೆ –ಭದ್ರತೆಯಿಲ್ಲದ ಉತ್ತಮವೆಂದು ಪರಿಗಣಿತ | | |
| ಮುಂಗಡ ಆದಾಯ ತೆರಿಗೆ, ಟಿಸಿಎಸ್ ಮತ್ತು ಟಿಡಿಎಸ್ (ಹಿಂದಿನ ವರ್ಷಗಳದ್ದು) | 24,408,195 | 24,408,195 |
| ಕಳೆಯಿರಿ : ಕಳೆದ ವರ್ಷಗಳ ಆದಾಯ ತೆರಿಗೆಗೆ ಮಾಡಿದ ಮುನ್ನೇರ್ಪಾಡು | – | |
| | **24,408,195** | **24,408,195** |
| ಮುಂಗಡ ಆದಾಯ ತೆರಿಗೆ, ಟಿಸಿಎಸ್ ಮತ್ತು ಟಿಡಿಎಸ್ (ಪ್ರಸ್ತುತ ವರ್ಷ) | 171,828,355 | 184,050,776 |
| ಕಳೆಯಿರಿ : ಆದಾಯ ತೆರಿಗೆ ಮುನ್ನೇರ್ಪಾಡು | 197,880,370 | 192,322,439 |
| | (26,052,015) | (8,271,663) |
| ಪೂರ್ವ ಪಾವತಿ ಖರ್ಚುಗಳು | 47,831,377 | 35,133,337 |
| ಸುಂಕಗಳು ಮತ್ತು ತೆರಿಗೆಗಳು | 2,450,829 | 227,046 |
| | 50,282,206 | 35,360,383 |
| | 48,638,386 | 51,496,915 |
| ಆಖೈರು ಶಿಲ್ಕು | 1,031,673,708 | 1,213,664,178 |

## 18. ಚಾಲ್ತಿಯಲ್ಲಿರುವ ಇತರೆ ಆಸ್ತಿಗಳು

| ವಿವರಗಳು | 31.03.2017ರಲ್ಲಿದ್ದಂತೆ | 31.03.2016ರಲ್ಲಿದ್ದಂತೆ |
|---|---|---|
| ಹೂಡಿಕೆಗಳ ಮೇಲೆ ಸಂಚಯನವಾದ ಬಡ್ಡಿ | 2,706 | 2,397 |
| ಠೇವಣಿ ಮೇಲೆ ಸಂಚಯನವಾದ ಬಡ್ಡಿ | 127,887,457 | 134,630,525 |
| ಬಾಡಿಗೆ ಸ್ವೀಕಾರವಾಗಬೇಕಿರುವುದು | 5,883,544 | 12,488,406 |
| ಆಖೈರು ಶಿಲ್ಕು | 133,773,707 | 147,121,328 |

## 19. ಕಾರ್ಯಚಟುವಟಿಕೆಗಳಿಂದ ಬಂದ ಆದಾಯ

(ರೂ.ಗಳಲ್ಲಿ)

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| ಮಾರಾಟ | | |
| ಮದ್ಯ | 13,304,301,833 | 12,473,978,909 |
| ನೋಟ್ ಪುಸ್ತಕಗಳು ಮತ್ತು ಲೇಖನ ಸಾಮಗ್ರಿ | 407,475,507 | 226,194,724 |
| ಫಾರ್ಮಸ್ಯೂಟಿಕಲ್ | 1,209,000 | 403,431 |
| ಇತರೆ | 38,004,089 | 4,232,169 |
| ಚಿಟ್ ಫಂಡ್ ವ್ಯವಹಾರದಲ್ಲಿ ಗಳಿಸಿದ ಆದಾಯ | | |
| ಫೋರ್‌ಮನ್‌ರವರ ಕಮಿಷನ್ | 113,413,700 | 107,361,625 |
| ಲಾಭಾಂಶ | 15,039,038 | 12,720,643 |
| ಸುಸ್ತಿ ಬಡ್ಡಿ | 12,579,646 | 11,961,792 |
| ಸೇವಾ ಶುಲ್ಕಗಳು ಮತ್ತು ಕಮಿಷನ್ | 823,456 | 2,953,712 |
| **ಆಖೈರು ಶಿಲ್ಕು** | **13,892,846,269** | **12,839,807,005** |

## 20. ಇತರೆ ಆದಾಯ

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| i. ಇವುಗಳ ಮೇಲಿನ ಬಡ್ಡಿ: | | |
| – ಠೇವಣಿಗಳು ಮತ್ತು ಮುಂಗಡಗಳು – ಒಟ್ಟು | 10,545,498 | 937,411 |
| – ಬ್ಯಾಂಕ್ ಠೇವಣಿಗಳು – ಒಟ್ಟು | 121,730,274 | 142,408,835 |
| ii. ಜಂಟಿ ಉದ್ಯಮದಿಂದ ಬಂದ ಆದಾಯ: | | |
| – ಇಎಸ್‌ಎಸ್‌ಪಿಎಲ್ ಲಾಭ/(ನಷ್ಟ)ದ ಪಾಲು | 31,751 | 31,803 |
| iii. ಬಾಡಿಗೆ | 28,925,050 | 29,025,117 |
| iv. ದೀರ್ಘಾವಧಿ ಹೂಡಿಕೆಗಳಿಂದ ಬಂದ ಲಾಭಾಂಶ | | |
| – ಸಹಾಯಕ ಕಂಪನಿ – ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | 2,679,390 | 1,786,260 |
| – ಇತರೆ | 824,905 | 558,727 |
| v. ಬಹುಕಾಲ ಅಗತ್ಯವಿಲ್ಲದ ಸಂದೇಹಾಸ್ಪದ ಸಾಲಗಳ ಮುನ್ನೇರ್ಪಾಡು | 4,783,712 | 8,628,404 |
| vi. ದೊರೆತ ರಿಯಾಯಿತಿ | 2,214,130 | 5,367,607 |
| vii. ಆಸ್ತಿ ಮಾರಾಟದಿಂದ ಬಂದ ಲಾಭ | – | – |
| viii. ವಿವಿಧ ಆದಾಯ | 13,780,919 | 11,494,705 |
| **ಆಖೈರು ಶಿಲ್ಕು** | **185,515,629** | **200,238,869** |

### 21. ಬಳಸಿದ ಸರಕುಗಳ ವೆಚ್ಚ

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| ಕಚ್ಚಾ ಸರಕಿನ ಆರಂಭಿಕ ದಾಸ್ತಾನು | 52,566,672 | 60,487,833 |
| ಕೂಡಿರಿ : ಕಚ್ಚಾ ಸರಕು ಖರೀದಿ | 71,707,261 | 95,389,323 |
| | 124,273,933 | 155,877,156 |
| ಕಳೆಯಿರಿ : ಕಚ್ಚಾ ಸರಕಿನ ಆಖೈರು ದಾಸ್ತಾನು | 19,743,569 | 52,566,672 |
| ಬಳಸಿದ ಸರಕುಗಳ ವೆಚ್ಚ | 104,530,364 | 103,310,484 |

### 22. ವ್ಯಾಪಾರದ ಸರಕಿನ ಖರೀದಿ

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| (i) ಮದ್ಯ | 12,333,606,230 | 11,501,772,464 |
| (ii) ಲೇಖನ ಸಾಮಗ್ರಿ | 137,178,412 | 23,756,115 |
| (iii) ಫಾರ್ಮಸ್ಯೂಟಿಕಲ್ | 1,438,224 | 1,145,878 |
| (iv) ಇತರೆ | 36,437,893 | 3,634,495 |
| ಆಖೈರು ಶಿಲ್ಕು | 12,508,660,759 | 11,530,308,952 |

### 23. ವ್ಯಾಪಾರದಲ್ಲಿರುವ ಸರಕು ಮತ್ತು ಸಿದ್ಧವಾದ ಸರಕುಗಳ ತಪಶೀಲಿನಲ್ಲಿ ಬದಲಾವಣೆಗಳು

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| ವರ್ಷದ ಕೊನೆಯಲ್ಲಿನ ಸರಕಿನ ತಪಶೀಲು | | |
| ವ್ಯಾಪಾರವಾದ ಸರಕು | 794,172,688 | 553,052,376 |
| ಸಿದ್ಧವಾದ ಸರಕುಗಳು | 128,624,181 | 180,809,076 |
| | **922,796,869** | **733,861,452** |
| ವರ್ಷದ ಪ್ರಾರಂಭದಲ್ಲಿ ಸರಕಿನ ತಪಶೀಲು | | |
| ವ್ಯಾಪಾರವಾದ ಸರಕುಗಳು | 553,052,376 | 390,003,837 |
| ಸಿದ್ಧವಾದ ಸರಕುಗಳು | 180,809,076 | 192,035,643 |
| | 733,861,452 | 582,039,480 |
| ಸರಕುಗಳಲ್ಲಿನ (ಏರಿಕೆ)/ಇಳಿಕೆ | (188,935,417) | (151,821,972) |

### 24. ನೌಕರರ ಸೌಲಭ್ಯದ ವೆಚ್ಚಗಳು

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| (i) ವೇತನ ಮತ್ತು ಸಂಬಳಗಳು | 176,002,655 | 165,297,336 |
| (ii) ಭವಿಷ್ಯ ನಿಧಿ ಮತ್ತು ಇತರೆ ನಿಧಿಗೆ ಕೊಡುಗೆ | 13,433,229 | 17,047,909 |
| (iii) ಪರಿಹಾರಿತ ಗೈರುಹಾಜರಿಗೆ ಮುನ್ನೇರ್ಪಾಡು | 12,899,398 | 14,672,272 |
| (iv) ಗ್ರಾಚ್ಯುಯಿಟಿ | 530,824 | 3,199,445 |
| (v) ಸಿಬ್ಬಂದಿ ಕಲ್ಯಾಣ ವೆಚ್ಚಗಳು | 27,978,930 | 22,763,251 |
| ಆಖೈರು ಶಿಲ್ಕು | 230,845,036 | 222,980,213 |

### 25. ಹಣಕಾಸು ವೆಚ್ಚಗಳು

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| ಬಡ್ಡಿ | 243,864 | 14,535,373 |
| ಬ್ಯಾಂಕ್ ಶುಲ್ಕಗಳು | 1,810,080 | 1,510,426 |
| ಗ್ಯಾರಂಟಿ ಕಮಿಷನ್ | 3,276,927 | 3,163,065 |
| ಆಖೈರು ಶಿಲ್ಕು | 5,330,871 | 19,208,864 |

(ರೂ.ಗಳಲ್ಲಿ)

### 26. ಇತರೆ ಖರ್ಚುಗಳು

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| ಪರಿವರ್ತನೆ ಶುಲ್ಕಗಳು – ನೋಟ್ ಪುಸ್ತಕಗಳು | 14.018.664 | 17,542,311 |
| ಪ್ಯಾಕಿಂಗ್ ಸಾಮಗ್ರಿ ಮತ್ತು ಎರಡನೇ ಹಂತದ ಸಾಗಣೆ | 67.905.227 | 63,412,527 |
| ಹೊರಗುತ್ತಿಗೆ ನೀಡಿಕೆ ವೆಚ್ಚ | 242.345.257 | 206,319,979 |
| ಬಾಡಿಗೆ | 70,075,422 | 62,953,304 |
| ದುರಸ್ತಿಗಳು ಮತ್ತು ನಿರ್ವಹಣೆ: | | |
| – ಕಟ್ಟಡ | 10,206,488 | 17,740,385 |
| – ವಾಹನ | 800,029 | 1,109,633 |
| – ಇತರೆ | 9,354,897 | 8,334,694 |
| ವಿಮೆ | 7,724,119 | 7,233,176 |
| ದರಗಳು ಮತ್ತು ತೆರಿಗೆಗಳು | 222,227,524 | 160,986,421 |
| ಇತರೆ ವೆಚ್ಚಗಳು | 13,391,013 | 12,207,260 |
| ಜಾಹೀರಾತು | 29,630,590 | 39,699,967 |
| ಲೆಕ್ಕಪರಿಶೋಧಕರಿಗೆ ಪಾವತಿ : | | |
| – ಲೆಕ್ಕಪರಿಶೋಧನೆಗಾಗಿ | 402,500 | 288,625 |
| – ತೆರಿಗೆ ಪರಿಶೋಧನೆಗಾಗಿ | 80,500 | 62,500 |
| ಅಂಚೆ, ಟೆಲೆಕ್ಸ್ ಮತ್ತು ದೂರವಾಣಿ | 8,644,997 | 8,657,591 |
| ಮುದ್ರಣ ಮತ್ತು ಲೇಖನ ಸಾಮಗ್ರಿ | 9,220,959 | 7,572,496 |
| ಕಾನೂನು ಮತ್ತು ವೃತ್ತಿ ಶುಲ್ಕಗಳು | 33,475,903 | 25,976,075 |
| ಪ್ರವಾಸ | 19,411,074 | 15,786,247 |
| ವಿದ್ಯುತ್ ಮತ್ತು ನೀರು | 10,547,856 | 9,762,750 |
| ಭದ್ರತಾ ಸೇವೆಗಳು | 5,063,217 | 4,479,581 |
| ಕಮಿಷನ್ | 17,062,172 | 6,913,903 |
| ಮುಖ್ಯಮಂತ್ರಿಗಳ ಪರಿಹಾರ ನಿಧಿ (ಸಿಎಸ್‌ಆರ್) | 20,000,000 | 60,000,000 |
| ದೇಣಿಗೆಗಳು | | |
| ಸೆಕ್ಷನ್ 80ಜಿ ಅನ್ವಯ | 225,000 | – |
| ಇತರೆ 80ಜಿ ಹೊರತಾದುದು | 1,500,000 | – |
| ನಿರ್ದೇಶಕರ ಹಾಜರಿ ಶುಲ್ಕ | 53,000 | 17,000 |
| ಬಾರದಿರುವ ಮತ್ತು ಸಂದೇಹಾಸ್ಪದ ಸಾಲಗಳು | – | 4,666,867 |
| ವಿದೇಶಿ ವಿನಿಮಯದಲ್ಲಿನ ಏರಿಳಿತ | – | 249,311 |
| ಆಸ್ತಿ ಮಾರಾಟದಲ್ಲಿನ ನಷ್ಟ | 20,590 | 21,817 |
| ಸಂದೇಹಾಸ್ಪದ ಸಾಲ/ಮುಂಗಡಗಳಿಗೆ ಮುನ್ನೇರ್ಪಾಡು | 5,060,379 | 9,136,160 |
| **ಅಖೈರು ಶಿಲ್ಕು** | **818,447,377** | **751,130,579** |

### 27. ಹಿಂದಿನ ಅವಧಿಯ ವಸ್ತುಗಳು - (ಆದಾಯ) ಮತ್ತು ವೆಚ್ಚಗಳು

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| ಆದಾಯ ತೆರಿಗೆ | 196,027 | 4,143,520 |
| ಬಾಡಿಗೆ | 122,885 | |
| ಸಾಲಗಾರರು | 1,087,091 | |
| ಲೇಣಿದಾರರು | 550,479 | |
| ಮಾರಾಟ ತೆರಿಗೆ | 27,392 | |
| ಸವಕಳಿ | (195213) | (276843) |
| **ಅಖೈರು ಶಿಲ್ಕು** | **1,788,661** | **3,866,677** |

### 28. ಸ್ಥಗಿತಗೊಂಡ ಕಾರ್ಯಚಟುವಟಿಕೆಗಳು :

ಕಂಪನಿಯು ಜುಲೈ 2008ರಿಂದ ತನ್ನ ಹೆಚ್‌ಪಿ ಚಟುವಟಿಕೆಯನ್ನು ಸ್ಥಗಿತಗೊಳಿಸಿದೆ. ಎಎಸ್-17 ರೀತ್ಯ ಇದು ಪ್ರತ್ಯೇಕ ವಿಭಾಗವಾಗಿದೆ. ಪ್ರತ್ಯೇಕ ವಿಭಾಗದ ವರದಿ ಹೊಂದಿದೆ. ನಗದು ಆಧಾರದಲ್ಲಿ ಹೆಚ್‌ಪಿ ಚಟುವಟಿಕೆಯ ಬಡ್ಡಿ ಆದಾಯವನ್ನು ಕಂಪನಿ ಲೆಕ್ಕವಿಡುತ್ತದೆ. ಇಎಂಐ ಅವಧಿಯು 2013-14ಕ್ಕೆ ಕೊನೆಯಾಗಿದೆ. ಹೈರ್ ಪರ್ಚೇಸ್ ವಿಭಾಗದ ಆದಾಯ ಮತ್ತು ವೆಚ್ಚದ ವಿವರ ಈ ಕೆಳಕಂಡಂತಿದೆ. **(ರೂ.ಗಳಲ್ಲಿ)**

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| **ಆದಾಯ** | | |
| ಬಡ್ಡಿ | 1,141,116 | 2,398,836 |
| ಇತರೆ ಆದಾಯ | 4,154,963 | 5,975,778 |
| ಒಟ್ಟು ಆದಾಯ | 5,296,079 | 8,374,614 |
| ಕಾರ್ಯಚಟುವಟಿಕೆಯ ವೆಚ್ಚ | 4,987,388 | 6,431,367 |
| **ಸ್ಥಗಿತಗೊಳಿಸಿದ ಕಾರ್ಯಚಟುವಟಿಕೆಯಿಂದಾದ ಲಾಭ/(ನಷ್ಟ)** | **308,691** | **1,943,247** |
| ಸ್ಥಗಿತಗೊಳಿಸಿದ ಕಾರ್ಯಚಟುವಟಿಕೆಯಿಂದ ತೆರಿಗೆಗೆ ಒಳಪಡುವ ಆದಾಯ | 308,691 | 1,943,247 |
| ಸ್ಥಗಿತಗೊಳಿಸಿದ ಕಾರ್ಯಚಟುವಟಿಕೆಗೆ ತಗುಲಿದ ತೆರಿಗೆ ವೆಚ್ಚ | 106,832 | 672,519 |

### 29. ಪ್ರತಿ ಷೇರಿನ ಗಳಿಕೆ

ಈ ಕೆಳಗಿನ ಮಾಹಿತಿಯು ಮೂಲದಲ್ಲಿ ಹಾಗೂ ಸಾರಗುಂದಿದ ಇಪಿಎಸ್ ಲೆಕ್ಕಾಚಾರದಲ್ಲಿ ಬಳಸಿರುವ ಆದಾಯ ಮತ್ತು ಷೇರುಗಳ ಅಂಕಿ ಅಂಶದ ಬಗ್ಗೆ ಬೆಳಕು ಚೆಲ್ಲುತ್ತದೆ.

| ವಿವರಗಳು | 2017ರ ವರ್ಷಕ್ಕೆ | 2016ರ ವರ್ಷಕ್ಕೆ |
|---|---|---|
| ಮೂಲ ಇಪಿಎಸ್‌ಗೆ ಅವಧಿಗೆ ತೆಗೆದುಕೊಂಡ ಲಾಭ/(ನಷ್ಟ) | 366,570,284 | 360,581,863 |
| ಸಾರಗುಂದಿದ ಇಪಿಎಸ್‌ಗೆ ತೆಗೆದುಕೊಂಡ ಅವಧಿಗೆ ಲಾಭ/(ನಷ್ಟ) | 366,570,284 | 360,581,863 |
| ಮೂಲ ಇಪಿಎಸ್‌ಗೆ ಬಳಸಿದ ಷೇರುಗಳ ಸಂಖ್ಯೆ | 2,017,660 | 2,017,660 |
| ಸಾರಗುಂದಿದ ಇಪಿಎಸ್‌ಗೆ ಬಳಸಿದ ಷೇರುಗಳ ಸಂಖ್ಯೆ | 2,017,660 | 2,017,660 |

ನೀಡಬೇಕಾಗಿರುವ ಷೇರುಗಳ ಸಂಖ್ಯೆ ಮತ್ತು ಷೇರಿನ ನೀಡಿಕೆ ದರವನ್ನು ಇನ್ನೂ ನಿಗದಿಪಡಿಸದೇ ಇರುವುದರಿಂದ ಷೇರುಗಳ ಸಂಖ್ಯೆಯ ನಿರ್ಧಾರಣೆಗೆ ರೂ.22,55,81,779/- ಮೊತ್ತದ ಹಂಚಿಕೆ ಬಾಕಿ ಇರುವ ಷೇರು ಅರ್ಜಿ ಹಣವನ್ನು ಪರಿಗಣಿಸಿರುವುದಿಲ್ಲ.

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು

**30.** ಆವರಣದಲ್ಲಿನ ಸಂಖ್ಯೆಗಳು ಹಿಂದಿನ ವರ್ಷಕ್ಕೆ ಸಂಬಂಧಿಸಿದವುಗಳಾಗಿದ್ದು, ಅಗತ್ಯ ಕಡೆಗಳಲ್ಲಿ ಆ ಸಂಖ್ಯೆಗಳನ್ನು ಪುನರ್ ವಿಂಗಡಿಸಲಾಗಿದೆ.

**31.** ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್ (ಬಿಎಸಿಸಿ) ಹತ್ತಿರ ಹಂಚಿಕೆ ಮಾಡಿರುವ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಜೊತೆ ಜಮೀನಿನ ಸಂಬಂಧ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಇನ್ನೂ ಆಗಬೇಕಿದ್ದು, ಸಂಸ್ಥೆಯು ಕೆಐಎಡಿಬಿ ನೀಡಿರುವ ಸ್ವಾಧೀನ ಪ್ರಮಾಣಪತ್ರದ ಆಧಾರದ ಮೇಲೆ ಮಾಡಿರುವ ರೂ.52,11,063/- (ರೂ.52,11,063/-) ಮೊತ್ತದ ಜಮೀನಿನ ಗುತ್ತಿಗೆ ಹಿಡಿತ ವೆಚ್ಚವನ್ನು ಬಂಡವಾಳೀಕರಿಸಿದೆ.

**32.** ಎ) ನವಿ ಮುಂಬಯಿಯಲ್ಲಿರುವ 2520 ಚದರ ಮೀಟರುಗಳ ವಿಸ್ತೀರ್ಣದ ಜಮೀನಿನ ನಿವೇಶನದ ಸಂಬಂಧದಲ್ಲಿ ಪರವಾನಗಿದಾರರು (ಜಿಒಕೆ) ರಾಜ್ಯ ಅತಿಥಿ ಗೃಹ ನಿರ್ಮಾಣ ಮಾಡಬೇಕು ಎಂಬ ನಿಬಂಧನೆ ಮೇಲೆ ಸದರಿ ಜಮೀನಿಗೆ ಪ್ರವೇಶಿಸಲು ಮತ್ತು ಅದನ್ನು ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಸರ್ಕಾರದ (ಜಿಒಕೆ) ಜೊತೆ ಸಿಟಿ ಅಂಡ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಆಫ್ ಮಹಾರಾಷ್ಟ್ರ (ಸಿಐಡಿಸಿಒ) ಇವರು 'ಗುತ್ತಿಗೆ ಕರಾರು ಪತ್ರವನ್ನು' ಮಾಡಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಒಪ್ಪಂದ ಪತ್ರದಲ್ಲಿ ನಿಗದಿಪಡಿಸಿರುವ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಕಟ್ಟಡ ಪೂರ್ಣಗೊಂಡ ದಿನಾಂಕದಿಂದ 30 ವರ್ಷಗಳ ಅವಧಿಗೆ (ಪರಸ್ಪರ ಒಪ್ಪಿಗೆ ಮೇರೆಗೆ ವಿಸ್ತರಿಸಬಹುದಾಗಿದೆ) ನಿರ್ಮಾಣ ಮಾಲೀಕತ್ವ, ಕಾರ್ಯಾಚರಣೆ ವರ್ಗಾವಣೆ (ಬೂಟ್) ಆಧಾರದ ಮೇಲೆ ಕರ್ನಾಟಕ ಭವನ ನಿರ್ಮಾಣಕ್ಕೆ ಎಂಎಸ್‌ಐಎಲ್ ಜೊತೆ ಒಪ್ಪಂದ ಮಾಡಿಕೊಂಡಿದೆ.

ಬಿ) ಕರ್ನಾಟಕ ಭವನ ನಿರ್ಮಾಣ ಕಾರ್ಯದ ಸಂಬಂಧ ನವಿ ಮುಂಬಯಿ ಮುನಿಸಿಪಲ್ ಕಾರ್ಪೋರೇಷನ್ ಇವರಿಂದ ಕಂಪನಿಯು ಸ್ವಾಧೀನ ಪ್ರಮಾಣ ಪತ್ರ ಪಡೆದುಕೊಂಡಿದೆ ಮತ್ತು ಸ್ವಾಧೀನ ಪ್ರಮಾಣ ಪತ್ರಕ್ಕೆ ಸಂಬಂಧಿಸಿದ ಕೆಲಸ ಪೂರ್ಣಗೊಂಡಿದೆ. ಕಟ್ಟಡದ ಮುಖಭಾಗಕ್ಕೆ ಗ್ಲೇಜಿಂಗ್ ಕಾರ್ಯ ಮತ್ತು ಇತರೆ ವಿವಿಧ ಕೆಲಸಗಳು ಪ್ರಗತಿಯಲ್ಲಿವೆ. ಈ ಕೆಲಸಗಳು ಅಕ್ಟೋಬರ್ 2017ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ನವಿ ಮುಂಬಯಿಯಲ್ಲಿ ಕರ್ನಾಟಕ ಭವನ ನಿರ್ಮಾಣಕ್ಕೆ ಮಾಡಿರುವ ರೂ.33,82,29,174/-ರ ಮೊತ್ತವನ್ನು ಪ್ರಗತಿಯಲ್ಲಿರುವ ಬಂಡವಾಳ ಕಾರ್ಯವಾಗಿ ಪರಿಗಣಿಸಲಾಗಿದೆ.

**33.** ಸ್ಥಿರಾಸ್ತಿಗಳಲ್ಲಿ ಕ್ಲೆನ್ ಅಂಡ್ ಮಾರ್ಷಲ್ ಮ್ಯಾನುಫ್ಯಾಕ್ಚರರ್ಸ್ ಅಂಡ್ ಎಕ್ಸ್‌ಪೋರ್ಟರ್ಸ್ ಲಿಮಿಟೆಡ್‌ರವರಿಗೆ ಗುತ್ತಿಗೆ ನೀಡಲಾಗಿರುವ 86 ಕೆಪಾಸಿಟರ್ ಬ್ಯಾಂಕುಗಳು ಸೇರಿದ್ದು ಇವುಗಳ ಮೌಲ್ಯ ಈ ಅವಧಿಯಲ್ಲಿ ಸವಕಳಿಯಾಗಿದ್ದು, ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಲಿಖಿತ ಮೌಲ್ಯ ರೂ.86/- (ರೂ.86/-) ಆಗಿದೆ. ಗುತ್ತಿಗೆದಾರರು ನಿಗದಿಪಡಿಸಿದ ಗುತ್ತಿಗೆ ಬಾಡಿಗೆಯನ್ನು ಪಾವತಿ ಮಾಡಿಲ್ಲ ಮತ್ತು ಸಂಸ್ಥೆಯು ಈ ವಿಷಯವನ್ನು ಆರ್ಬಿಟ್ರೇಷನ್‌ಗೆ ವಹಿಸಿ ರೂ.8,09,63,895/- ಬಾಕಿ ಇರುವ ಗುತ್ತಿಗೆ ಬಾಡಿಗೆ ಮತ್ತು ಅದರ ಮೇಲೆ ತಗಲುವ ಬಡ್ಡಿಗೆ ಕೋರಿಕೆ ಮಂಡಿಸಿದೆ. ಏಕಮಾತ್ರ ಆರ್ಬಿಟ್ರೇಟರ್ 2009ರ ಅಕ್ಟೋಬರ್ 2ರಂದು ಸಂಸ್ಥೆಯ ಕೋರಿಕೆಯನ್ನು ಅಂಗೀಕರಿಸಿ 2ನೇ ಅಕ್ಟೋಬರ್ 2009ರಂದು ಏಕಪಕ್ಷೀಯ ತೀರ್ಪು ನೀಡಿ, ರೂ.35,05,60,211/- ಅನ್ನು ಗುತ್ತಿಗೆ ಬಾಡಿಗೆ ಮತ್ತು ಅದರ ಮೇಲಿನ ಬಡ್ಡಿಯ ಮೊತ್ತವಾಗಿ ತೀರ್ಪು ನೀಡಿರುತ್ತಾರೆ.

ಗುತ್ತಿಗೆದಾರರಾದ ಕ್ಲೆನ್ ಅಂಡ್ ಮಾರ್ಷಲ್ ಕಂಪನಿಯು, ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದಲ್ಲಿ ಕಣ್ಮರೆಯಾದ ಸಂಸ್ಥೆಗಳ ಪಟ್ಟಿಯಲ್ಲಿದ್ದು ಹಾಗೂ ಸದರಿ ಗುತ್ತಿಗೆದಾರರು ಬೇರೆ ಹಣಕಾಸಿನ ಸಂಸ್ಥೆಗಳಿಂದ ವಿವಿಧ ರೀತಿಯ ಸಾಲ ಪಡೆದಿರುವುದು ತಿಳಿದು ಬಂದಿದೆ. ಸಂಸ್ಥೆಯ ಅಭಿಪ್ರಾಯದ ಮೇರೆಗೆ, ಈ ಮೊತ್ತದ ವಸೂಲಿ ಸಾಧ್ಯತೆ ಇಲ್ಲದಿರುವುದರಿಂದ 2005-06ರಿಂದ ಈ ಗುತ್ತಿಗೆ ವಿಷಯದಲ್ಲಿ ಗುತ್ತಿಗೆ ಬಾಡಿಗೆಯನ್ನು ಪರಿಗಣಿಸಿರುವುದಿಲ್ಲ ಮತ್ತು 2004-05ರವರೆಗಿನ ರೂ.8,09,63,895/- (ರೂ.8,09,63,895/-) ಬಾಕಿಯಿರುವ ಗುತ್ತಿಗೆ ಬಾಡಿಗೆಯನ್ನು ಪ್ರಸಕ್ತದಲ್ಲಿ ಸಂಪೂರ್ಣವಾಗಿ ರದ್ದು ಮಾಡಲಾಗಿದೆ. ಸಂಸ್ಥೆಯು ತೀರ್ಪು ನೀಡಿದ ಮೊತ್ತದ ಖಚಿತವಿಲ್ಲದೆ ಇರುವುದರಿಂದ ಇದನ್ನು ಪರಿಗಣಿಸಿಲ್ಲ. ಆದಾಗ್ಯೂ ಸಂಸ್ಥೆಯು ಸಂಬಂಧಪಟ್ಟ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ನಿವೃತ್ತ ಅಧಿಕಾರಿಗಳು/ನೌಕರರ ವಿರುದ್ಧ ಕ್ರಿಮಿನಲ್ ದೂರು ಸಲ್ಲಿಸಿದೆ ಮತ್ತು ಕರ್ನಾಟಕ ವಿಧಾನಸಭೆಯ ಸಾರ್ವಜನಿಕ ಉದ್ಯಮಗಳ ಸಮಿತಿಯ ಆದೇಶದಂತೆ ಈ ವಿಷಯವನ್ನು ಸಿಓಡಿಗೆ ಒಪ್ಪಿಸಲಾಗಿದೆ.

**34. ಜಂಟಿ ಕಾರ್ಯಾಚರಣೆ ಒಪ್ಪಂದಗಳು :**

ಎಚ್‌ಎಎಲ್ ಮತ್ತು ಕಾನ್‌ಕಾರ್ಡ್ ಕಂಪನಿಗಳೊಂದಿಗೆ ಏರ್ ಕಾರ್ಗೋ ವ್ಯವಹಾರದ ಬಗ್ಗೆ ಕಂಪನಿಯು ಜಂಟಿ ಕಾರ್ಯಾಚರಣೆ ಒಪ್ಪಂದಗಳನ್ನು ಮಾಡಿಕೊಂಡಿತ್ತು. ಎಂಎಸ್‌ಐಎಲ್ ಮತ್ತು ಕಾನ್‌ಕಾರ್ಡ್ ಕಂಪನಿಗಳು ಜೆ ಡಬ್ಲ್ಯೂ ಎ ಯಿಂದ ಅನುಕ್ರಮವಾಗಿ ದಿನಾಂಕ : 31.03.2014 ಮತ್ತು 15.01.2011ರ ಅವಧಿಯಿಂದ ಈ ಒಪ್ಪಂದವನ್ನು ಹಿಂಪಡೆಯಲಾಗಿದೆ.

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

ಗೃಹಬಳಕೆಯೇತರ ವಲಯಕ್ಕೆ ಸೋಲಾರ್ ವಾಟರ್ ಹೀಟರ್ ಭೋಗ್ಯಕ್ಕೆ ನೀಡಲು ಇಎಸ್‌ಎಸ್‌ಪಿಎಲ್ ಕಂಪನಿಯ ಜೊತೆ ಜಂಟಿ ಸಹಯೋಗ ಒಪ್ಪಂದ ಮಾಡಿಕೊಂಡಿದೆ.

ಮೇಲೆ ತಿಳಿಸಿರುವ ಜಂಟಿ ಕಾರ್ಯಾಚರಣೆ/ಜಂಟಿ ಸಹಭಾಗಿತ್ವದ ಒಪ್ಪಂದದ ಅನ್ವಯ ತನ್ನ ವ್ಯವಹಾರ ಚಟುವಟಿಕೆ ನಡೆಸಲು ಸಂಪನ್ಮೂಲಗಳನ್ನು ಸಂಗ್ರಹಿಸಬೇಕಾಗಿದೆ ಮತ್ತು ಆಸ್ತಿಯ ಮಾಲೀಕತ್ವವು ಸಂಬಂಧಪಟ್ಟ ವ್ಯಕ್ತಿಗಳಿಗೆ ಸೇರಿರುವುದು.

ಜಂಟಿ ಕಾರ್ಯಾಚರಣೆ ಒಪ್ಪಂದದಿಂದ ಪ್ರಸಕ್ತ ಸಾಲಿನಲ್ಲಿನ ಆದಾಯ/(–)ನಷ್ಟಗಳ ಬಾಬ್ತು ಪಾಲು ಹೀಗಿದೆ :

| ವಿವರಗಳು | 2016-2017 | 2015-2016 |
|---|---|---|
| ಇಎಸ್‌ಎಸ್‌ಪಿಎಲ್ | ರೂ.31,751/- | ರೂ.31,803/- |

35. ಅಕೌಂಟಿಂಗ್ ಸ್ಟ್ಯಾಂಡರ್ಡ್ 15 – ''ನೌಕರರ ಸವಲತ್ತುಗಳು'': ಅಕೌಂಟಿಂಗ್ ಸ್ಟ್ಯಾಂಡರ್ಡ್‌ನಲ್ಲಿ ವಿವರಿಸಲಾದ ನೌಕರರ ಸೌಲಭ್ಯಗಳು ಕೆಳಕಂಡಂತಿವೆ :

**(ಎ) ಗ್ರಾಚ್ಯುಯಿಟಿ**

ಸಂಸ್ಥೆಯಲ್ಲಿ ನಿರೂಪಿತ ಸೌಲಭ್ಯ ಗ್ರಾಚ್ಯುಯಿಟಿ ಯೋಜನೆ ಜಾರಿಯಲ್ಲಿದೆ. ಯೋಜನೆಗೆ ಸಂಸ್ಥೆಯು ಹಣಕಾಸು ಒದಗಿಸುತ್ತಿದ್ದು, ಬೇರೊಂದು ಟ್ರಸ್ಟ್ ನಿರ್ವಹಿಸುತ್ತಿದೆ. ಇದರ ಹೊಣೆಗಾರಿಕೆಯನ್ನು ವಿಮಾಗಣನ ಮೌಲ್ಯಗಳ ಆಧಾರದ ಮೇಲೆ ಗುರುತಿಸಲಾಗಿದೆ.

(ಮೊತ್ತ ರೂ.ಗಳಲ್ಲಿ)

| | 2016-2017 | 2015-2016 |
|---|---|---|
| **ಎ) ಲಾಭ ಮತ್ತು ನಷ್ಟ ವಿವರದಲ್ಲಿ ಗುರುತಿಸಿದ ಖರ್ಚು ಬಾಬ್ತು:** | | |
| i) ಚಾಲ್ತಿ ಸೇವಾ ವೆಚ್ಚ | 25,82,955/- | 30,66,130/- |
| ii) ಬಡ್ಡಿ ವೆಚ್ಚ | 1,03,02,847/- | 1,04,34,768/- |
| iii) ನಿರೀಕ್ಷಿತ ಗಳಿಕೆ ಯೋಜನಾ ಆಸ್ತಿಗಳು | (1,03,48,615/-) | (1,03,64,626/-) |
| iv) ವರ್ಷದಲ್ಲಿ ಗುರುತಿಸಲಾದ ವಿಮಾಗಣನ (ಲಾಭ)/ನಷ್ಟ | 2,72,716/- | 21,174/- |
| **ಒಟ್ಟು (i ರಿಂದ iv)** | **28,09,903/-** | **31,57,446/-** |
| **ಬಿ) ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಲಾದ ಮೊತ್ತ:** | | |
| ವರ್ಷಾಂತ್ಯದಲ್ಲಿನ ಹೊಣೆಗಾರಿಕೆಗಳ ಇಂದಿನ ಮೌಲ್ಯ (i) | 13,09,17,987/- | 12,87,85,591/- |
| ವರ್ಷಾಂತ್ಯದಲ್ಲಿ ಕಂಡ ಯೋಜನಾ ಆಸ್ತಿಯ ಸೂಕ್ತ ಮೌಲ್ಯ (ii) | 13,24,28,155/- | 12,83,64,083/- |
| ನಿಧಿಯ ಸ್ಥಿತಿ (i) – (ii) | 15,10,168/- | (4,21,508/-) |
| ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಿದ ನಿವ್ವಳ ಆಸ್ತಿ/(ಹೊಣೆಗಾರಿಕೆ) | 15,10,168/- | (4,21,508/-) |
| **ಸಿ) ವಿವರಿಸಲಾದ ಸೌಲಭ್ಯ ಬಾಧ್ಯತೆಗಳ ಪ್ರಸಕ್ತ ಮೌಲ್ಯಗಳಲ್ಲಿನ ಬದಲಾವಣೆಗಳು:** | | |
| 01.04.2016ರಲ್ಲಿದ್ದಂತೆ ಬಾಧ್ಯತೆಗಳ ಇಂದಿನ ಮೌಲ್ಯ | 12,87,85,591/- | 13,04,34,598/- |
| ಚಾಲ್ತಿ ಸೇವಾ ವೆಚ್ಚ | 25,82,955/- | 30,66,130/- |
| ಬಡ್ಡಿ ವೆಚ್ಚ | 1,03,02,847/- | 1,04,34,768/- |
| ಪಾವತಿಸಿದ ಸೌಲಭ್ಯಗಳು | (1,10,26,122/-) | (1,51,71,079/-) |
| ಬಾಧ್ಯತೆಗಳ ವಿಮಾಗಣನ ಲೆಕ್ಕಾಚಾರಗಳು (ಲಾಭ)/ನಷ್ಟ | 2,72,716/- | 21,174/- |
| 31.3.2017ರಲ್ಲಿದ್ದಂತೆ ಬಾಧ್ಯತೆಯ ಪ್ರಸಕ್ತ ಮೌಲ್ಯ | 13,09,17,987/- | 12,87,85,591/- |

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

| ಡಿ) **ಯೋಜನಾ ಆಸ್ತಿಗಳ ಸೂಕ್ತ ಮೌಲ್ಯದಲ್ಲಿನ ಬದಲಾವಣೆ:** | | |
|---|---|---|
| 01.04.2016ರಲ್ಲಿದ್ದಂತೆ ಯೋಜನಾ ಆಸ್ತಿಯ ಸೂಕ್ತ ಮೌಲ್ಯ | 12,83,64,083/- | 12,84,54,174/- |
| ಯೋಜಿತ ಆಸ್ತಿಗಳ ನಿರೀಕ್ಷಿತ ಆದಾಯ | 1,03,48,615/- | 1,03,64,626/- |
| ಕೊಡುಗೆಗಳು<br>ನೀಡಿದ ಸೌಲಭ್ಯ | 47,41,579/-<br>(1,10,26,122) | 47,16,362/-<br>(1,51,71,079/-) |
| ಯೋಜನಾ ಆಸ್ತಿಗಳ ಮೇಲಿನ ವಿಮಾಗಣನ ಲೆಕ್ಕಾಚಾರಗಳ ಲಾಭ/ನಷ್ಟ | ಇಲ್ಲ | ಇಲ್ಲ |
| 31.03.2016ರಲ್ಲಿದ್ದಂತೆ ಯೋಜನಾ ಆಸ್ತಿಗಳ ಸೂಕ್ತ ಮೌಲ್ಯ | 13,24,28,155/- | 12,83,64,083/- |

**ಇ) ವಿಮಾಗಣನ ಊಹೆಗಳು:**

| ವಿಮಾಗಣನ ಮೌಲ್ಯಮಾಪನಗಳಿಗೆ ಬಳಸಿದ ಪ್ರಮುಖ ಊಹೆಗಳು : | | |
|---|---|---|
| i) ಮರಣ ಪ್ರಮಾಣ | ಎಲ್‌ಐಸಿ (94-96) | ಅಂತಿಮ ಮರಣ ಸೂಚಿ ತಃಖ್ತೆ |
| ii) ರಿಯಾಯ್ತಿ ದರ | 8% | 8% |
| iii) ವೇತನ ಹೆಚ್ಚಳ | 7% | 7% |

**(ಬಿ) ಪರಿಹಾರಿಕ ಗೈರುಹಾಜರಿಯ ನಗದೀಕರಣ:**

| ಗೈರುಹಾಜರಿ ಪರಿಹಾರ ವಿಮಾಗಣನ ನಗದೀಕರಣದ ವಿಮಾಗಣನ ಮೌಲ್ಯಮಾಪನ ಆಧಾರ: ಹೊಣೆಗಾರಿಕೆ 31.03.2017ರಲ್ಲಿದ್ದಂತೆ | | |
|---|---|---|
| ನಿವೃತ್ತಿ ವಯಸ್ಸು | 60 | 60 |
| ಜೀವಿತಾವಧಿ | ಭಾರತೀಯರ ಖಚಿತ ಜೀವಿತಾವಧಿ (2006-08) | ಅಂತಿಮ ಮರಣಸೂಚಿ ತಃಖ್ತೆ |
| ಬಡ್ಡಿ ದರ | ವಾರ್ಷಿಕ 7.31% | ವಾರ್ಷಿಕ 8% |
| ವೇತನ ಹೆಚ್ಚಳ | ವಾರ್ಷಿಕ 7% | ವಾರ್ಷಿಕ 7% |
| ತ್ಯಜಿಸುವ ದರ | ವಾರ್ಷಿಕ 1% | ವಾರ್ಷಿಕ 1% |
| ಪಾವತಿಸಬೇಕಾದ ಸೌಲಭ್ಯಗಳು | ಕಂಪನಿ ನಿಯಮದಂತೆ | |

**(ಸಿ) ಮರಣ ಪರಿಹಾರ ನಿಧಿ:**

ಗೈರು ಹಾಜರಿಯ ನಗದೀಕರಣದ ಪರಿಹಾರಕ್ಕೆ ವಿಮಾಗಣನ ಮೌಲ್ಯದ ಆಧಾರ : 31.03.2017ರಂತೆ ಹೊಣೆಗಾರಿಕೆ.

| ವಿವರಗಳು | 2016-17 |
|---|---|
| ಬಡ್ಡಿ ದರ | 7.31% |
| ಆಟ್ರೀಷನ್ ದರ | 1% |
| ನಿವೃತ್ತಿ ವಯಸ್ಸು | 60 ವರ್ಷಗಳು |
| ಕೊಡಬೇಕಾದ ಸೌಲಭ್ಯಗಳು | ಕಂಪನಿ ನಿಯಮಾನುಸಾರ |

**36.** ಗ್ರಾಹಕ ವಸ್ತುಗಳು ಮತ್ತು ವಾಹನಗಳ ಸರಬರಾಜಿಗೆ ಕಂಪನಿಯು "ಕಂತು-ಖರೀದಿ" ಒಪ್ಪಂದವನ್ನು ಸರ್ಕಾರಿ ನೌಕರರ (ಗ್ರಾಹಕರ) ಜತೆ ಮಾಡಿಕೊಂಡಿತ್ತು. ಗ್ರಾಹಕರಿಂದ ಪಾವತಿಯಾಗದ ಬಡ್ಡಿಯು ಸೇರಿದಂತೆ ಬಾಕಿಯಿರುವ ಕಂತಿನ ಮೊತ್ತವನ್ನು "ಗ್ರಾಹಕರ ಬಳಿಯ ದಾಸ್ತಾನು" ಎಂದು ತೋರಿಸಲಾಗಿದೆ. ಜುಲೈ 2008ರಿಂದ ಈ 'ಕಂತು-ಖರೀದಿ' ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ.

**37.** ಸಣ್ಣಪುಟ್ಟ ಸಾಲ ನೀಡಿಕೆದಾರರು, ಸಣ್ಣಪುಟ್ಟ ಸಾಲಗಾರರು, ಜಂಟಿ ಉದ್ಯಮಗಳು ಸೇರಿದಂತೆ ವ್ಯವಹಾರ ಪಾಲುದಾರರ ಲೆಕ್ಕದಲ್ಲಿನ ಬಾಕಿಗಳು ಮತ್ತು ಮುಂಗಡ/ಠೇವಣಿಗಳು ಹೊಂದಿಕೆ ಹಾಗೂ ದೃಢೀಕರಣಕ್ಕೆ ಒಳಪಟ್ಟಿವೆ. ಈ ಹೊಂದಿಕೆ ಹಾಗೂ ದೃಢೀಕರಣಗಳಿಂದ ಆಗಬಹುದಾದಂತಹ ಪರಿಣಾಮ ನಿವ್ವಳ ಲಾಭ ಮತ್ತು ಆಸ್ತಿ/ಹೊಣೆಗಾರಿಕೆಯ ಮೇಲೆ ಯಾವುದಾದರೂ ಇದ್ದರೆ ಖಚಿತಪಟ್ಟಿರುವುದಿಲ್ಲ.

**38.** ಮೂಲದಲ್ಲಿ ತೆರಿಗೆ ಕಡಿತ ಮಾಡದೆ ಇರುವ ರೂ.30,23,31,283/- (ರೂ.30,23,31,283/-) ಮತ್ತು ಅದರ ಮೇಲೆ ಬಡ್ಡಿ ರೂ.30,67,65,640/- (ರೂ.30,67,65,640/-)ಗೆ ಕಂಪನಿಗೆ ಆದಾಯ ತೆರಿಗೆ ಇಲಾಖೆ ಡಿಮಾಂಡ್ ಸೂಚನೆಗಳನ್ನು ಈ ಹಿಂದೆ ನೀಡಿದೆ. ಕಂಪನಿಯು ರೂ.24,05,81,902/- (ರೂ.24,05,81,902/-) ಅನ್ನು ಪಾವತಿಸಿ ಜೊತೆಗೆ ರೂ.36,17,49,381/- (ರೂ.36,17,49,381/-) ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು ನೀಡಿದೆ. ಹಣಕಾಸು ವರ್ಷ 2006-07ರಲ್ಲಿ ಬಾಕಿಯಿದ್ದ ರೂ.42,40,233/-ಗಳನ್ನು ಆದಾಯ ತೆರಿಗೆ ಮರು ಪಾವತಿಗೆ ಹೊಂದಿಸಿದೆ. ಈ ವಿಷಯವು ಸದ್ಯ ಸರ್ವೋಚ್ಚ ನ್ಯಾಯಾಲಯದಲ್ಲಿದೆ.

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

**39.** ಟಿಪ್ಪಣಿ 17ರಲ್ಲಿನ ಸೇರಿದ ಅಲ್ಪಾವಧಿ ಸಾಲ ಮತ್ತು ಮುಂಗಡಗಳಲ್ಲಿ ಕೆಳಕಂಡವು ಸೇರಿವೆ :

ಸೇವಾ ತೆರಿಗೆ ಇಲಾಖೆಯಿಂದ ವಾಪಸ್ ಬರಬೇಕಾದ ಸೇವಾ ತೆರಿಗೆ ಮೊತ್ತ ರೂ.77,23,849/- (ರೂ.77,23,849/-). 16.08.2002ರಿಂದ 30.06.2008ರ ಅವಧಿಗೆ ಬ್ಯಾಗೇಜ್ ಮತ್ತು ರಫ್ತು ಸರಕಿನ ಮೇಲೆ ಆಮದು ಮತ್ತು ರಫ್ತು ಸರಕು, ಗಮ್ಯ ತಲುಪುವ ವೆಚ್ಚ ಮತ್ತು ಸರಕು ಹಸ್ತಾಂತರ ವೆಚ್ಚಗಳನ್ನು ಪಡೆದ ಕಂಪನಿಯಿಂದ ಇಲಾಖೆಯು ರೂ.1,47,99,829/- (ರೂ.1,47,99,829/-)ಅನ್ನು ಪಾವತಿಸಲು ಕೇಳಿತು. ಮೇಲ್ಕಾಣಿಸಿದ ಕ್ಲೇಮಿನ ವಿರುದ್ಧ ಕಂಪನಿಯು ಕಮಿಷನರ್ (ಮೇಲ್ಮನವಿ) ಕೇಂದ್ರ ಅಬಕಾರಿ, ಬೆಂಗಳೂರು ಅವರ ಮುಂದೆ, ಮನವಿ ಸಲ್ಲಿಸಿದ್ದು, ಅವರು ರೂ.6,18,363/-ರಷ್ಟು ಪರಿಹಾರವನ್ನು ನೀಡಿದ್ದಾರೆ. ಕಂಪನಿಯು ರೂ.77,23,849/- ಮೊತ್ತವನ್ನು ಪಾವತಿಸಿದೆ. ಇಲಾಖೆ ಸಹಿತ ಅಬಕಾರಿ ಸುಂಕ ಮತ್ತು ಸೇವಾ ತೆರಿಗೆ ಅಪಿಲೇಟ್ ಟ್ರಿಬ್ಯೂನಲ್ (ಸಿಇಎಸ್‌ಟಿಎಟಿ)ರವರ ಮುಂದೆ ಕಮಿಷನರ್ (ಮೇಲ್ಮನವಿ) ಅವರ ರೂ.6,18,363/- ಪರಿಹಾರದ ವಿರುದ್ಧ ಮನವಿ ದಾಖಲಿಸಿದ್ದು, ಸಿಇಎಸ್‌ಟಿಎಟಿಯು ಕಮಿಷನರ್ (ಮೇಲ್ಮನವಿ)ಯವರು ತಿರಸ್ಕರಿಸಿದ ಮೂರು ಕೇಸ್‌ಗಳನ್ನು ಇಲಾಖೆಗೆ ವಾಪಸ್ ಕಳುಹಿಸಿದೆ. ಜುಲೈ 2012ರಲ್ಲಿ ಎಂ.ಎಸ್.ಐ.ಎಲ್., ಸಿ.ಇ.ಎಸ್.ಟಿ.ಎ.ಟಿ. ಮುಂದೆ ಮತ್ತೆ ಮನವಿಗಳನ್ನು ದಾಖಲಿಸಿದೆ. ಹೊಸ ಆದೇಶ ಹಾಗೂ ತಗಾದೆಗಾಗಿ ಕಾಯಲಾಗುತ್ತಿದೆ. ಸಿ.ಇ.ಎಸ್.ಟಿ.ಎ.ಟಿ. ಮುಂದೆ ಸಲ್ಲಿಸಿರುವ 2005-06ರಿಂದ 2008-09 ಅವಧಿಯ ಮನವಿಗಳು ಇನ್ನೂ ಬಾಕಿ ಇವೆ. ಬಡ್ಡಿ, ದಂಡ ಇತ್ಯಾದಿಗಳಿಲ್ಲದ ಒಟ್ಟು ಬೇಡಿಕೆಯ ಮೊತ್ತ 31.3.2009ರ ವೇಳೆಗೆ ರೂ.1,47,99,829/- (ರೂ.1,47,99,829/-) ಅನ್ನು ಪುಸ್ತಕಗಳಲ್ಲಿ ಒದಗಿಸಿಲ್ಲ.

**40.** ಶೇ.52 ಎಫ್‌ಇ ಅಂಶಗಳಿರುವ 50,000 ಎಂ.ಟಿ.ಯಷ್ಟು ಕಬ್ಬಿಣದ ಅದಿರನ್ನು ಸಂಗ್ರಹಿಸಲು ಒಂದು ಎಂ.ಟಿಗೆ ರೂ.1000/-ರಂತೆ ಚೀನಾಗೆ ರಫ್ತು ಮಾಡಲು ಮೆ॥ ಮಲ್ಲಪ್ಪ ಮಿನರಲ್ಸ್ ಇಂಡಸ್ಟ್ರಿ (MMI) ನೊಂದಿಗೆ ನವೆಂಬರ್ 13, 2009ರಂದು ಕಂಪನಿ ಒಂದು ಒಡಂಬಂಡಿಕೆ ಮಾಡಿಕೊಂಡಿತ್ತು. ಜೊತೆಗೆ ವಿದೇಶಿ ಖರೀದಿದಾರರಾದ ಫ್ರೇಮರಿ ಹೋಲ್ಡಿಂಗ್ಸ್ ಲಿಮಿಟೆಡ್ ಕಂಪನಿಯೊಂದಿಗೆ ಎಫ್.ಓ.ಬಿ. (F.O.B) ಗೋವಾ ಅನ್ನು ಪ್ರತಿ ಎಂ.ಟಿಗೆ US$ 28 (ರೂ.1,288/-) ಲೆಕ್ಕದಲ್ಲಿ ಸರಬರಾಜು ಮಾಡುವ ಒಪ್ಪಂದವನ್ನು ಮಾಡಿಕೊಂಡಿತ್ತು. ನೀಡಬಹುದಾದ ದರ ಪ್ರತಿ ಎಂ.ಟಿ.ಗೆ ರೂ.200/- ಸೇವಾ ಶುಲ್ಕ ಕಡಿತಗೊಳಿಸಿದ ನಂತರ ಕಂಪನಿಯು ಪ್ರತಿ ಎಂ.ಟಿ.ಗೆ. ರೂ.88/-ರಷ್ಟು ಲಾಭ ಮಾಡಿಕೊಂಡಿದೆ.

ಶೇ.52ರಷ್ಟು ಕಬ್ಬಿಣಾಂಶವಿರುವ ಅದಿರನ್ನು ಡಿಸೆಂಬರ್ 15, 2009ರ ಒಳಗೆ ರಫ್ತು ಮಾಡುವ ಮತ್ತು ನವೆಂಬರ್ 25-30ರ ನಡುವೆ ಲೇ-ಕ್ಯಾನ್ ಅವಧಿ ಯಲ್ಲಿ ಒಡಂಬಡಿಕೆ ಕಾರ್ಯಗತವಾಗುವುದನ್ನು ವಿದೇಶಿ ಖರೀದಿದಾರರ ಜೊತೆಗಿನ ಒಪ್ಪಂದ ಅನುವು ಮಾಡಿಕೊಟ್ಟಿತು. ಒಡಂಬಡಿಕೆಯಲ್ಲಿ ಯಾವುದೇ ತಗಾದೆಗಳಿದ್ದರೆ ಅದನ್ನು ಹಾಂಗ್-ಕಾಂಗ್‌ನಲ್ಲಿಯೇ ಪರಿಹರಿಸಿಕೊಳ್ಳಬೇಕೆಂಬುದು ನಿರ್ಬಂಧನೆಗಳಲ್ಲಿ ಒಂದಾಗಿತ್ತು.

ಎಂ.ಎಂ.ಐ. ಪರವಾಗಿ ರೂ.5 ಕೋಟಿಗೆ ಹಿಂಪಡೆಯಲಾಗದ ಸಾಲಪತ್ರವನ್ನು ಊರ್ಜಿತಗೊಳಿಸಲಾಗಿದೆ. ಅದಿರನ್ನು ಪಡೆಯಲು ಬೇಕಾದ ಮೊತ್ತವನ್ನು ಕ್ರೋಡೀಕರಿಸಲು 'ಸರಬರಾಜುದಾರು' ವಿಫಲರಾದ್ದರಿಂದ ಎಂ.ಎಸ್.ಐ.ಎಲ್.ನಿಂದ ಮುಂಗಡಕ್ಕೆ ಬೇಡಿಕೆ ಇರಿಸಿದ್ದರು. ಸರಕಿನ ಹಡಗು ಬಂದರಿಗೆ ಡಿಸೆಂಬರ್ 10, 2009ರಂದು ಬಂದು ನಿಂತುಬಿಟ್ಟಿದ್ದರಿಂದ 'ಡೆಮರೇಜ್' ಸುಸ್ತಿ ಸುಂಕವನ್ನು ತಪ್ಪಿಸಲು ಕಂಪನಿಯು ರೂ.2.15 ಕೋಟಿಯ ಮುಂಗಡವನ್ನು ಮುಂಚಿತವಾಗಿ ದಿನಾಂಕ ಬರೆದ ಚೆಕ್‌ಗಳ ಸ್ವೀಕರಣೆ ಮೇಲೆ ನೀಡಿತು ಮತ್ತು ಸ್ವತ್ತುಗಳ ಮೇಲೆ ಸಮದರ್ಶಿಯಾದ ಆಧಾರ ಒದಗಿಸುವ ಬದ್ಧತೆಯನ್ನು ಸಂಸ್ಥೆಯು ಪೂರ್ಣಗೊಳಿಸಲಾಗಲಿಲ್ಲ. ಅದಿರನ್ನು ಸರಬರಾಜು ಮಾಡಲು ಸತತವಾಗಿ ವಿಫಲವಾದ ಕಾರಣದಿಂದ ಕಂಪನಿಯು ಚೆಕ್‌ಗಳನ್ನು ಬ್ಯಾಂಕ್‌ನಲ್ಲಿ ನಗದೀಕರಣಕ್ಕೆ ನೀಡಿತು. ಆದರೆ ಅವು ಬ್ಯಾಂಕ್‌ನಿಂದ ತಿರಸ್ಕರಿಸಲಾಯಿತು. ಹೀಗಾಗಿ ನೆಗೋಷಿಯೆಬಲ್ ಇನ್ಸ್‌ಟ್ರುಮೆಂಟ್ಸ್ ಆಕ್ಟ್ 1881ರಡಿ 25.02.2010ರಂದು ಕ್ರಿಮಿನಲ್ ಮೊಕದ್ದಮೆ ಹೂಡಿತು ಮತ್ತು ಈಗ ದಾವೆಯು ಮುಖ್ಯ ಮೆಟ್ರೋಪಾಲಿಟನ್ ನ್ಯಾಯಾಲಯದಲ್ಲಿ ಉಳಿದಿದ್ದು, 'ಪುರಾವೆ' ಹಂತದಲ್ಲಿದೆ.

ಎಂ.ಎಂ.ಐ.ನವರಿಂದ ಅದಿರು ಸರಬರಾಜು ವಿಫಲವಾದ್ದರಿಂದ ಕಂಪನಿ ಇನ್ನೊಂದು ಸರಬರಾಜುದಾರರಾದ ಸರಮ್ ಎಕ್ಸ್‌ಪೋರ್ಟ್ಸ್ ಜೊತೆ ಅದಿರು ಸರಬರಾಜಿಗೆ ಅದೇ ನೀತಿ ನಿಯಮಗಳಿಗೆ ಅನ್ವಯವಾಗುವಂತಹ ಒಪ್ಪಂದ ಮಾಡಿಕೊಂಡಿತು. ಎಂ.ಎಸ್.ಐ.ಎಲ್. ನೂತನ ಸರಬರಾಜುದಾರರಿಗೆ ರೂ.4.5 ಕೋಟಿ ಮುಂಗಡ ನೀಡಿತು. 29 ದಿನಗಳ ವಿಳಂಬದ ನಂತರ 46,846.48 ಎಂ.ಟಿ.ಯಷ್ಟು ಅದಿರು ಹೊತ್ತ ಹಡಗು ಜನವರಿ 14, 2010ರಂದು ಪ್ರಯಾಣ ಬೆಳೆಸಿತು. ಭಾರತ ಸರ್ಕಾರ ಸುಂಕದ ದರ ಹೆಚ್ಚಿಸಿದ್ದರಿಂದ ಎಂ.ಎಸ್.ಐ.ಎಲ್. ಸೀಮಾ ಸುಂಕಕ್ಕೆ ರೂ.32,22,680/- ಅನ್ನು ಹೆಚ್ಚುವರಿಯಾಗಿ ತೆರಬೇಕಾಯಿತು. ಪರೀಕ್ಷಾ ವರದಿಗೆ ಕಾಯದೆ ಸಮಯಾವಧಿ ಮುಗಿದಿದ್ದರಿಂದ ಸರಮ್ ಎಕ್ಸ್‌ಪೋರ್ಟ್ಸ್‌ನ ಸರಬರಾಜನ್ನು ತುರ್ತಾಗಿ ಹಡಗಿಗೆ ತುಂಬಿಸಿ ಕಳುಹಿಸಲಾಯಿತು. ಆದರೆ ನಂತರ ಬಂದ ಪರೀಕ್ಷಾ ವರದಿಯಲ್ಲಿ ಕಬ್ಬಿಣಾಂಶ ಶೇ.49.37ರಷ್ಟು ಮಾತ್ರವಿದೆ ಎಂದು ಹೇಳಿತು.

''ಖರೀದಿದಾರರ'' ಹೆಸರಿನಲ್ಲಿ ಕಂಪನಿಯು ಇನ್‌ವಾಯ್ಸ್ ಅನ್ನು ತಯಾರಿಸಿ, ಎಲ್‌ಸಿ ಮೂಲಕ ಪತ್ರವ್ಯವಹಾರ ಕುದುರಿಸಲು ಪ್ರಯತ್ನಿಸಲಾಯಿತು. ಆದರೆ ಅವಧಿ ಮುಗಿದಿದ್ದರಿಂದ ಅದು ಸಾಧ್ಯವಾಗಲಿಲ್ಲ. ಹಾಂಗ್‌ಕಾಂಗ್ ಬಂದರನ್ನು ತಲುಪಿದ ಸರಕನ್ನು ಚೈನ ಗುಣಮಟ್ಟ ತನಿಖಾ ವರದಿಯಲ್ಲಿ 'ಖರೀದಿದಾರ' ಸರಕಿನಲ್ಲಿ 45.9% ಕಬ್ಬಿಣಾಂಶ ಇದೆ ಎಂಬ ಕಾರಣದಿಂದ ಕಳಪೆ ಎಂದು ತಿರಸ್ಕರಿಸಿದರು. ಆನಂತರ 'ಖರೀದಿದಾರ'ರಿಗೆ ಆ ಸರಕನ್ನು ಮಾರಿ ಬರುವ ಆದಾಯವನ್ನು ಪಡೆದುಕೊಳ್ಳಲು ಅಧಿಕಾರ ನೀಡಲಾಯಿತು. ಸಿಎಫ್‌ಆರ್ ಆಧಾರದ ಮೇಲೆ ಪ್ರತಿ ಎಂ.ಟಿ.ಗೆ ಅಮೆರಿಕ ಡಾಲರ್ 35ರಂತೆ ಅದಿರನ್ನು 23 ಮಾರ್ಚ್ 2010ರ ಇನ್‌ವಾಯ್ಸ್ ರೀತ್ಯ ಅಮೆರಿಕಾ ಡಾಲರ್ 16,39,626.80 ಪಡೆಯಲಾಯಿತು. ಈ ಹಣವನ್ನು ತನಗೆ ಭರ್ತಿ ಮಾಡಬೇಕೆಂದು ಎಂ.ಎಸ್.ಐ.ಎಲ್. ವಿದೇಶಿ ಖರೀದಿದಾರಲ್ಲಿ ಮನವಿ ಮಾಡಿತು. ಆದರೆ ಆ 'ಖರೀದಿದಾರ' 24,25,051.88 ಅಮೆರಿಕಾ ಡಾಲರ್ ಹಣವನ್ನು ತನ್ನ ಪಾಲೆಂಬ ಹಕ್ಕನ್ನು ಸಾಧಿಸಿತು. ಕಂಪನಿ ಅದನ್ನು ತಿರಸ್ಕರಿಸಿತು.

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

ಮೇಲ್ಕಾಣಿಸಿದ ಅಂಶಗಳನ್ನು ಪರಿಗಣಿಸಿ ವಿನಿಮಯ ದರ ಅಮೆರಿಕಾ ಡಾಲರ್ ಒಂದಕ್ಕೆ ರೂ.46 ದರದಂತೆ ಅಳವಡಿಸಿಕೊಂಡಿದೆ ಮತ್ತು ಗೋವಾದಿಂದ ಚೀನಾಗೆ ಸಾಗಾಣೆ ಶುಲ್ಕ ಅಮೆರಿಕಾ ಡಾಲರ್ 24ರಂತೆ ಕಂಪನಿ ನಿಷ್ಕರ್ಷಿಸಿ ಅದರಂತೆ ಮಾರಾಟ, ಮಾರಾಟದ ವೆಚ್ಚ, ಒಡಂಬಡಿಕೆಯ ಹಕ್ಕು ಮತ್ತು ಮಾರ್ಚ್ 31, 2010ರ ಅಂತ್ಯಕ್ಕೆ ಪುಸ್ತಕದಲ್ಲಿ ಮುನ್ನೇರ್ಪಾಡನ್ನು ಮಾಡಿತು. ಈ ಹಂತದಲ್ಲಿ 'ಖರೀದಿದಾರರಿಗೆ' ಚೀನಾದಲ್ಲಾದ ವೆಚ್ಚ ಮತ್ತು FEMA ಅಡಿ ಹೊಣೆಗಾರಿಕೆ ವೆಚ್ಚವನ್ನು ಪರಿಗಣಿಸಿಲ್ಲ. ಕಬ್ಬಿಣದ ಅದಿರು ಮಾರಾಟದ ಮೂಲಕ ಯುಎಸ್ ಡಾಲರ್ 5,02,071ರಷ್ಟನ್ನು ಸರಿಹೊಂದಿಸಿದ ನಂತರ ಫ್ರೇಮರಿ ಹೋಲ್ಡಿಂಗ್ಸ್ ನಿಯಮಿತವು ಅಮೆರಿಕ ಡಾಲರ್ ರೂಪದಲ್ಲಿ 19,74,545ರಷ್ಟು ಮೊತ್ತವನ್ನು ಕ್ಲೇಮು ಮಾಡಿದೆ (ರೂ.59.76 ಯುಎಸ್ ಡಾಲರ್ ವಿನಿಮಯ ದರದಲ್ಲಿ ರೂ.11,79,98,809/- ಪರಿಗಣಿಸುತ್ತಿದೆ. ಆರ್ಬಿಟ್ರೇಷನ್ ಅವಾರ್ಡ್‌ನಂತೆ ಎಂಎಸ್‌ಐಎಲ್ ಫ್ರೇಮರಿ ಹೋಲ್ಡಿಂಗ್ಸ್ ಲಿಮಿಟೆಡ್ 18,80,851 ಡಾಲರ್ (ರೂ.12,46,72,209/-) ಮತ್ತು ರೂ.2,77,72,466/-ಕ್ಕೆ ಬಡ್ಡಿ ಮೊತ್ತವನ್ನು ಪಾವತಿಸಲು ಬದ್ಧವಾಗಿದೆ.

ಕಂಪನಿಯು ಮಾರಾಟ ಮೊತ್ತ ಯುಎಸ್ ಡಾಲರ್ 17,07,100ರಿಂದ ಯುಎಸ್ ಡಾಲರ್ 16,39,627ಗೆ ಕಡಿತಗೊಳಿಸಿದ ನಂತರ ಯುಎಸ್ ಡಾಲರ್ 67,473 (ರೂ.44,72,429/-) ಹೊಣೆಗಾರಿಕೆಯನ್ನು ಅಂಗೀಕರಿಸಿದೆ (ಡಮೆರ್ರೇಜ್ ಮತ್ತು ಫ್ರೈಟ್‌ಗೆ ಸಂಬಂಧಿಸಿದ ಮೊತ್ತ ರೂ.10,68,47,359/-). ಯುಎಸ್ ಡಾಲರ್ 18,13,378ರ (ರೂ.66,285 ಯುಎಸ್ ಡಾಲರ್ ವಿನಿಮಯ ದರದಲ್ಲಿ ರೂ.12,01,99,779/-ಗಳನ್ನು ಪರಿಗಣಿಸಲಾಯಿತು). ಬಾಕಿ ಮೊತ್ತವು ಕಂಪನಿಯಿಂದ ವಿವಾದಿತವಾಗಿದ್ದು, ಸಾದಿಲ್ವಾರು ಹೊಣೆಗಾರಿಕೆಯಡಿ ತಿಳಿಸಿದೆ. ಕಂಪನಿಯು ಆರ್ಬಿಟ್ರೇಷನ್ ತೀರ್ಪನ್ನು ರದ್ದುಪಡಿಸುವಂತೆ ಇಂಡಿಯನ್ ಆರ್ಬಿಟ್ರೇಷನ್ ಆಕ್ಟ್‌ನ ಸೆಕ್ಷನ್ 34ರನ್ವಯ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಅದು ವಿಚಾರಣೆ ಹಂತದಲ್ಲಿದೆ. ಮೇಲ್ಕಂಡ ವ್ಯವಹರಣೆಗಳ ಸಂಬಂಧ ಕರ್ನಾಟಕ ವಿಧಾನಸಭೆಯ ಸಾರ್ವಜನಿಕ ಉದ್ಯಮಗಳ ಮೇಲಿನ ಸಮಿತಿಯು ಅವ್ಯವಹಾರಗಳ ಬಗ್ಗೆ ವರದಿ ಸಲ್ಲಿಸಿದೆ. ಕಂಪನಿಯು ವ್ಯಾಪ್ತಿಯ ಪೊಲೀಸ್ ಠಾಣೆಗೆ ಕ್ರಿಮಿನಲ್ ಮೊಕದ್ದಮೆ ಸಲ್ಲಿಸಿದೆ ಮತ್ತು ಪೊಲೀಸರು ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಈ ಕ್ರಿಮಿನಲ್ ದೂರಿನ ಸಂಬಂಧ ಪೊಲೀಸರು ಆರೋಪ ಪಟ್ಟಿ ಸಿದ್ದಪಡಿಸಿದ್ದು, ಎಸಿಎಂಎಂ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ.

**41.** ಕಂಪನಿಯು 1997-98ರಲ್ಲಿ ಕರ್ನಾಟಕ ಸರ್ಕಾರದಿಂದ ರೂ.5,00,00,000/- (ರೂ.5,00,00,000/-) ಮೊತ್ತದ ಸಾಲ ಪಡೆದಿತ್ತು. ಅದಕ್ಕೆ ಕಂಪನಿಯು 31.03.2004ರವರೆಗೆ ರೂ.5,27,42,466/- ಮೊತ್ತದ ಬಡ್ಡಿ ಪಾವತಿಸಿದೆ.

ಮೇಲ್ಕಾಣಿಸಿದ ಮೊತ್ತ ರೂ.15,09,48,779/-ಅನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಬೇಕೆಂದು ಕಂಪನಿ 2004-05ರ ಹಣಕಾಸು ವರ್ಷದಲ್ಲೇ ಕರ್ನಾಟಕ ಸರ್ಕಾರಕ್ಕೆ ಕೇಳಿಕೊಂಡಿತ್ತು. 17.09.2004ರಲ್ಲಿ ಸರ್ಕಾರದ ಹಣಕಾಸು ಇಲಾಖೆ ಈ ಪ್ರಸ್ತಾವನೆಗೆ ಹಸಿರು ನಿಶಾನೆ ನೀಡಿತ್ತು. ಪಿಂಚಣಿ, ಸಣ್ಣ ಉಳಿತಾಯ ಸ್ವತ್ತುಗಳ ನಿರ್ವಹಣೆ ನಿರ್ದೇಶನಾಲಯ ಇಲಾಖೆ ದಿನಾಂಕ: 20.07.2012ರ ತನ್ನ ಪತ್ರದಲ್ಲಿ ಕಂಪನಿಯ ಪ್ರಸ್ತಾವನೆಯನ್ನು ಅನುಮೋದಿಸಿತ್ತು. ಈ ಮೊತ್ತವನ್ನು ಷೇರು ಅರ್ಜಿ ಹಣದಲ್ಲಿ ಸೇರಿಸಲಾಗಿದೆ.

ಕರ್ನಾಟಕ ಸರ್ಕಾರದಿಂದ ಯಾವುದೇ ನಿಶ್ಚಿತ ಕೋರಿಕೆಯಿಲ್ಲದಿರುವುದರಿಂದ ಸಂಸ್ಥೆಯು ಆರ್ಥಿಕ ವರ್ಷ 2004-05ರಿಂದ ಸಾಲದ ಮೇಲಿನ ಬಡ್ಡಿಗೆ ಮುನ್ನೇರ್ಪಾಡು ಮಾಡಿರುವುದಿಲ್ಲ (ಕರ್ನಾಟಕ ಸರ್ಕಾರವನ್ನು ಸಂಸ್ಥೆಯು ಪರಿವರ್ತನೆಗಾಗಿ ಪ್ರಸ್ತಾಪಿಸಿದ ಆರ್ಥಿಕ ವರ್ಷದ ನಂತರ). ಪುಸ್ತಕಗಳಲ್ಲಿ ಮುನ್ನೇರ್ಪಾಡು ಮಾಡದೇ ಇರುವ ಈ ವರ್ಷದ ಬಡ್ಡಿಯ ಮೊತ್ತ ರೂ.50 ಲಕ್ಷಗಳು ಮತ್ತು 2003-04ರಲ್ಲಿ ಸರ್ಕಾರಕ್ಕೆ ಬಾಕಿ ಮೊತ್ತವನ್ನು ಈಕ್ವಿಟಿಗೆ ಪರಿವರ್ತಿಸಲು ಪ್ರಸ್ತಾಪಿಸಿದ ಸಮಯದಿಂದ ಮೊತ್ತವು ದಂಡದ ಬಡ್ಡಿ, ಯಾವುದಾದರೂ ಇದ್ದರೆ ಹೊರತುಪಡಿಸಿ ರೂ.6.50 ಕೋಟಿಗಳು (ರೂ.6.00 ಕೋಟಿಗಳು).ಆಗಿರುವುದು.

**42.** (ಎ) ಷೇರು ಅರ್ಜಿ ಹಣದಲ್ಲಿ ಸೇರಿರುವ ಮೊತ್ತದಲ್ಲಿ ಕರ್ನಾಟಕ ಸರ್ಕಾರಕ್ಕೆ ಸರಿಸಮನಾಗಿ ವಿತರಿಸಲ್ಪಡುವ ಬಾಕಿ ಮೊತ್ತಗಳು ಸೇರಿವೆ. ಜಿಒಕೆ ಅಥವಾ ಕೆಎಸ್‌ಐಐಡಿಸಿ, ಧಾರಕ ಕಂಪನಿಗೆ ವಿತರಿಸುವ ಷೇರುಗಳ ತೀರ್ಮಾನವು ಜಿಒಕೆಯಲ್ಲಿ ಬಾಕಿಯಿದೆ.

(ಬಿ) ಇತರೆ ಹೊಣೆಗಾರಿಕೆಯಲ್ಲಿ ಸರ್ಕಾರದ ಹಲವು ಇಲಾಖೆಗಳಿಗೆ ಆಮದಾದ ಸಿಮೆಂಟ್ ಸರಬರಾಜು ಗುತ್ತಿಗೆ ಸಂಬಂಧ ಸ್ವೀಕರಿಸಿರುವ ಮುಂಗಡದ ಮೊತ್ತ ರೂ.2,10,46,347/- (ರೂ.2,10,46,347/-) ಸೇರಿದೆ.

**43.** ಎ) ಐದು ಮದ್ಯ ತಯಾರಕರು ಮಾಡುವ ಮದ್ಯ ಮಾರಾಟದಲ್ಲಿ ಕಮಿಷನ್‌ಗೆ ಎಂಎಸ್‌ಐಎಲ್ ಅರ್ಹ ಎಂದು 13.02.2003ರಂದು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ತನ್ನ ಆದೇಶದಲ್ಲಿ ತಿಳಿಸಿದೆ. ಕರ್ನಾಟಕದ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಅಂತಿಮಗೊಳಿಸುವ ಅಧಿಕಾರಿಯನ್ನು ನೇಮಕ ಮಾಡಿದೆ ಮತ್ತು ಇದನ್ನು ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿದೆ. ಅವರು ಸ್ಕೋಲ್ ಬ್ರೆವರೀಸ್ ನಿಯಮಿತ (ಹಿಂದಿನ ಮೈಸೂರು ಬ್ರೆವರೀಸ್ ನಿಯಮಿತ) ಅವರಿಂದ ರೂ.25.18 ಕೋಟಿ ಬಾಕಿ ಕಮಿಷನ್ ಪಡೆಯಲು ಅರ್ಹವಾಗಿದ್ದು, ಟಿಪ್ಪಣಿ 2-ಡಿ (ii) (ಬಿ) ರಲ್ಲಿನ ಮೂಡಿಸಿರುವ ಲೆಕ್ಕಪತ್ರದ ನೀತಿ ಅನುಸಾರ ಹಣ ಒದಗುವುದರ ಬಗ್ಗೆ ಖಚಿತವಿಲ್ಲದೆ ಇರುವುದರಿಂದ ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ಬಿ) ಹಿಂದಿನ ವರ್ಷದಲ್ಲಿ ಮೆ॥ ವೆಸ್ಕೇರ್ (ಇಂಡಿಯಾ) ಲಿಮಿಟೆಡ್ ಮಾಡಿದ ಹಕ್ಕು ಕೇಳಿಕೆಯನ್ನು ರೂ.1,19,23,000/-ರ ಮೊತ್ತದ ಸಂಭಾವ್ಯ ಹೊಣೆಗಾರಿಕೆ ಅನ್ವಯ ಕಂಪನಿ ಪ್ರಕಟಿಸಿದೆ. ಕಂಪನಿಯು 2015-16ರ ಅವಧಿಯಲ್ಲಿ ವೆಸ್ಕೇರ್ ವಿರುದ್ಧ ಮಧ್ಯಸ್ಥಿಕೆ ತೀರ್ಪಿಗಾಗಿ ದಾವೆ ಹೂಡಿದೆ. ಮಧ್ಯಸ್ಥಿಕೆದಾರರು 27.04.2016ರಂದು ಮಧ್ಯಸ್ಥಿಕೆ ತೀರ್ಪನ್ನು ವಿಲೇವಾರಿ ಮಾಡಿರುವರು. ಮಧ್ಯಸ್ಥಿಕೆದಾರರು 31.03.2009ರವರೆಗೆ ರೂ.155.59 ಲಕ್ಷಗಳ ಮೊತ್ತದ ಬಡ್ಡಿ ಜೊತೆಗೆ ಗುತ್ತಿಗೆ ಬಾಡಿಗೆಯ ಬಗ್ಗೆ ಕಂಪನಿ ಮಾಡಿರುವ ಕಂಪನಿಯ ಹಕ್ಕು ಕೇಳಿಕೆಯನ್ನು ಅಂಗೀಕರಿಸಿದೆ ಮತ್ತು ರೂ.239.37ಲಕ್ಷಗಳ ಉಳಿಕೆ ಹಕ್ಕನ್ನು ತಿರಸ್ಕರಿಸಿದೆ. (ಸಂಭಾವ್ಯ ಹೊಣೆಗಾರಿಕೆಯಲ್ಲಿನ ಟಿಪ್ಪಣಿ ನಂ.52 ಕ್ರ.ಸಂ.9 ನೋಡಿ)

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

ತೀರ್ಪು ನೀಡುವಾಗ ಮಧ್ಯಸ್ಥಿಕೆದಾರರು ವಿಂಡ್‌ಮಿಲ್ ಟರ್ಬೈನ್ಸ್‌ನ ವಿಲೇವಾರಿಯನ್ನು ಪರಿಗಣಿಸದಿದ್ದರೂ ಗುತ್ತಿಗೆಯ ಒಪ್ಪಂದದ ಅನುಸಾರ ಇಲ್ಲದ ಭದ್ರತಾ ಠೇವಣಿಯಿಂದ ಎಂಎಸ್‌ಐಎಲ್‌ನ ಹಾಗೂ ಮೆ॥ ವಾತಾ ಸ್ಮಾರ್ಟ್ ಲಿಮಿಟೆಡ್‌ನ ಬಾಕಿಗಳಿಗೆ ಹೊಂದಾಣಿಕೆ ಮಾಡುವಂತೆ ತೀರ್ಪು ನೀಡಿದೆ.

ಕಂಪನಿ ವಕೀಲರ ಅಭಿಪ್ರಾಯದ ಮೇರೆಗೆ, ಮಧ್ಯಸ್ಥಿಕೆದಾರರ ತೀರ್ಪನ್ನು ಪ್ರಶ್ನಿಸಿ ಕಂಪನಿಯು ಮದ್ರಾಸ್ ಹೈಕೋರ್ಟ್‌ನಲ್ಲಿ ದಿನಾಂಕ:27.04.2016ರಂದು ಮೂಲ ಮೊಕದ್ದಮೆ ಅರ್ಜಿ ಸಲ್ಲಿಸಿದೆ. ಸದರಿ ವಿಚಾರವು ಮದ್ರಾಸ್ ಹೈಕೋರ್ಟ್‌ನಲ್ಲಿ ವಿಚಾರಣೆಯಲ್ಲಿದೆ. ಕಳಚಿ ಹಾಕಿರುವ ವಿಂಡ್‌ಮಿಲ್ ಟರ್ಬೈನ್ಸ್‌ನ ತಪಶೀಲು ಪಡೆಯಲು ಏಕಪಕ್ಷೀಯವಾಗಿ ವೆಸ್ಕೇರ್‌ಗೆ ಹೈಕೋರ್ಟ್ ಅನುಮತಿ ಕೊಟ್ಟಿರುವ ಮತ್ತೊಂದು ಸಂಬಂಧಪಟ್ಟ ವಿಚಾರದಲ್ಲಿ ಕೋರ್ಟ್ ಹೊರಡಿಸಿರುವ ಆದೇಶಗಳನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿದೆ. ವಿಚಾರಣೆಯ ಮುಂದಿನ ದಿನಾಂಕವನ್ನು ಇನ್ನೂ ತಿಳಿಸಿರುವುದಿಲ್ಲ. ಮದ್ರಾಸ್ ಹೈಕೋರ್ಟ್‌ನಲ್ಲಿ ಹೂಡಿರುವ ಮೊಕದ್ದಮೆಯ ತೀರ್ಪಿನ ಖಚಿತತೆಯಿಲ್ಲದ್ದರಿಂದ ಕಂಪನಿಯು ಹಕ್ಕುಗಳನ್ನು ಪುಸ್ತಕಗಳಲ್ಲಿ ದಾಖಲಿಸಿರುವುದಿಲ್ಲ.

**44.** ಟಿಪ್ಪಣಿ 11ರಲ್ಲಿಯ ಹೂಡಿಕೆಯಲ್ಲಿ ಫುಡ್ ಕರ್ನಾಟಕ ಲಿಮಿಟೆಡ್ ಹೊಂದಿರುವ ರೂ.10ರ ಬೆಲೆಯ ವೆಚ್ಚದ 50,000 ಷೇರುಗಳು ಸೇರಿವೆ. ಕರ್ನಾಟಕ ಸರ್ಕಾರ ದಿನಾಂಕ : 05.03.2011ರಂದು ನೀಡಿದ ತನ್ನ ಆದೇಶ ನಂ. AHD 172 AFT 2010 ರೀತ್ಯ ಷೇರುಗಳನ್ನು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣಾ ಮತ್ತು ರಫ್ತು ನಿಗಮಕ್ಕೆ ವರ್ಗಾಯಿಸಲು ಆದೇಶಿಸಿದೆ. ಇದನ್ನು ಕಂಪನಿಯ 30.06.2011ರ ಮಂಡಳಿ ಸಭೆಯಲ್ಲೂ ಅನುಮೋದಿಸಲಾಗಿದೆ. ವರ್ಗಾವಣೆ ದರದ ನಿಷ್ಕರ್ಷೆಯಾಗಿರದ ಕಾರಣ ವರ್ಗಾವಣೆ ತಡೆಯಾಗಿದೆ.

**45.** ಇತರೆ ಚಾಲ್ತಿ ಹೊಣೆಗಾರಿಕೆಯಲ್ಲಿ ಎಂಎಸ್‌ಐಎಲ್ ನೌಕರರಿಂದ ಮರಣ ಪರಿಹಾರ ನಿಧಿಗೆ ಅನುಕ್ರಮವಾಗಿ ನೀಡಿರುವ ರೂ.76,40,692/- (ರೂ.85,85,910/-) ಮತ್ತು (ರೂ.27,51,855/-) (ರೂ.26,28,415/-) ಸೇರಿದೆ. ಈ ಯೋಜನೆಯಂತೆ ನೌಕರನು ತನ್ನ ಸೇವಾ ಕಾಲದಲ್ಲಿ ಮೃತನಾದರೆ ಮೃತನ ವಾರಸುದಾರರು ರೂ.1,00,000/-ಪಡೆಯಲು ಅರ್ಹರಾಗಿರುತ್ತಾರೆ. ಅದೇ ರೀತಿ ನೌಕರನು ನಿವೃತ್ತನಾದಲ್ಲಿ ಅಥವಾ ರಾಜೀನಾಮೆ ನೀಡಿ ಕಂಪನಿಯನ್ನು ತ್ಯಜಿಸಿದಲ್ಲಿ ಆತನು ತಾನು ನೀಡಿರುವ ಪಾಲನ್ನು ಮಾತ್ರವಲ್ಲದೆ ಈ ಯೋಜನೆಯ ಕಂಪನಿಯ ಪಾಲನ್ನು ಪಡೆಯಲು ಅರ್ಹನಾಗಿರುತ್ತಾನೆ.

**46.** ಹಣಕಾಸು ವರ್ಷದ ಕೊನೆಯ ದಿನದಲ್ಲಿದ್ದಂತೆ ರೂ.45,307/- (ರೂ.45,307/-) ಮೌಲ್ಯದ ರವಾನೆದಾರರಿಗೆ ರವಾನೆಯಾಗಬೇಕಾದ ಸರಕನ್ನು ಕಂಪನಿ ಹೊಂದಿದೆ.

**47.** ಕೆಳಕಂಡವುಗಳಿಗೆ ಕೊಡುಗೆ ಸೇರಿದಂತೆ ಭವಿಷ್ಯನಿಧಿ ಮತ್ತಿತರ ನಿಧಿಗೆ ಕೊಡುಗೆ:

i) ಮರಣ ಪರಿಹಾರ ನಿಧಿ ರೂ.3,19,618/- (ರೂ. 3,22,304/-)

ii) ಗ್ರಾಚ್ಯುಯಿಟಿ ರೂ.5,30,824/- (ರೂ.31,73,477/-)

iii) ವಯೋ ನಿವೃತ್ತಿ ರೂ.28,46,730/- (ರೂ.38,85,036/-)

iv) ಭವಿಷ್ಯನಿಧಿಗೆ ಕಂಪನಿಯ ಪಾಲು ರೂ.1,05,48,540/- (ರೂ.1,30,68,043/-)

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

**48.** 2ನೇ ಅಕ್ಟೋಬರ್ 2006ರಲ್ಲಿ ಜಾರಿಗೆ ಬಂದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆ ಅಭಿವೃದ್ಧಿ (ಎಂಎಸ್‌ಎಂಇಡಿ) ಕಾಯ್ದೆ 2006ರ ಅನ್ವಯ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಬಗ್ಗೆ ಕೆಲವೊಂದು ಪ್ರಕಟಣೆಗಳನ್ನು ಮಾಡಬೇಕಿತ್ತು. 2016-17ನೇ ಹಣಕಾಸು ವರ್ಷದಲ್ಲಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆ ಅಭಿವೃದ್ಧಿ ಕಾಯ್ದೆ 2006ರ ಪ್ರಕರಣ 22ರಂತೆ ಕಂಪನಿಯು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಗುರುತಿಸಿದೆ.

| ವಿವರಗಳು | 31.03.2017 ರಲ್ಲಿದ್ದಂತೆ | 31.03.2016 ರಲ್ಲಿದ್ದಂತೆ |
|---|---|---|
| ವರ್ಷಾಂತ್ಯದಲ್ಲಿದ್ದಂತೆ ಯಾವುದೇ ಸರಬರಾಜುದಾರರಿಗೆ ಪಾವತಿಯಾಗದೆ ಉಳಿದಿರುವ ಅಸಲು ಮೊತ್ತ ಮತ್ತು ಬಡ್ಡಿ,<br>★ ಅಸಲು ಮೊತ್ತ<br>★ ಎಂಎಸ್‌ಎಂಇಡಿ ಕಾಯಿದೆ, 2006ರಡಿ ಪಾವತಿಸಬೇಕಾದ ಬಡ್ಡಿ<br>★ ಒಟ್ಟು | -<br>-<br>ರೂ.15,920/-<br>ರೂ.15,920/- | -<br>-<br>ರೂ.16,609/-<br>ರೂ.16,609/- |
| 2017ರ ಮಾರ್ಚ್ 31ಕ್ಕೆ ಕೊನೆಗೊಂಡ ಲೆಕ್ಕಪತ್ರದ ವರ್ಷದಲ್ಲಿ ಯಾವುದೇ ಸರಬರಾಜುದಾರರಿಗೆ ನಿಗದಿತ ದಿನದ ನಂತರ ಮಾಡಿದ ಪಾವತಿ ಮೊತ್ತದೊಂದಿಗೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯಿದೆ, 2006ರ ಸೆಕ್ಷನ್ 16ರ ನಿಯಮಗಳನ್ವಯ ಕಂಪನಿಯು ಪಾವತಿಸಿರುವ ಬಡ್ಡಿ ಮೊತ್ತ | ಇಲ್ಲ | ಇಲ್ಲ |
| ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯಿದೆ 2006ರಡಿ ಸೂಚಿಸಲ್ಪಟ್ಟ ಬಡ್ಡಿ ಸೇರಿಸದೇ ಪಾವತಿ ಮಾಡುವಲ್ಲಿ ವಿಳಂಬ ಆದ ಅವಧಿಗೆ ಪಾವತಿಸಬೇಕಾದ ಬಡ್ಡಿ ಮೊತ್ತ (ವರ್ಷದಲ್ಲಿ ನೇಮಕವಾದ ದಿನದ ನಂತರ ಪಾವತಿಸಲ್ಪಟ್ಟಿದ್ದರೆ) * | ರೂ.15,920/- | ರೂ.16,609/- |
| ಲೆಕ್ಕಪತ್ರ ವರ್ಷ - ಮಾರ್ಚ್ 2017ರ ಅಂತ್ಯಕ್ಕೆ ಸಂಚಯನಗೊಂಡ ಬಡ್ಡಿ ಮತ್ತು ಪಾವತಿಸದೆ ಬಾಕಿಯಿರುವ ಮೊತ್ತ * | ರೂ.15,920/- | ರೂ.16,609/- |
| ಇನ್ನೂ ಪಾವತಿಗೆ ಬಾಕಿಯಿರುವ ಮತ್ತು ಮುಂದಿನ ವರ್ಷಗಳಲ್ಲಿ ಮೇಲಿನಂತೆ ಪಾವತಿ ಮಾಡಬೇಕಿರುವ ದಿನಾಂಕದವರೆಗೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ 2006*ರ ಪ್ರಕರಣ 23ರ ಅನ್ವಯ ಕಳೆದುಕೊಳ್ಳಬೇಕಾದ ಖರ್ಚು ಆಗಿ ಅಂಗೀಕರಿಸದ ಉದ್ದೇಶಕ್ಕಾಗಿ ಸಣ್ಣ ಉದ್ಯಮಕ್ಕೆ ವಾಸ್ತವವಾಗಿ ಪಾವತಿಸಿದ ಮೊತ್ತ | ರೂ.15,920/- | ರೂ.16,609/- |

* ಮೇಲಿನ ಮಾಹಿತಿಯನ್ನು ಕಂಪನಿಯು ಎಂಎಸ್‌ಎಂಇ ಎಂದು ಗುರುತಿಸಿರುವ ವ್ಯಕ್ತಿಗಳಿಗೆ ಆ ಪ್ರಮಾಣದವರೆಗೆ ಸಲ್ಲಿಸಿದೆ. ಇದು ವ್ಯವಹಾರ ಕ್ರಮದ ಭಾಗವಾಗಿ ನಿವ್ವಳ ರಿಯಾಯಿತಿ/ಮನ್ನಾ ಆಗಿರುವುದು. ಅದನ್ನು ಲೆಕ್ಕಪರಿಶೋಧಕರು ಪರಿಗಣಿಸಿರುವರು.

**49.** ರೂ.34,02,40,465/- (ರೂ.31,31,72,589/-) ರ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಲ್ಲಿ ಈ ಕೆಳಕಂಡವು ಒಳಗೊಂಡಿರುವವು:

i) ನವಿ ಮುಂಬೈನಲ್ಲಿ ಬಿಲ್ಡ್ ಓನ್ ಆಪರೇಟ್ ಟ್ರಾನ್ಸ್‌ಫರ್ (BOOT) ಅಡಿ ರೂ.33,82,29,174/- (ರೂ.31,21,73,798/- )

ii) ಕಲಬುರಗಿಯಲ್ಲಿ ಉಗ್ರಾಣ ನಿರ್ಮಾಣ ರೂ.13,39,496/- (ರೂ.3,26,996/-,)

iii) ಧಾರವಾಡದಲ್ಲಿ ಉಗ್ರಾಣ ನಿರ್ಮಾಣ ರೂ.4,65,672/- (ರೂ.4,65,672/-)

iv) ಕನ್ನಿಂಗ್‌ಹ್ಯಾಂ ರಸ್ತೆಯಲ್ಲಿ ಕಚೇರಿ ನಿರ್ಮಾಣ ರೂ.2,06,123/- (ರೂ.2,06,123/-)

**50.** ಮೌಲ್ಯ ನಿಖರಗೊಳಿಸದ 16 ಸಂಖ್ಯೆಯ (16 ಸಂಖ್ಯೆಯ) ವರ್ಣ ಚಿತ್ರಗಳನ್ನು ಕಂಪನಿ ಹೊಂದಿದೆ.

## ಲೆಕ್ಕಪತ್ರದ ಭಾಗವಾಗಿರುವ ಟಿಪ್ಪಣಿಗಳು (ಮುಂದುವರೆದಿದೆ)

**51.** ಈ ಕೆಳಕಂಡವುಗಳನ್ನು ಒಳಗೊಂಡ ಸಂಭಾವ್ಯ ಹೊಣೆಗಾರಿಕೆಗಳು: **(ಮೊತ್ತ ರೂ.ಗಳಲ್ಲಿ)**

| ಕ್ರ.ಸಂ. | ಸಂಭಾವ್ಯ ಹೊಣೆಗಾರಿಕೆಗಳು | 2016-2017 | 2015-2016 |
|---|---|---|---|
| 1 | ಕೆಐಎಡಿಬಿ ದಂಡ | 1,20,000 | 1,20,000 |
| 2 | ಆರ್ಥಿಕ ವರ್ಷ 2001-02ರಿಂದ 2003-04ರವರೆಗೆ ಟಿಸಿಎಸ್ ಬಡ್ಡಿ | 16,27,00,399 | 14,67,05,396 |
| 3 | ಕಂಪನಿಯಿಂದ ಬ್ಯಾಂಕ್‌ಗಳಿಗೆ ನೀಡಿದ ಗ್ಯಾರಂಟಿಗಳು/ಪ್ರತಿ ಗ್ಯಾರಂಟಿಗಳು | 36,49,68,381 | 36,37,49,381 |
| 4 | ಅಗ್ನಿ ಅನಾಹುತ ಪಾಲಿಸಿಯ ವಿಮಾ ಹಕ್ಕು - ಬಾಕಿ ಇರುವ ಕೇಸ್‌ಗಳು-ಕೆಳಗಿನ ಟಿಪ್ಪಣಿ (i) | 2,07,73,297 | 2,07,73,297 |
| 5 | ಅಗ್ನಿ ಅನಾಹುತ ಪಾಲಿಸಿಯ ವಿಮಾ ಹಕ್ಕು - ಇತ್ಯರ್ಥವಾಗಿರುವ ಕೇಸ್‌ಗಳು-ಕೆಳಗಿನ ಟಿಪ್ಪಣಿ (i) | 4,88,70,362 | 4,88,70,362 |
| 6 | ವಿಮಾ ಹಕ್ಕುಗಳ ಮೇಲೆ ಬಡ್ಡಿ -ಕೆಳಗಿನ ಟಿಪ್ಪಣಿ (i) | 4,49,09,522 | 4,10,60,060 |
| 7 | ಬಿಎಸಿಸಿ ಬಳಿಯ ಕೆಐಎಡಿಬಿ ಭೂಮಿಯ ಹಕ್ಕು - ಭೂ ಬಳಕೆದಾರರಿಂದ | 30,19,863 | 30,19,863 |
| 8 | ಕಬ್ಬಿಣದ ಅದಿರು ರಫ್ತು ವ್ಯವಹಾರದಲ್ಲಿ ವ್ಯಕ್ತಿಯಿಂದ ಹಕ್ಕು ಕೇಳಿಕೆ (ಬಡ್ಡಿ ಸೇರಿದಂತೆ) | 14,63,83,432 | 14,79,72,245 |
| 9 | ವೆಸ್ಟೇರ್ (ಇಂಡಿಯಾ) ಲಿಮಿಟೆಡ್‌ನಿಂದ ಗಾಳಿಯಂತ್ರದ ಗುತ್ತಿಗೆ ಹಕ್ಕು | 1,19,23,000 | 1,19,23,000 |

i) 2000-01ರಲ್ಲಿ ಬೆಂಗಳೂರಿನ ಕಂಪನಿ ಸ್ವತ್ತಾದ ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್‌ನಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ನಷ್ಟವಾದ ಗ್ರಾಹಕರ ಕ್ಲೇಮುಗಳನ್ನು ಸಂಬಂಧಿಸಿದ ಕೆಲವು ವಿಮಾ ಕಂಪನಿಗಳು ಇತ್ಯರ್ಥಗೊಳಿಸಿದ್ದರೂ, ಅವರು ಕಂಪನಿ ವಿರುದ್ಧ PRINCIPLES OF SUBROGATION ನಡಿ ಅವರ ಕ್ಲೇಮುಗಳ ವಸೂಲಿಗೆ ಅನೇಕ ದಾವೆ ಸಲ್ಲಿಸಿದ್ದಾರೆ. ನಗರ ಸಿವಿಲ್ ಕೋರ್ಟ್‌ನಲ್ಲಿ ಕಂಪನಿಯು ಈ ಕ್ಲೇಮುಗಳ ವಿರುದ್ಧ ತನ್ನ ತಗಾದೆ ಸಲ್ಲಿಸಿದೆ. ಸಿವಿಲ್ ಕೋರ್ಟ್‌ಗಳ ತೀರ್ಪಿನಿಂದ ಅಸಮಾಧಾನಗೊಂಡ ಕಂಪನಿ ಉಚ್ಚ ನ್ಯಾಯಾಲಯಕ್ಕೆ ಮೊರೆ ಹೋಗಿದೆ. ಗೌರವಾನ್ವಿತ ಹೈಕೋರ್ಟ್ 09.03.2009ರ ತನ್ನ ಆದೇಶದಲ್ಲಿ ಎಂಎಸ್ಐಎಲ್ ಮತ್ತು ಸೀಮಾ ಸುಂಕ ಇಲಾಖೆಯವರು ಜಂಟಿಯಾಗಿ ಹೊಣೆಯಾಗಿದ್ದು, ಹಕ್ಕುದಾರರಿಗೆ ಈ ಹಣವನ್ನು ಪಾವತಿ ಮಾಡಬೇಕೆಂದು ತಿಳಿಸಿದೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು 06.11.2009ರ ತನ್ನ ಆರ್ಡರ್‌ನಲ್ಲಿ ಎರಡೂ ಕಡೆಯ ವಾದವನ್ನು ಆಲಿಸಿ, ಸಂಬಂಧಿಸಿದ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳಾಗಿದ್ದು ಪರಸ್ಪರರು ಮಾತನಾಡಿ ವ್ಯಾಜ್ಯವನ್ನು ಸೂಕ್ತವಾಗಿ ಪರಿಹರಿಸಿಕೊಳ್ಳಬೇಕೆಂದು ತಿಳಿಸಿದೆ. ಪುಸ್ತಕಗಳಲ್ಲಿನ ಶೇ.6ರಷ್ಟು ಬಡ್ಡಿ ಬಂಡವಾಳ ಸೇರಿ ರೂ.3,12,59,961/-ರ ಹೊಣೆಗಾರಿಕೆಯ ನಾಲ್ಕನೇ ಒಂದು ಭಾಗವನ್ನು ಕಂಪನಿಯು ಒದಗಿಸಿದೆ ಮತ್ತು ರೂ.9,37,79,884/-ಗಳ ಬಾಕಿ ಮೊತ್ತವನ್ನು ಸಂಭಾವ್ಯ ಹೊಣೆಗಾರಿಕೆಯಲ್ಲಿ ತೋರಿಸಲಾಗಿದೆ. ಕಂಪನಿಯ ವಿಮಾದಾರರು ಮತ್ತು ಸೀಮಾ ಸುಂಕ ಇಲಾಖೆಯಿಂದ ವಸೂಲಾತಿಗೆ ಯಾವುದೇ ಕ್ಲೇಮುಗಳು ನಿರ್ಧರಣೆಯಾಗಿಲ್ಲ. ಬಿಎಸಿಸಿ ಉಗ್ರಾಣದಲ್ಲಿ ಇರಿಸಲಾಗಿರುವ ಸರಕುಗಳಿಗೆ ಕಂಪನಿಯು ತನ್ನ ವಿಮಾ ಕಂಪನಿಯ ಮೂಲಕ ಸೀಮಾ ಸುಂಕ ನಿಯಮಾವಳಿಯ ವ್ಯಾಪಾರಿ ಸುತ್ತೋಲೆಯಂತೆ ಕೆ.ಜಿ.ಯೊಂದಕ್ಕೆ 20 ಡಾಲರ್‌ನಂತೆ ವಿಮೆ ಮಾಡಿಸಿದೆ.

ii) ಬಂಡವಾಳ ಲೆಕ್ಕದಲ್ಲಿ ಕಾರ್ಯಗತಗೊಳಿಸಬೇಕಾಗಿರುವ ಮತ್ತು ಒದಗಿಸಿಲ್ಲದ ಗುತ್ತಿಗೆಗಳ ಅಂದಾಜು ಮೊತ್ತ ರೂ.58,74,025/- (ರೂ.10,05,09,125/-)

iii) ಕಂಪನಿಯು ಆದಾಯ ತೆರಿಗೆ ಇಲಾಖೆ ಆದೇಶದಂತೆ ಆದಾಯ ತೆರಿಗೆ ನಿರ್ಧರಣೆ ವರ್ಷ 2010-11 ಮತ್ತು 2012-13ಕ್ಕೆ ಆದಾಯ ತೆರಿಗೆ ಮರು ಪಾವತಿ ಕೇಳಿದೆ. ತೆರಿಗೆ ಬೇಡಿಕೆಗಳು ಕೆಳಕಂಡಂತಿವೆ :

| ವರ್ಷ | ಮೊತ್ತ (ರೂ.ಗಳಲ್ಲಿ) |
|---|---|
| 2010-11 | 1,69,19,269/- |
| 2012-13 | 26,18,238/- |
| 2014-15 | 1,08,45,920/- |

ಈ ಮೇಲಿನ ಬೇಡಿಕೆಗಾಗಿ ಕಂಪನಿಯು ಮೇಲ್ಮನವಿ ಸಲ್ಲಿಸಿರುವುದರಿಂದ ಅದನ್ನು ಪುಸ್ತಕಗಳಲ್ಲಿ ಪರಿಗಣಿಸಲಾಗಿಲ್ಲ. ಆ ಕಾರಣದಿಂದಾಗಿ ನಿರ್ಧರಣೆ ಆದೇಶದ ದಿನಾಂಕದಿಂದ ಮಾರ್ಚ್ 31, 2017ರವರೆಗೂ ಮೇಲಿನ ಅಂಕಿ ಅಂಶಗಳಲ್ಲಿ ಬಡ್ಡಿ ಸೇರಿರುವುದಿಲ್ಲ.

52. ಎಎಸ್-19''ಗುತ್ತಿಗೆಯ ಲೆಕ್ಕ''ದ ಅನ್ವಯ ಮಾಡಬೇಕಾದ ಪ್ರಕಟಣೆ ಈ ಕೆಳಗಿನ ರೀತಿ ಇದೆ :

ಎಂವಿ ಸೋಲಾರ್ ಸಿಸ್ಟಂ ಪ್ರೈವೇಟ್ ಲಿಮಿಟೆಡ್ ಜೊತೆ ಜಂಟಿ ಸಹಯೋಗದಲ್ಲಿ ಸೋಲಾರ್ ವಾಟರ್ ಹೀಟರ್‌ನ್ನು ಗೃಹೇತರ ಗ್ರಾಹಕರಿಗೆ ಗುತ್ತಿಗೆ ನೀಡಲು ಕಾರ್ಯಾಚರಣೆ ಗುತ್ತಿಗೆ ಒಪ್ಪಂದ ಮಾಡಿಕೊಂಡಿದೆ.

| ಒಟ್ಟಾರೆ ಗುತ್ತಿಗೆ ಪಾವತಿ | 31.3.2017ರಲ್ಲಿದ್ದಂತೆ | 31.3.2016ರಲ್ಲಿದ್ದಂತೆ |
|---|---|---|
| 1. ಒಂದು ವರ್ಷಕ್ಕೆ ಮೀರದಂತೆ | ಇಲ್ಲ | ಇಲ್ಲ |
| 2. ಒಂದು ವರ್ಷ ಮೀರಿ 5 ವರ್ಷದೊಳಗೆ | ರೂ.43,770/- | ರೂ.43,770/- |
| 3. ಐದು ವರ್ಷ ಮೀರಿ | ಇಲ್ಲ | ಇಲ್ಲ |

53. ಎಎಸ್-18 ಲೆಕ್ಕಾಚಾರ ಗುಣಮಟ್ಟದ ರೀತ್ಯ ಸಂಬಂಧಪಟ್ಟ ಕಂಪನಿಯ ಪ್ರಕಟಣೆಗಳು. ಕಂಪನಿಯು ರಾಜ್ಯದ ಅಧೀನ ಉದ್ದಿಮೆಯಾಗಿದ್ದು ಪ್ರಮುಖ ಕಾರ್ಯನಿರ್ವಾಹಕ ಸಿಬ್ಬಂದಿಯ ಅಂದರೆ ಈ ಕೆಳಕಂಡಂತೆ ನಿರ್ದೇಶಕರ ಕುರಿತಂತೆ ಹೊರತುಪಡಿಸಿ ಬೇರೆ ಯಾವುದೇ ಸಂಬಂಧಪಟ್ಟ ವ್ಯಕ್ತಿಗಳ ಪ್ರಕಟಣೆಗಳಿಲ್ಲ.

ವ್ಯವಸ್ಥಾಪಕ ನಿರ್ದೇಶಕರಿಗೆ ಸಂಭಾವನೆ

| ವಿವರ | 2016-17 | 2015-16 |
|---|---|---|
| ವೇತನ ಮತ್ತು ಭತ್ಯೆಗಳು | ರೂ.16,22,939/- | ರೂ.10,97,094/- |
| ವೈದ್ಯಕೀಯ ವೆಚ್ಚಗಳು | ರೂ.3,85,633/- | ರೂ.5,61,280/- |

54. 8ನೇ ನವೆಂಬರ್, 2016 ರಿಂದ 30ನೇ ಡಿಸೆಂಬರ್ 2016ರವರೆಗಿನ ಅವಧಿಯಲ್ಲಿ ಹೊಂದಿದ್ದ ಮತ್ತು ವ್ಯವಹರಿಸಿದ ನಿರ್ದಿಷ್ಟವಾದ ಬ್ಯಾಂಕ್ ನೋಟುಗಳ (ಎಸ್‌ಬಿಎನ್) ವಿವರ

| ವಿವರ | ಎಸ್‌ಬಿಎನ್‌ಗಳು ರೂ.ಗಳಲ್ಲಿ | ಇತರೆ ಡಿನಾಮಿನೇಶನ್ ನೋಟುಗಳು ರೂ.ಗಳಲ್ಲಿ | ಒಟ್ಟು ರೂ.ಗಳಲ್ಲಿ |
|---|---|---|---|
| 08.11.2016ರಂದು ಕೈಯಲ್ಲಿದ್ದ ಅಖೈರು ನಗದು | 4,00,04,500/- | 68,290/- | 40,072,790/- |
| (+) ಅನುಮತಿಸಲಾದ ಸ್ವೀಕಾರಗಳು | - | 1,78,27,12,568/- | 1,78,27,12,568/- |
| (-) ಅನುಮತಿಸಲಾದ ಪಾವತಿಗಳು | - | - | - |
| (-) ಬ್ಯಾಂಕುಗಳಲ್ಲಿ ಸಂದಾಯ ಮಾಡಿದ್ದ ಮೊತ್ತ | 4,00,04,500/- | 1,75,03,03,791/- | 1,79,03,08,291/- |
| 30.12.2016ರಂದು ಕೈಯಲ್ಲಿದ್ದ ಅಖೈರು ನಗದು | - | 3,24,77,067/- | 3,24,77,067/- |

55. 31.03.2017ಕ್ಕೆ ಕೊನೆಗೊಂಡ ವರ್ಷಕ್ಕೆ ವಿಭಾಗದ ಮಾಹಿತಿ ಬಗ್ಗೆ ಎಎಸ್-17ರ ಅನುಸಾರ ಘೋಷಣೆಗಳನ್ನು ಸೇರಿಸಿದೆ.

ವಿಭಾಗಗಳಿಗೆ ನೇರವಾಗಿ ಅನ್ವಯಿಸತಕ್ಕ ಆದಾಯ ಮತ್ತು ಖರ್ಚುಗಳನ್ನು ಪ್ರತಿಯೊಂದು ವರದಿ ಮಾಡಬಹುದಾದ ವಿಭಾಗದ ಅಡಿಯಲ್ಲಿ ತಿಳಿಸಿದೆ. ಪ್ರತಿಯೊಂದು ವರದಿ ಮಾಡುವ ವಿಭಾಗಕ್ಕೆ ನೇರವಾಗಿ ಅನ್ವಯಿಸಲಾಗದ ಖರ್ಚುಗಳನ್ನು ವಿಭಾಗದ ಒಳಪಟ್ಟ ಆದಾಯಗಳು ಮತ್ತು ಮಾನವ ಶಕ್ತಿ ಪರಿಶ್ರಮದ ಆಧಾರದ ಮೇಲೆ ಹಂಚಿಕೆ ಮಾಡಿದೆ. ವಿಭಾಗಗಳಿಗೆ ಅನ್ವಯಿಸಲಾಗದ ಅಥವಾ ಹಂಚಿಕೆ ಮಾಡಲಾಗದ ಇತರೆ ಎಲ್ಲಾ ಖರ್ಚುಗಳನ್ನು 'ಇತರೆ' ಶೀರ್ಷಿಕೆ ಅಡಿ ತಿಳಿಸಲಾಗಿದೆ.

ವಿಭಾಗಗಳಿಗೆ ನೇರವಾಗಿ ಅನ್ವಯಿಸಬಹುದಾದ ಅಥವಾ ಹಂಚಿಕೆ ಮಾಡಬಹುದಾದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಪ್ರತಿಯೊಂದು ತಿಳಿಸಲ್ಪಡುವ ವಿಭಾಗದ ಅಡಿಯಲ್ಲಿ ವಿವರಿಸಿದೆ.ಇನ್ನುಳಿದ ಎಲ್ಲಾ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು 'ಇತರೆ' ಶೀರ್ಷಿಕೆ ಅಡಿ ತಿಳಿಸಲಾಗಿದೆ.

ಟಿಪ್ಪಣಿಗಳು 1ರಿಂದ 55ಕ್ಕೆ ಸಹಿ

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**

| | | | | |
|---|---|---|---|---|
| ಸಹಿ/- | ಸಹಿ/- | ಸಹಿ/- | ಸಹಿ/- | ಸಮ ದಿನಾಂಕದ ನಮ್ಮ ವರದಿಯ ಪ್ರಕಾರ |
| ಎ.ಎಂ. ಚಂದ್ರಪ್ಪ | ಶ್ರೀದೇವಿ ಬಿ.ಎಸ್. | ಡಾ. ಜಿ.ಸಿ. ಪ್ರಕಾಶ್ | ಹಂಪನ್‌ಗೌಡ ಬಾದರ್ಲಿ | ಮೆ॥ ಪಿ. ಚಂದ್ರಶೇಖರ್ |
| ಮುಖ್ಯ ಹಣಕಾಸು ಅಧಿಕಾರಿ | ಕಂಪನಿ ಕಾರ್ಯದರ್ಶಿ | ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು | ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ |

ಸಂಸ್ಥೆಯ ನೋಂದಣಿ ಸಂಖ್ಯೆ : 000580ಎಸ್/ಎಸ್200066
ಸಹಿ/-
ಡಿ. ಮಣಿಕುಮಾರ್
ಪಾಲುದಾರರು
ಸದಸ್ಯತ್ವ ಸಂಖ್ಯೆ 212544

ಸ್ಥಳ: ಬೆಂಗಳೂರು
ದಿನಾಂಕ : 07.08.2017

**ಲೆಕ್ಕ ನಿರ್ವಹಣೆಯ ಗುಣಮಟ್ಟ 17ರ ಅನುಸಾರವಾಗಿರುವ ಘೋಷಣೆ**

**ಉಲ್ಲೇಖ : ಟಿಪ್ಪಣಿ ಸಂಖ್ಯೆ 55**

**31ನೇ ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ವಿಭಾಗೀಯ ಮಾಹಿತಿ**

(ರೂ.ಗಳಲ್ಲಿ)

| | | ಕಾಗದ | ಪಾನೀಯ | ಚಿಟ್ ಫಂಡ್ಸ್ | ಇತರೆ | ಒಟ್ಟು |
|---|---|---|---|---|---|---|
| 1 | ಆದಾಯ | 357235081 | 13548463243 | 183517561 | 181756137 | 14270972023 |
| | | (216443756) | (12639971143) | (178957254) | (163678954) | (13199051107) |
| 2 | ವಿಭಾಗೀಯ ಫಲಿತಾಂಶ | 16370557 | 593167054 | 76132178 | -110348118 | 575321671 |
| | | -(14937526) | (601168354) | (82386581) | -(109355644) | (559261764) |
| 3 | ಹಣಕಾಸಿನ ವೆಚ್ಚಗಳು | 264656 | 1063520 | 417971 | 3593883 | 5334691 |
| | | (278907) | (67011) | (498854) | (17758460) | (19211876) |
| 4 | ತೆರಿಗೆಗೆ ಮುಂಚಿನ ಲಾಭ | 16105901 | 592103534 | 75714207 | -113942001 | 569986980 |
| | | -(15216433) | (600498244) | (81887727) | -(127114104) | (540049888) |
| 5 | ವರ್ಷದ ತೆರಿಗೆ | | | | 197880370 | 197880370 |
| | | | | | (192322439) | (192322439) |
| 6 | ಮುಂದೂಡಿದ ತೆರಿಗೆ | | | | 3747661 | 3747661 |
| | | | | | -(16721090) | -(16721090) |
| 7 | ತೆರಿಗೆಯ ನಂತರದ ಲಾಭ | 16105901 | 592103534 | 75714207 | -317553906 | 368358949 |
| | | -(15216433) | (600498244) | (81887727) | -(302715453) | (364448538) |
| **ಇತರೆ ಮಾಹಿತಿ :** | | | | | | |
| | ವಿಭಾಗೀಯ ಆಸ್ತಿಗಳು | 568509571 | 1246168424 | 2190516032 | 2741220663 | 6746414690 |
| | | (356313914) | (782872177) | (2171013673) | (2429489548) | (5739689311) |
| | ವಿಭಾಗೀಯ ಹೊಣೆಗಾರಿಕೆಗಳು | 263124168 | 87175465 | 1700689342 | 856257854 | 2907246829 |
| | | (69126749) | (73008492) | (1681241133) | (1092013665) | (2915390039) |
| | ಬಂಡವಾಳ ವೆಚ್ಚ | 397249 | 46828138 | 2500237 | 11913931 | 61639555 |
| | | (1100324) | (872179) | (1313595) | (5460915) | (8747013) |
| | ಸವಕಳಿ | 901932 | 4512584 | 375234 | 22731718 | 28521468 |
| | | (1591143) | (20681310) | (3732323) | (12232689) | (38237464) |

**ಸೂಚನೆ :**

1. ವರದಿ ಮಾಡಲಾದ ಪ್ರತಿಯೊಂದು ವಿಭಾಗಗಳಲ್ಲಿ ಸೇರಿಸಲಾಗಿರುವ ಉತ್ಪನ್ನಗಳು ಕೆಳಗಿನಂತಿವೆ:
   i) ಕಾಗದ ವಿಭಾಗವು ನೋಟ್‌ಬುಕ್ ಮತ್ತು ಲೇಖನ ಸಾಮಗ್ರಿಗಳನ್ನು ಒಳಗೊಂಡಿದೆ.
   ii) ಪಾನೀಯ ವಿಭಾಗವು ಮದ್ಯ ಮಾರಾಟವನ್ನು ಒಳಗೊಂಡಿದೆ.
   iii) ಚಿಟ್ ಫಂಡ್ ವಿಭಾಗವು ಚಿಟ್‌ಫಂಡ್ ಕಾರ್ಯಾಚರಣೆಯನ್ನು ಒಳಗೊಂಡಿದೆ.
   iv) ಇತರೆಯಲ್ಲಿ ಹೈರ್ ಪರ್ಚೇಸ್, ಗ್ರಾಹಕ ಮತ್ತು ಕೈಗಾರಿಕಾ ಉತ್ಪನ್ನಗಳು, ಬಾಡಿಗೆ ಆದಾಯ, ಬಿಎಸಿಸಿ, ರಫ್ತು, ಫಾರ್ಮಸ್ಯೂಟಿಕಲ್ ಮತ್ತು ಪ್ರವಾಸ ಇತ್ಯಾದಿಗಳು ಸೇರಿವೆ.
2. ಮೇಲಿನ ವ್ಯವಹಾರ ವಿಭಾಗಗಳಿಗೆ ಸಂಬಂಧಿಸಿರುವ ವಿಭಾಗೀಯ ಆದಾಯವು ಮಾರಾಟ, ಸೇವೆಗಳಿಂದ ಬಂದ ಆದಾಯ ಹಾಗೂ ಇತರೆ ಸಂಬಂಧಿತ ಆದಾಯವನ್ನು ಪ್ರತಿನಿಧಿಸುತ್ತದೆ.

ಫಾರಂ ಸಂಖ್ಯೆ ಎಂ ಜಿ ಟಿ– 11
ಪ್ರಾಕ್ಸಿ ಫಾರಂ

(ಕಂಪನಿಗಳ ಕಾಯ್ದೆ 2013ರ ಪ್ರಕರಣ 105 (6) ಮತ್ತು ಕಂಪನಿಗಳ (ಆಡಳಿತ ಮಂಡಳಿ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 19(3)ರ ಅನ್ವಯ)

ಸಿಐಎನ್: U85110KA1966SGC001612
ಕಂಪನಿಯ ಹೆಸರು : ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ನೋಂದಾಯಿತ ಕಚೇರಿ: 'ಎಂಎಸ್‌ಐಎಲ್ ಹೌಸ್' ನಂ.36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560 052
ಸದಸ್ಯನ (ರ) ಹೆಸರು :
ನೋಂದಾಯಿತ ವಿಳಾಸ:
ಇ–ಮೇಲ್ ಐಡಿ :
ಫೋಲಿಯೋ ಸಂ/ಕ್ಲೈಂಟ್ ಐಡಿ:
ಡಿಪಿ ಐಡಿ :

ನಾನು/ನಾವು.................................ಸದಸ್ಯರಾಗಿದ್ದು...........................ಷೇರುಗಳನ್ನು ಹೊಂದಿದ್ದು, ಈ ಮೂಲಕ

1. ಹೆಸರು: ........................................................
ವಿಳಾಸ: ........................................................
ಇ–ಮೇಲ್ ಐಡಿ: ........................................................
ಸಹಿ : ........................................................

ಅಥವಾ ಇವರಿಲ್ಲದಿದ್ದರೆ

2. ಹೆಸರು: ........................................................
ವಿಳಾಸ: ........................................................
ಇ–ಮೇಲ್ ಐಡಿ: ........................................................
ಸಹಿ : ........................................................

ಇವರನ್ನು ಎಂಎಸ್‌ಐಎಲ್ ಹೌಸ್, ನಂ.36, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು–560 052 ಇಲ್ಲಿರುವ ಕಂಪನಿಯ ನೋಂದಾಯಿತ ಕಚೇರಿಯಲ್ಲಿ 25ನೇ ಸೆಪ್ಟೆಂಬರ್ 2017ರ ಸೋಮವಾರ ಬೆಳಿಗ್ಗೆ 10.30ಗಂಟೆಗೆ ಮತ್ತು ಕೆಳಗೆ ತಿಳಿಸಿರುವಂತೆ ಅಂತಹ ನಿರ್ಣಯಗಳ ಸಂಬಂಧ ಯಾವುದೇ ಮುಂದೂಡಿದ ದಿನಾಂಕ ಮತ್ತು ಸಮಯದಲ್ಲಿ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ 51ನೇ ವಾರ್ಷಿಕ ಮಹಾಸಭೆಗೆ ನನ್ನ / ನಮ್ಮ ಪರವಾಗಿ ಹಾಜರಾಗಲು ಮತ್ತು ನನಗೆ/ನಮಗೆ ಮತ ಹಾಕಲು (ಚುನಾವಣೆಯಲ್ಲಿ) ನನ್ನ / ನಮ್ಮ ಪ್ರಾಕ್ಸಿಯನ್ನಾಗಿ ನೇಮಕ ಮಾಡಿದ್ದೇನೆ/ಮಾಡಿದ್ದೇವೆ.

ನಿರ್ಣಯ ಸಂಖ್ಯೆ: 1 ರಿಂದ 3
00.00.20....... ಈ ದಿನಾಂಕದಂದು ಸಹಿ ಮಾಡಿದೆ
ಷೇರುದಾರರ ಸಹಿ

ರೆವಿನ್ಯೂ
ಸ್ಟಾಂಪ್ ಲಗತ್ತಿಸಿ

ಪ್ರಾಕ್ಸಿದಾರನ (ರ) ಸಹಿ

ಸೂಚನೆ: ಸದರಿ ಪ್ರಾಕ್ಸಿ ಫಾರಂ ಅನ್ನು ಅದು ಜಾರಿಗೆ ಬರುವಂತೆ ನೋಡಿಕೊಳ್ಳಲು ಕ್ರಮವಾಗಿ ಭರ್ತಿ ಮಾಡಿ ಎಜಿಎಂ ಪ್ರಾರಂಭವಾಗುವುದಕ್ಕೆ 48 ಗಂಟೆಗಳಿಗೆ ಮುಂಚೆ ಕಂಪನಿಯ ನೋಂದಾಯಿತ ಕಚೇರಿಗೆ ಸಲ್ಲಿಸಬೇಕು.

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

**ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ,**
**ಬೆಂಗಳೂರು – 560 052.**

### ಹಾಜರಾತಿ ಚೀಟಿ

(ದಿನಾಂಕ 25ನೇ ಸೆಪ್ಟೆಂಬರ್ 2017ರ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ನಡೆಯಲಿರುವ ಕಂಪನಿಯ 51ನೇ ಮಹಾ ಸಭೆ)

ಷೇರುದಾರರ ಹೆಸರು: .......................................................

ನೋಂದಣಿ ಪೋಲಿಯೋ ಸಂಖ್ಯೆ : .......................................................


ಹೊಂದಿರುವ ಷೇರುಗಳ ಸಂಖ್ಯೆ : .......................................................

ಸೂಚನೆ : ಷೇರುದಾರರು/ ಪ್ರಾಕ್ಸಿಯು ಕ್ರಮವಾಗಿ ಭರ್ತಿ ಮಾಡಿದ ಹಾಜರಾತಿ ಚೀಟಿಯನ್ನು ಸಭೆ ನಡೆಯುವ ಸ್ಥಳದಲ್ಲಿ ಕೊಡತಕ್ಕದ್ದು.

ಷೇರುದಾರ / ಪ್ರಾಕ್ಸಿದಾರನ ಸಹಿ

ಎಂಎಸ್‌ಐಎಲ್‌ನ ನೋಂದಾಯಿತ ಕಚೇರಿ, ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು–560 052 ಇಲ್ಲಿ ದಿನಾಂಕ 25ನೇ ಸೆಪ್ಟೆಂಬರ್ 2017ರಂದು ಬೆಳಿಗ್ಗೆ 11.00 ಗಂಟೆಗೆ ನಡೆಯಲಿರುವ ಕಂಪನಿಯ 51ನೇ ಮಹಾ ಸಭೆ

ಮಾರ್ಗದ ನಕ್ಷೆ




ಮಂಡಳಿಯ ಆದೇಶದ ಮೇರೆಗೆ
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ
ಸಹಿ/–
**ಶ್ರೀದೇವಿ ಬಿ.ಎನ್.**
ಕಂಪನಿ ಕಾರ್ಯದರ್ಶಿ

MSIL
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ಎಂಎಸ್‌ಐಎಲ್ ಹೌಸ್, # 36 ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು - 560 052
ದೂರವಾಣಿ : 080 - 2226 4021 - 25 ಫ್ಯಾಕ್ಸ್ : 080 - 2225 3311
ಇ-ಮೇಲ್ : msil@msilonline.com ವೆಬ್‌ಸೈಟ್ : www.msilonline.com